ಕುವೆಂಪು ಗದ್ಯದ ತಾತ್ತ್ವಿಕತೆ : ವಿವೇಕಾನಂದರ ಚಿಂತನೆ

ಒಂದು ಅನುಸಂಧಾನಾತ್ಮಕ ಅಧ್ಯಯನ

ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಎಂ.ಫಿಲ್ ಪದವಿಗಾಗಿ
ಸಾದರಪಡಿಸಿದ ಸಂಪ್ರಬಂಧ

ಸಂಶೋಧಕರು
ಶ್ರೀಮತಿ ಶಾಂತಲಾ ಉಮೇಶ್

ಮಾರ್ಗದರ್ಶಕರು
ಡಾ। ಎಂ. ಪ್ರಭಾಕರ ಜೋಶಿ

೨೦೦೭-೨೦೦೮

ಕರ್ನಾಟಕ ಥಿಯೋಲಾಜಿಕಲ್ ಸಂಶೋಧಕನ ಕೇಂದ್ರ
ಬಲ್ಮಠ, ಮಂಗಳೂರು - ೫೭೫೦೦೧.

ಕುವೆಂಪು ಗದ್ಯದ ತಾತ್ತ್ವಿಕತೆ : ವಿವೇಕಾನಂದರ ಚಿಂತನೆ

ಒಂದು ಅನುಸಂಧಾನಾತ್ಮಕ ಅಧ್ಯಯನ

ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಎಂ.ಫಿಲ್ ಪದವಿಗಾಗಿ
ಸಾದರಪಡಿಸಿದ ಸಂಪ್ರಬಂಧ

ಸಂಶೋಧಕರು
ಶ್ರೀಮತಿ ಶಾಂತಲಾ ಉಮೇಶ್

ಮಾರ್ಗದರ್ಶಕರು
ಡಾ। ಎಂ. ಪ್ರಭಾಕರ ಜೋಶಿ

೨೦೦೭-೨೦೦೮

ಕರ್ನಾಟಕ ಥಿಯೋಲಾಜಿಕಲ್ ಸಂಶೋಧಕನ ಕೇಂದ್ರ
ಬಲ್ಮಠ, ಮಂಗಳೂರು – ೫೭೫೦೦೧.

ಯೋಗ್ಯತಾ ಪತ್ರ

ಶ್ರೀಮತಿ ಶಾಂತಲಾ ಉಮೇಶ್ ಅವರು ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ **"ಕುವೆಂಪು ಗದ್ಯದ ತಾತ್ತ್ವಿಕತೆ : ವಿವೇಕಾನಂದರ ಚಿಂತನೆ – ಒಂದು ಅನುಸಂಧಾನಾತ್ಮಕ ಅಧ್ಯಯನ"** ಎಂಬ ಶೀರ್ಷಿಕೆಯ ಈ ಸಂಪ್ರಬಂಧವನ್ನು ಎಂ.ಫಿಲ್. ಪದವಿ ಪ್ರಾಪ್ತಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕೆಂದು ಸಿದ್ಧಪಡಿಸಿದ್ದಾರೆ. ಈ ಸಂಪ್ರಬಂಧವು ಸಂಶೋಧಕರ ಸ್ವಂತ ಪರಿಶ್ರಮ, ವಿಶ್ಲೇಷಣೆ, ಅಭಿಪ್ರಾಯ ಸಂಗ್ರಹ ಮತ್ತು ಸಂಶೋಧನೆಯ ಫಲಸ್ವರೂಪವಾಗಿದೆ. ಇವರು ಸಂಪ್ರಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಲಿ ಅಥವಾ ಇನ್ನಿತರ ಉದ್ದೇಶಗಳಿಗಾಗಿಯಾಗಲಿ ಬಳಸಿಕೊಂಡಿಲ್ಲ.

ಡಾ. ಎಂ. ಪ್ರಭಾಕರ ಜೋಶಿ

ಸಂಶೋಧನ ಮಾರ್ಗದರ್ಶಕರು

ಕರ್ನಾಟಕ ತಿಯೋಲಾಜಿಕಲ್ ಸಂಶೋಧನ ಕೇಂದ್ರ,

ಬಲ್ಮಠ, ಮಂಗಳೂರು.

ಪ್ರಮಾಣ ಪತ್ರ

ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಎಂ.ಫಿಲ್. ಪದವಿಗಾಗಿ ಸಾದರಪಡಿಸಿದ **"ಕುವೆಂಪು ಗದ್ಯದ ತಾತ್ವಿಕತೆ : ವಿವೇಕಾನಂದರ ಚಿಂತನೆ, ಒಂದು ಅನುಸಂಧಾನಾತ್ಮಕ ಅಧ್ಯಯನ"** ಶೀರ್ಷಿಕೆಯ ಈ ಸಂಪ್ರಬಂಧವು ನನ್ನ ಸ್ವತಂತ್ರ ಕೃತಿಯಾಗಿದ್ದು ವಿಶ್ಲೇಷಣೆ ಮತ್ತು ಅಧ್ಯಯನದ ಫಲೋದಯವಾಗಿದೆ. ಮಂಗಳೂರಿನ ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರದಲ್ಲಿ **ಡಾ। ಎಂ. ಪ್ರಭಾಕರ ಜೋಶಿ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ ಈ ಸಂಪ್ರಬಂಧವನ್ನು ಬೇರಾವುದೇ ಪದವಿ, ಡಿಪ್ಲೋಮಾ ಅಥವಾ ತತ್ಸಮಾನ ಉಪಾಧಿಗಳ ಪ್ರಾಪ್ತಿಗಾಗಿ ಅಥವಾ ಆರ್ಥಿಕ ಲಾಭಕ್ಕಾಗಿ ಇಡಿಯಾಗಿ ಅಥವಾ ಬಿಡಿಯಾಗಿ ಬಳಸಿಕೊಂಡಿಲ್ಲವೆಂದು ನಾನು ಈ ಮೂಲಕ ದೃಢಪಡಿಸುತ್ತೇನೆ.

Shanthala

ಶ್ರೀಮತಿ ಶಾಂತಲಾ ಉಮೇಶ್

ಸಂಶೋಧಕರು

ಕರ್ನಾಟಕ ತಿಯೋಲಾಜಿಕಲ್ ಸಂಶೋಧನ ಕೇಂದ್ರ

ಬಲ್ಮಠ, ಮಂಗಳೂರು.

ಕುವೆಂಪು ಗದ್ಯದ ತಾತ್ತ್ವಿಕತೆ : ವಿವೇಕಾನಂದರ ಚಿಂತನೆ

ಒಂದು ಅನುಸಂಧಾನಾತ್ಮಕ ಅಧ್ಯಯನ

ಅಧ್ಯಾಯ – ೧ : ಸಮೀಕ್ಷೆ

ಪ್ರವೇಶ

ಕುವೆಂಪು ಒಬ್ಬ ದಾರ್ಶನಿಕ ಬರಹಗಾರರು. ಅಪ್ಪಟ ಕಲೆಗಾರರು ಜೊತೆಗೆ ತಾತ್ತ್ವಿಕ ಚಿಂತಕರು. ಆತ್ಮಾನುಭೂತಿಯೇ ಅವರ ಸರ್ವ ಸಾಧನೆ ವ್ಯವಹಾರಗಳ ಪರಮ ಗುರಿಯಾಗಿರುವುದು. ವಿಶ್ವ ಚೇತನವೇ ಸಾಕಾರಗೊಂಡಂತಿದ್ದ ಕುವೆಂಪು ಅವರದ್ದು ಬಹುಮುಖೀ ವಿರಾಟ್ ಪ್ರತಿಭೆ. ಅವರ ಸಾಹಿತ್ಯ ಕೃತಿಗಳು ಭಾರತೀಯ ಸಂಸ್ಕೃತಿ ವಿಕಸನಕ್ಕೆ ಸ್ಫೂರ್ತಿ ಶಕ್ತಿಗಳಾಗಿ, ಸದಾ ಜನಮನವನ್ನು ಬೆಳಗುತ್ತಿವೆ. ಸಾಹಿತ್ಯ ಕ್ಷೇತ್ರದ ವಿವಿಧ ಪ್ರಕಾರಗಳಲ್ಲಿ ಅಭೂತಪೂರ್ವ ಸಿದ್ಧಿ ಪಡೆದಿರುವ 'ಜಗದಕವಿ, ಯುಗದ ಕವಿ ಹಾಗೂ ವಿಶಿಷ್ಟ ಕವಿ ಕುವೆಂಪು. ಅಧ್ಯಾತ್ಮ ಸಾಧನೆ, ಅವರ ಬದುಕಿನ ಹಾಗೂ ಅವರ ಎಲ್ಲ ವ್ಯವಹಾರಗಳ ಗುರಿ. ವೈಚಾರಿಕ ಪ್ರಜ್ಞೆ, ವೈಜ್ಞಾನಿಕ ಮನೋಧರ್ಮ, ಸಾಮಾಜಿಕ ನ್ಯಾಯ, ರಾಜಶಾಹಿ, ಪುರೋಹಿತಶಾಹಿ ನಿರ್ಮೂಲನ, ಮೌಢ್ಯವಿನಾಶ, ಸರ್ವಸಮಾನತೆ, ಸಮಾನತಾ ಪರವಾದ ಕಳಕಳಿ, ನಿಸರ್ಗಾರಾಧನೆ, ಕೃಷಿ ಹಾಗೂ ಪರಿಸರ ಪರವಾದ ಕಾಳಜಿ, ಅಧ್ಯಾತ್ಮ ಮೂಲದ ಪ್ರೇಮ, ವ್ಯಾಪಕ, ಲೋಕಾನುಭವ, ವ್ಯಷ್ಟಿ ಹಾಗೂ ಸಮಷ್ಟಿ ಸ್ವಾತಂತ್ರ್ಯ, ವಿಶ್ವಪ್ರಜ್ಞೆ, ಮನುಕುಲದ ಸರ್ವಕ್ಷೇಮ ಚಿಂತನೆ, ದಾರ್ಶನಿಕತೆ ಇವು ಕುವೆಂಪು ಸಾಹಿತ್ಯದಲ್ಲಿ ಹಾಸುಹೊಕ್ಕಾಗಿರುವ ಚಿಂತನೆಗಳು, ಸಂಗತಿಗಳು ಹಾಗೂ ಶಕ್ತಿ ವಿಶೇಷಗಳು. ವರ್ತಮಾನದ ನಿತ್ಯವನ್ನೂ, ತ್ರಿಕಾಲದ ಭವ್ಯವನ್ನೂ, ಭೂಮವನ್ನೂ, ಅಲ್ಪವನ್ನೂ ಒಂದು ಪೂರ್ಣ ದೃಷ್ಟಿಯಲ್ಲಿ ಒಳಗೊಳ್ಳಲು ಪ್ರಯತ್ನಿಸಿದ ತಪಸ್ವಿ ಕುವೆಂಪು. (ಕುವೆಂಪು – ಒಂದು ಪುನರನ್ವೇಷಣೆ ಪು.–೨೮)

ಕುವೆಂಪು ಗದ್ಯ ಬರಹಗಳಲ್ಲಿ ನಿತ್ಯದ ಸತ್ಯಗಳು ಹಾಗೂ ದೈನಿಕ ವಿವರಗಳ ದಟ್ಟತೆ ಇರುವುದು. ಭಾವಗೀತೆಯೊಳಗಡೆ ಅಂತರ್ಮುಖತೆಯನ್ನು ಗದ್ಯ ಬರವಣಿಗೆಯಲ್ಲಿ ಬಹಿರ್ಮುಖತೆಯನ್ನು ಸಾಧಿಸಿದ ಸಾಧಕ. ಕುವೆಂಪು ಅವರ ಈ ಶೈಲಿ ಭವ್ಯ ನಿತ್ಯಗಳ ಸಂಗಮಕ್ಕೆ ಎಡೆಮಾಡಿಕೊಡುವುದು. ಕುವೆಂಪು ಭಾರತೀಯ ಎನ್ನುವ ಕಾರಣಕ್ಕಾಗಿ ಪರಂಪರೆಯ ಎಲ್ಲವನ್ನೂ ಸ್ವೀಕರಿಸುವುದಿಲ್ಲ, ಅಂತೆಯೇ ನಿರಾಕರಿಸುವುದಿಲ್ಲ. ಬದಲಾಗಿ ವರ್ತಮಾನದ ತುರ್ತಿಗೂ, ತ್ರಿಕಾಲಕ್ಕೂ ಪಾರಮಾರ್ಥಿಕಕ್ಕೂ ಸ್ಪಂದಿಸುತ್ತಾರೆ. ಅಂತೆಯೇ ಆಧುನಿಕತೆಯ ಜಾಗೃತ ವಿಮರ್ಶಾ ಪ್ರಜ್ಞೆಯನ್ನು ವಿವೇಕಯುತವಾಗಿ ಮಾನವ ಕಲ್ಯಾಣಕ್ಕಾಗಿ ಬಳಸುತ್ತಾರೆ. ಶ್ರೀ ವಿನೋಬ ಭಾವೆ ಮತ್ತು ಶ್ರೀ ಚತುರ್ವೇದಿಯವರಿಂದ ಸಂತಕವಿಯೆಂಬ ಗೌರವಕ್ಕೆ ಪಾತ್ರರಾದರು. ಈ ರೀತಿ ಕೀರ್ತಿ ಶಿಖರಕ್ಕೇರಿದ ಮಹಾಕವಿ ಕುವೆಂಪು. ತತ್ತ್ವ

ಜ್ಞಾನಿಗಳೂ ಹೌದು. ವಿಶ್ವದ, ಜಗತ್ತಿನ, ನಿಸರ್ಗದ ರಹಸ್ಯವನ್ನು ಭೇದಿಸಿ, ಪ್ರತಿಯೊಂದು ವಸ್ತು ಅಥವಾ ಭಾವನೆಯ ನಿಜಸ್ಥಿತಿಯನ್ನರಿಯುವರು. ಪ್ರಪಂಚದ ಪ್ರಾಚೀನ, ಅರ್ವಾಚೀನ ಕವಿಗಳ, ತತ್ತ್ವಜ್ಞಾನಿಗಳ ಮತ್ತು ನಂತರ ತಪಶ್ಶಕ್ತಿಯೇ ಮೇಳೈಸಿ ಸಾಕಾರಗೊಂಡಿರುವ ಆಧುನಿಕ ಋಷಿ ಕುವೆಂಪು.

೧.೧. ಅಧ್ಯಯನದ ಉದ್ದೇಶ

ಮಲೆನಾಡಿನ ಸಾಮಾಜಿಕ ನೆಲೆಯಿಂದ ಹುಟ್ಟಿ ಬಂದ ವ್ಯಕ್ತಿ ಕುವೆಂಪು. ಅವರಿಗೆ ಕೌಟುಂಬಿಕವಾಗಿ ವಿದ್ಯಾಭ್ಯಾಸದ ಯಾವ ಹಿನ್ನೆಲೆಯು ಇರಲಿಲ್ಲ. ದಲಿತರೊಡನೆ ಆಡಿ ಬೆಳೆದವರು ಕುವೆಂಪು. ಇಂತವನ ಬದುಕಿನಲ್ಲಿ ರಾಷ್ಟ್ರ ಮಟ್ಟಕ್ಕೆ ಏರುವಂತಹ ಶಕ್ತಿ ಹುಟ್ಟಿಕೊಳ್ಳಲು ಕಾರಣ. ಅವರ ಬದುಕಿನಲ್ಲಿ ಮುಖ್ಯವಾಗಿ ಆಧ್ಯಾತ್ಮಿಕ ಆಸಕ್ತಿಗಳು ಕಾಣಿಸಿಕೊಳ್ಳಲು ಕಾರಣ. ಕುವೆಂಪು ಅವರಲ್ಲಿ ಆಧ್ಯಾತ್ಮಿಕ ಸತ್ವ ಮೂಲದಲ್ಲಿಯೇ ಅಡಗಿತ್ತೇ? ಅಥವಾ ವಿಭೂತಿ ಪುರುಷರ ಜೀವನ ವೃತ್ತಾಂತವನ್ನು ಓದಿ ಹೃದ್ಗತ ಮಾಡಿಕೊಳ್ಳುವುದರ ಮೂಲಕ ಆಧ್ಯಾತ್ಮಿಕ ಆಸಕ್ತಿ ಹುಟ್ಟಿಕೊಂಡಿತೆ? ಹೀಗೆ ಆಧ್ಯಾತ್ಮಿಕ ಬಲದ ಜೊತೆಗೆ ವೈಜ್ಞಾನಿಕ ಹಾಗೂ ವೈಚಾರಿಕ ಚಿಂತನೆಯನ್ನು ಕುವೆಂಪು ಅವರಲ್ಲಿ ಹುಟ್ಟುಹಾಕಿದ ಮಹಾನ್ ವ್ಯಕ್ತಿ ಯಾರು? ಇಂತಹ ಮಹಾನ್ ಪುರುಷರ ಯಾವ ಚಿಂತನೆಗಳು ಕುವೆಂಪು ಅವರು ತಮ್ಮ ಬದುಕನ್ನು ರೂಪಿಸಿಕೊಳ್ಳಲು ಅನುಕೂಲವಾಯಿತು. ಇದೆಲ್ಲದರ ಕಡೆಗೆ ಗಮನ ಹರಿಸುವುದೇ ಅಧ್ಯಯನದ ಉದ್ದೇಶ.

ವಿಭೂತಿ ಪುರುಷರಲ್ಲಿ ಒಬ್ಬರಾದ ವಿವೇಕಾನಂದರ ಪ್ರಭಾವ ಕುವೆಂಪು ಮೇಲೆ ಬೀಳಲು ಕಾರಣವೇನು? ಇರುವಂತಹ ಹಲವು ವಿಭೂತಿ ಪುರುಷರಲ್ಲಿ ವಿವೇಕಾನಂದರೇ ಹೆಚ್ಚು ಆಕರ್ಷಿತರಾಗಲು ಕಾರಣ. ಅವರು ಕುವೆಂಪು ಅವರ ಮೇಲೆ ಯಾವ ರೀತಿ ಹಾಗೂ ಯಾಕೆ ಪ್ರಭಾವಿತರಾದರು? ವಿವೇಕಾನಂದರ ವೈಚಾರಿಕತೆಯ ತೀವ್ರತೆ ಕುವೆಂಪು ಅವರಲ್ಲಿ ಹುಟ್ಟುಹಾಕಿದ ಜಾಗೃತಿ ಯಾವುದು. ಈ ರೀತಿಯಿಂದ ಕುವೆಂಪು–ವಿವೇಕಾನಂದರ ನಡುವಿನ ಸಾಮ್ಯತೆಯನ್ನು ಗಮನಿಸುವುದು ಅಧ್ಯಯನದ ಉದ್ದೇಶವಾಗಿದೆ.

೧.೨. ಅಧ್ಯಯನದ ವ್ಯಾಪ್ತಿ

ಕುವೆಂಪು ಅವರ ಅನುಭವ ಶ್ರೇಣಿ ವ್ಯಾಪಕವಾದುದು. ಎಂತಲೇ ಅದು ನಾನಾ ಸಾಹಿತ್ಯ ಪ್ರಕಾರಗಳನ್ನು ಅವರಿಸಿಕೊಂಡಿದೆ. ಮಕ್ಕಳಸಾಹಿತ್ಯ, ಮಹಾಕಾವ್ಯ, ಖಂಡಕಾವ್ಯ, ಭಾವಗೀತ, ನಾಟಕ, ಕಾದಂಬರಿ, ಸಣ್ಣಕತೆ, ಪ್ರಬಂಧ, ವಿಮರ್ಶೆ, ವ್ಯಕ್ತಿಬರಹ ಹೀಗೆ ಸಾಹಿತ್ಯದ ಬಹುತೇಕ ಪ್ರಕಾರಗಳಲ್ಲಿ ಕುವೆಂಪು ಅವರ ಸಾರಸ್ವತ ಕೃಷಿ ನಡೆದಿದೆ. ವಸ್ತು ನಿಷ್ಠ ಅನುಭವಗಳು, ಅಂತೆಯೆ ವ್ಯಕ್ತಿ ನಿಷ್ಠವಾದ ಅನುಭವಗಳು ಅವರಿಂದ ಪ್ರಣೀತವಾಗಿವೆ. ಅನುಭವದಂತೆ ಅನುಭಾವಕ್ಕೂ ಬರವಣಿಗೆ ವ್ಯಾಪಿಸಿರುವುದನ್ನು ಕಾಣುತ್ತೇವೆ.

ಅಧ್ಯಯನದ ಸೀಮಿತ ಮಿತಿಯೊಳಗಡೆ ಅವರ ಗದ್ಯ ಬರಹವನ್ನು ಗಮನಿಸಲಾಗಿದೆ. ಅದರಲ್ಲೂ ಕುವೆಂಪು ವಿವೇಕಾನಂದರನ್ನು ಕುರಿತು ಬರೆದಿರುವ "ಸ್ವಾಮಿ ವಿವೇಕಾನಂದ" ಹಾಗೂ ಕುವೆಂಪು ಅವರ ಆತ್ಮಕಥನವಾದ "ನೆನಪಿನ ದೋಣಿಯಲ್ಲಿ" ಎಂಬ ಎರಡು ಗದ್ಯ ಕೃತಿಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಲಾಗಿದೆ. ಅಧ್ಯಯನಕ್ಕೆ ಪ್ರಮುಖವಾಗಿ ಈ ಎರಡು ಕೃತಿಗಳನ್ನು ಬಳಸಲಾಗಿದೆ. "ಸ್ವಾಮಿ ವಿವೇಕಾನಂದ" ಹಾಗೂ "ನೆನಪಿನ ದೋಣಿಯಲ್ಲಿ" ಅಭಿವ್ಯಕ್ತವಾಗುವ ತಾತ್ತ್ವಿಕ ಚಿಂತನೆಯನ್ನು ಮುಖ್ಯವಾಗಿ ಗಮನಿಸುವುದು. ಅದು ಅಧ್ಯಯನದ ಚೌಕಟ್ಟಾಗಿದೆ. ಇದಕ್ಕೆ ಪೂರಕವಾಗಿ "ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ"ಯ ಸಂಪುಟಗಳನ್ನು ಬಳಸಿಕೊಳ್ಳಲಾಗಿದೆ. ಒಟ್ಟಿನಲ್ಲಿ ನವೋದಯ ಕಾಲಘಟ್ಟದಲ್ಲಿ ಕಾಣಿಸಿಕೊಂಡು ಅತ್ಯಂತ ಎತ್ತರಕ್ಕೆ ಬೆಳೆದು ನಿಂತ ಕವಿ ಕುವೆಂಪು. ಅವರ ಬದುಕಿನಲ್ಲಿ ಪ್ರೇರಕ ಶಕ್ತಿಯಾಗಿರುವವರು ವಿವೇಕಾನಂದರು. ಅವರ ಪ್ರಭಾವದಿಂದ ಕುವೆಂಪು ಅವರಲ್ಲಿ ಗರಿಗೆದರಿದ ತಾತ್ತ್ವಿಕತೆಯನ್ನು ಅಧ್ಯಯನದ ದೃಷ್ಟಿಯಿಂದ ಗಮನಿಸುವುದು ಮುಖ್ಯವಾಗಿದೆ.

೧.೩. ಅಧ್ಯಯನದ ಸ್ವರೂಪ

ಕುವೆಂಪು ಅವರ ಗದ್ಯ ಪ್ರಕಾರದ ಅಧ್ಯಯನದ ಅನುಕೂಲಕ್ಕಾಗಿ ನಾಲ್ಕು ಅಧ್ಯಾಯಗಳಾಗಿ ವಿಭಾಗ ಮಾಡಲಾಗಿದೆ. ಎರಡನೆಯ ಅಧ್ಯಯನದಲ್ಲಿ ನವೋದಯ ಸಂದರ್ಭದಲ್ಲಿರುವ ಸಾಮಾಜಿಕ, ಸಾಂಸ್ಕೃತಿಕ ಒತ್ತಡಗಳ ಸಂದರ್ಭದಲ್ಲಿ ಕಾಣಿಸಿಕೊಂಡವರು ಕುವೆಂಪು. ಆದರಿಂದ ಆ ಕಾಲಘಟ್ಟದಲ್ಲಿ

ಕುವೆಂಪು ಅವರು ಸಮಾಜ ಪರವಾಗಿ ಬೆಳೆದ ಬಗೆಯನ್ನು ವಿವರಿಸುವುದು. ಇಂತಹ ಸಂದರ್ಭದಲ್ಲಿ ಅಧ್ಯಾತ್ಮಿಕ ಚಿಂತಕರಾದ ಸ್ವಾಮಿ ವಿವೇಕಾನಂದರ ಚಿಂತನೆಗಳ ಬಗ್ಗೆ ನೋಟ ಹರಿಸಲಾಗಿದೆ.

ಮುಂದಿನ ಅಧ್ಯಾಯದಲ್ಲಿ ಕುವೆಂಪು ಅವರು ಬರೆದಿರುವ 'ಸ್ವಾಮಿ ವಿವೇಕಾನಂದ' ಎಂಬ ಗದ್ಯ ಬರಹದಲ್ಲಿರುವ ವಿವೇಕಾನಂದರ ಚಿಂತನೆಯ ಸ್ವರೂಪವನ್ನು ಗಮನಿಸಲಾಗಿದೆ. ಅವರ ಆತ್ಮಕಥನವಾದ 'ನೆನಪಿನ ದೋಣಿಯಲ್ಲಿ'ರುವ ತಾತ್ತ್ವಿಕ ಚಿಂತನೆಯನ್ನು ಪರಿಗಣಿಸಲಾಗಿದೆ. ಕೊನೆಯ ಅಧ್ಯಾಯದಲ್ಲಿ ಅಧ್ಯಯನದ ಫಲಿತಗಳನ್ನು ಸಂಗ್ರಹಿಸಲಾಗಿದೆ.

ಅಧ್ಯಾಯ –೨ – ನವೋದಯ ಸಂದರ್ಭ ಮತ್ತು ವಿವೇಕಾನಂದರ ಚಿಂತನೆ

ಪ್ರವೇಶ

ಭಾರತದ ರಾಜಕೀಯ ಇತಿಹಾಸದಲ್ಲಿ ೧೯೨೦ ರಿಂದ ೧೯೫೦ರ ಕಾಲಾವಧಿಯನ್ನು 'ಗಾಂಧೀಯುಗ'ವೆಂದು ಕರೆಯುತ್ತಾರೆ. ಅಂತೆಯೇ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಈ ಕಾಲವನ್ನು 'ನವೋದಯ ಸಾಹಿತ್ಯ'ವೆಂದು ಕರೆಯುವರು. ಆ ಕಾಲಘಟ್ಟವನ್ನು 'ರಮ್ಯ' 'ರೊಮ್ಯಾಂಟಿಕ್', 'ಆಧುನಿಕ', 'ಸ್ವಾತಂತ್ರ್ಯಪೂರ್ವ', 'ಉತ್ಸಾಹಯುಗ'ವೆಂದೆಲ್ಲ ಗುರುತಿಸಿರುವರು. ಅಭ್ಯಾಸದ ಅನುಕೂಲಕ್ಕಾಗಿಯಾದರೂ ಈ ರೀತಿ ಗುರುತಿಸಿಕೊಳ್ಳುವುದು ಅನಿವಾರ್ಯ. ಇದರಿಂದ ಆಯಾ ಅವಧಿಯ ಸಾಹಿತ್ಯವೆಲ್ಲ ಏಕರೂಪಿಯೂ ಏಕಮುಖಿಯೂ ಆಗಿದೆಯೆಂಬ ಅರ್ಥವಲ್ಲ. ಈ ಪದಗಳನ್ನು ಯಾರು ಮತ್ತು ಯಾಕೆ ಬಳಸಿದರು ಎಂಬ ಪ್ರಶ್ನೆಯನ್ನು ಎತ್ತಿಕೊಂಡು ಅನೇಕ ಮಂದಿ ಲೇಖಕರು ಈಗಾಗಲೇ ಚರ್ಚೆ ಮಾಡಿರುವರು. ನವೋದಯದ ನಂತರದ ಸಾಹಿತ್ಯ ಚಳವಳಿಗಳೆಲ್ಲ ಒಂದಲ್ಲ ಒಂದು ಕಾರಣಕ್ಕಾಗಿ ನವೋದಯದ ನಿಲುವುಗಳನ್ನು ವಿರೋಧಿಸಿಕೊಂಡು ಬಂದಿವೆ. ನಂತರದಲ್ಲಿ ನವೋದಯ ಸಾಹಿತ್ಯದ ಸಂಕೀರ್ಣತೆ, ಬಹುಮುಖತೆ ಹಾಗೂ ವೈಶಿಷ್ಟ್ಯವನ್ನು ವಿವರಿಸುವ ವಿಮರ್ಶೆಗಳನ್ನು ಕಾಣುವೆವು. ಇವೆಲ್ಲದರ ಹಿಂದಿನ ಉದ್ದೇಶ ನವವಸಾಹತುಶಾಹಿಯ ಹೊತ್ತಿನಲ್ಲಿ ನಮ್ಮ ಹಿರಿಯರು ವಸಾಹತುಶಾಹಿಗೆ ಪ್ರತಿಕ್ರಿಯಿಸಿದ ಬಗ್ಗೆ ಹಾಗೂ ತಮ್ಮ ಅಸ್ಮಿತೆಯನ್ನು ಹೇಗೆ ಕಾಪಾಡಿಕೊಂಡರು ಎಂಬ ತಿಳಿವಳಿಕೆಯನ್ನು ಹೊಂದುವುದಾಗಿದೆ.

೨.೧. ನವೋದಯ ಸಂದರ್ಭ

ನವೋದಯ ಸಾಹಿತ್ಯದ ಹಿಂದಿನ ಸಾಂಸ್ಕೃತಿಕ ಒತ್ತಡಗಳು ಹಲವು. ಎರಡು ಸಂಸ್ಕೃತಿಗಳ ನಡುವಿನ ಸಂಘರ್ಷವನ್ನು ಎದುರಿಸಬೇಕಾಗಿರುವ ಪ್ರಮೇಯ ಒಂದೆಡೆ, ಅಲ್ಲದೆ ವಸಾಹತುವಾದದ ವಿಭಿನ್ನ ಅನುಭವ ಮತ್ತೊಂದೆಡೆ. ಆದರೆ ಕನ್ನಡ ಸಾಹಿತಿಗಳು ವಸಾಹತುವಾದವನ್ನು ಭಿನ್ನವಾಗಿ ಗ್ರಹಿಸಿದರು. ವಿಭಿನ್ನವಾಗಿ ಪ್ರತಿಕ್ರಿಯಿಸಿದರು ಹಾಗೂ ಅದನ್ನು ಎದುರಿಸಲು ಸ್ವೀಕರಿಸಿದ ಮಾದರಿಗಳು ಕೂಡಾ ಪ್ರತ್ಯೇಕವಾಗಿದ್ದವು. ಇದಕ್ಕೆ ಅವರ ಎದುರು ಅಖಿಲ ಭಾರತ ಮಟ್ಟದ ಸಮಸ್ಯೆಗಳಿದ್ದವು. ಅಲ್ಲದೆ ಪ್ರಾದೇಶಿಕ ಒತ್ತಡಗಳು, ಕರ್ಷಣಗಳು ಹಾಗೂ

ಹಿತಾಸಕ್ತಿಗಳೂ ಸಹ ಕ್ರಿಯಾಶೀಲವಾಗಿದ್ದವು. ಒಂದು ಕಡೆ ಇಂಗ್ಲೀಷ್ ಶಿಕ್ಷಣದ ಮೂಲಕ ಪರಿಚಿತವಾದ ಪಾಶ್ಚಾತ್ಯ ಸಂಸ್ಕೃತಿ ಇನ್ನೊಂದೆಡೆ ಸ್ಥಳೀಯವಾಗಿರುವ ಶಾಸ್ತ್ರೀಯದಿಂದ ಜಾನಪದವರೆಗಿನ ಪರಂಪರೆಗಳ ಸೆಳೆತ. ಇವುಗಳಲ್ಲಿ ಯಾವುದನ್ನೂ ಕೈಬಿಡುವಂತಿರಲಿಲ್ಲ. ಹೀಗಾಗಿ ಆ ಕಾಲದಲ್ಲಿ ಸಂಪ್ರದಾಯ – ಆಧುನಿಕತೆ, ವ್ಯಕ್ತಿ–ಸಮಾಜ, ಬ್ರಾಹ್ಮಣ–ಶೂದ್ರ, ಪೂರ್ವ–ಪಶ್ಚಿಮ, ಮಾರ್ಗ–ದೇಶೀಯಂತಹ ಹಲವು ವಾಗ್ವಾದಗಳು ಏರುದನಿಯಲ್ಲಿ ನಡೆದವು. ದ್ವಿತೀಯಾಕ್ಷರ ಪ್ರಾಸದ ಕುರಿತಂತೆ ಗೋವಿಂದ ಪೈ ಹಾಗೂ ಇತರರ ನಡುವೆ ನಾಟಕೀಯ ವಾಗ್ವಾದ, ರುದ್ರನಾಟಕವನ್ನು ಕುರಿತು ಬಿ.ಎಂ. ಶ್ರೀಕಂಠಯ್ಯ ಹಾಗೂ ದ.ರಾ.ಬೇಂದ್ರೆ ನಡುವಿನ ಸಂವಾದ, 'ಶೂದ್ರ ತಪಸ್ವಿ' ಕುರಿತ ಕುವೆಂಪು, ಮಾಸ್ತಿ ವಾಗ್ವಾದ, ನಲವತ್ತರ ದಶಕದ ನವೋದಯ ಪ್ರಗತಿಶೀಲ ವಾಗ್ವಾದ ಹಾಗೂ ಇದೇ ದಶಕದ ಅಂತ್ಯದಲ್ಲಿ ಆರಂಭವಾದ ನವೋದಯ ನವ್ಯ ವಾಗ್ವಾದ, ಇವೆಲ್ಲ ಅಂದು ಕನ್ನಡದ ಸೃಜನಶೀಲರು ಎದುರಿಸಿದ ಸವಾಲುಗಳ ಸೂಚಕವಾಗಿದೆ.

ನವೋದಯ ಲೇಖಕರ ತಾತ್ತ್ವಿಕ ನಿಲುವುಗಳನ್ನು ಪ್ರಭಾವಿಸಿದ ಸಂಗತಿಗಳಲ್ಲಿ ಮುಖ್ಯವಾದುದು ರಾಷ್ಟ್ರೀಯತೆ. ರಾಷ್ಟ್ರೀಯತೆಯ ಮೂಲಕ ಆವಿಷ್ಕರಿಸಿಕೊಂಡ ಭಾವನಾತ್ಮಕ 'ಭಾರತೀಯತೆ'ಯನ್ನು ಕರ್ನಾಟಕದ ಜನರು 'ಕರ್ನಾಟಕತ್ವ'ದ ದೀಕ್ಷೆ ಕೊಟ್ಟೇ ಸ್ವೀಕರಿಸಿದರು. ಈ ಪ್ರಕ್ರಿಯೆಯಲ್ಲಿಯೇ 'ಪ್ರಾದೇಶಿಕ ರಾಷ್ಟ್ರೀಯತ್ವ'ವೆಂಬ ಹೊಸ ಪರಿಕಲ್ಪನೆ ಹುಟ್ಟಿಕೊಂಡವು. ಕರ್ನಾಟಕ ಏಕೀಕರಣ ಚಳವಳಿಯ ಮುಂದಾಳ್ತನ ವಹಿಸಿದವರು ಹಿಂದೂ ರಾಷ್ಟ್ರೀಯತೆಯನ್ನು ತಾತ್ತ್ವಿಕವಾಗಿ ಒಪ್ಪಿಕೊಂಡ ಮೇಲ್ವರ್ಗದ ಆಂಗ್ಲ ವಿದ್ಯಾವಂತರು. ಆಗ ಜನಸಾಮಾನ್ಯರ ಮಟ್ಟದಲ್ಲಿ ಜಾಗೃತಿ ಮೂಡಿಸುವುದು ಅಗತ್ಯವಾಗಿತ್ತು. ಶಾಂತಕವಿಗಳಂತಹವರು ಊರೂರು ತಿರುಗಿ ಜನರಲ್ಲಿ ಕರ್ನಾಟಕತ್ವದ ಕೆಚ್ಚು ಮೂಡಿಸಲು ಶ್ರಮಿಸಿದರು. ಕರ್ನಾಟಕ ಏಕೀಕರಣ ಚಳವಳಿಯ ನಾಯಕತ್ವವನ್ನು ಆಲೂರು ವೆಂಕಟರಾಯರು ವಹಿಸಿಕೊಂಡರು. ಶರೀಫ ಸಾಹೇಬರಂತಹ ಅನುಭಾವಿಗಳು ಜಾನಪದ ಲಾವಣಿಗಳ ಭಾಷೆ, ಲಯಗಳನ್ನೂ ಕಾವ್ಯತಂತ್ರವಾಗಿ ಬಳಸಿ ಕೀರ್ತನೆ ಹಾಗೂ ನಾಡಗೀತೆಗಳನ್ನೂ ಪ್ರಚಾರೋದ್ದೇಶಕ್ಕಾಗಿ ರಚಿಸಿಕೊಂಡರು. ದ.ರಾ.ಬೇಂದ್ರೆಯವರ ಸಂಪಾದಕತ್ವದಲ್ಲಿ 'ಗೆಳೆಯರ ಗುಂಪು'ವಿನ ಮೂಲಕ ಇಂತಹ ಗೀತೆಗಳು ಪ್ರಕಟವಾದುವು. ಮುಂಬೈ ಪ್ರಾಂತದಲ್ಲಿ ದ್ವಿಭಾಷಾ ಪರಿಸರವೂ ಜನಾಂದೋಲನದ ಅಬ್ಬರವೂ ಇದ್ದರೆ ಮದ್ರಾಸ್ ಪ್ರಾಂತಕ್ಕೆ ಸೇರಿದ್ದ ಮಂಗಳೂರು ೧೯೨೦ರವರೆಗೂ ಬ್ರಿಟಿಷ್ ಸತ್ತೆಯ ಬಹುಭಾಷಾ ಪರಿಸರದ ಒಂದು

ದ್ವೀಪದಂತಿತ್ತು. ಇಲ್ಲಿ ಕನ್ನಡ, ತುಳು ಹಾಗೂ ವಲಸಿಗರ ಭಾಷೆಗಳಾದ ಕೊಂಕಣಿ, ಉರ್ದು, ಮಲೆಯಾಳಿಗಳ ನಡುವೆ ಸಹಚರ ಸಂಬಂಧ ಇಂದಿಗೂ ಉಳಿದಿದೆ. ಮಿಶನರಿ ಚಟುವಟಿಕೆಗಳ ಕೇಂದ್ರವಾಗಿದ್ದ ಇಲ್ಲಿ ಬಾಸೆಲ್ ಮಿಶನ್ ಶಿಕ್ಷಣ ಹಾಗೂ ಮುದ್ರಣ ರಂಗಗಳಲ್ಲಿ ಕ್ರಾಂತಿಯನ್ನೇ ತಂದಿತು. ಇದರ ಸಂಪೂರ್ಣ ಲಾಭವನ್ನು ಪಡೆದವರು ಇಲ್ಲಿಗೆ ವಲಸೆ ಬಂದ ಕೊಂಕಣಿ ಮನೆಮಾತಾದ ಸಾರಸ್ವತರು. ಇಲ್ಲಿಯ ಸುಶಿಕ್ಷಿತ ಮೇಲ್ವರ್ಗದವರಿಗೆ ಬ್ರಹ್ಮಸಮಾಜದ ಸುಧಾರಣಾ ಪರವಾದ ಸಮನ್ವಯ ಮಾರ್ಗವನ್ನು ಸ್ವೀಕರಿಸುವುದು, ಅಸ್ಪೃಶ್ಯತೆ, ಸ್ತ್ರೀಶಿಕ್ಷಣ, ಬಾಲ್ಯವಿವಾಹ, ವಿಧವಾವಿವಾಹ ಮುಂತಾದ ವಿಷಯಗಳಲ್ಲಿ ಪ್ರಗತಿ ಪರ ಧೋರಣೆ ತಾಳುವುದು ಕಷ್ಟವಾಗಲಿಲ್ಲ. ಬ್ರಹ್ಮ ಸಮಾಜದ ದೃಷ್ಟಿಕೋನಕ್ಕೂ ಪಾಶ್ಚಾತ್ಯ ಚಿಂತನೆಗೂ ಮೂಲಭೂತ ಜಗಳವೇನೂ ಇರಲಿಲ್ಲ. ಈ ಮೂಲಕ ಕನ್ನಡದಲ್ಲಿ ಮೊದಲ ಬಾರಿಗೆ ಪುರೋಹಿತಶಾಹಿಯನ್ನು ವಿರೋಧಿಸುವ 'ಇಂದಿರಾಬಾಯಿ'ಯಂತಹ ಸಾಮಾಜಿಕ ಕಾದಂಬರಿ ಹುಟ್ಟಿಕೊಂಡಿತು. ಗೋವಿಂದ ಪೈಯವರ 'ಹೊಲೆಯನು ಯಾರು?' 'ಮಾತಂಗಿ', 'ಶೂದ್ರರ್ಷಿ ಕವಷ' ದಂತಹ ಕವನಗಳೂ 'ಹೆಬ್ಬೆರಳು' ದಂತಹ ಗೀತನಾಟಕಗಳೂ ಸಹ ಸುಧಾರಣಾವಾದಿ ನಿಲುವಿನ ಕೃತಿಗಳಾಗಿವೆ.

ವಸಾಹತುಶಾಹಿ ಹಾಗೂ ಅರಸೊತ್ತಿಗೆ ಈ 'ಇಬ್ಬಗೆಯ ದಾಸ್ಯ'ದ ನೆರಳಿನಲ್ಲೇ ಇಂಗ್ಲೀಷ್ ಶಿಕ್ಷಣ ಹಾಗೂ ಆಧುನಿಕ ವಿಚಾರಗಳ ಪ್ರವೇಶದಿಂದ ಹೊಸ ಮಾಧ್ಯಮ ವರ್ಗವೂ ಶಿಷ್ಟವಾದ ಒಂದು ಭಾಷಾ ಪ್ರಭೇದವೂ ರೂಪುಗೊಂಡಿತು. ಈ ಭಾಗದ ನವೋದಯದ ನೇತಾರರು ಬಿ.ಎಂ.ಶ್ರೀಕಂಠಯ್ಯನವರು 'ಕನ್ನಡ ಮಾತು ತಲೆ ಎತ್ತುವ ಬಗೆ' ಹೇಗೆಂದು ವಿವರಿಸುತ್ತ ಗ್ರಾಮ್ಯಭಾಷೆಯ ಆದರವನ್ನು ಕೈ ಬಿಡಲಾಯಿತು. ವಿದ್ಯಾವಂತರು ಆಡತಕ್ಕೆ ಸ್ಫುಟವಾದ ಕನ್ನಡವನ್ನು ಗ್ರಂಥಭಾಷೆಯಾಗಿ ತಿರುಗಿಸುವುದೆಂದು ತೀರ್ಮಾನಿಸಲಾಯಿತು. ಅರ್ಥವಾಗದ ಹಳಗನ್ನಡವನ್ನಾಗಲಿ ಕನ್ನಡಕ್ಕೆ ಬಗ್ಗದ, ರೂಢಿಯಲ್ಲಿಲ್ಲದ ಶಬ್ದಗಳನ್ನಾಗಲಿ ಬಳಸಬಾರದೆಂಬುವುದು ಶ್ರೀಯವರ ನಿಲುವಾಗಿತ್ತು. ಭಾಷೆಯ ಕುರಿತಾದ ಶ್ರೀಯವರ ವಿಚಾರಗಳು ಅವರು ಪ್ರತಿಪಾದಿಸಿದ 'ಪುನರುಜ್ಜೀವನ'ದ ಪರಿಕಲ್ಪನೆಯ ಅಂಗವಾಗಿ ಬಂದಿದೆ. ಈ ಪರಿಕಲ್ಪನೆಯ ಮೂಲಕ ಶ್ರೀಯವರು ತಮ್ಮ ಕಾಲದ ಸಾಹಿತ್ಯ ಪರಿಸರವನ್ನು ವರ್ಣಿಸುತ್ತಿದ್ದಾರೆ. 'ನವೋದಯ'ವೂ ಸೇರಿದಂತೆ ಈ ಕಾಲವನ್ನು ನಿರ್ದೇಶಿಸಲು ನಾವು ಬಳಸುತ್ತಿರುವ ಎಲ್ಲ ಪದಗಳೂ ಆ ಕಾಲದಿಂದ ಹೊರಗೆ ನಿಂತು ಹುಟ್ಟಿಕೊಂಡ ಪದಗಳಾಗಿವೆ. 'ಪುನರುಜ್ಜೀವನ'ವು ಅಂದು ಅಖಿಲಭಾರತ ಮಟ್ಟದಲ್ಲಿ ಪ್ರಚಲಿತವಿದ್ದ ರಾಜಕೀಯ, ಸಾಂಸ್ಕೃತಿಕ

ಪರಿಕಲ್ಪನೆಯಾಗಿದ್ದರೂ ಶ್ರೀಯವರು ಅದನ್ನು ತಮ್ಮ ಕಾಲದ ಕನ್ನಡ ಭಾಷಿಕ ಹಾಗೂ ಸಾಹಿತ್ಯಿಕ ಸಂದರ್ಭಕ್ಕೆ ಅನ್ವಯಿಸಿ ಬಳಸಿದ್ದರು.

ನವೋದಯ ಸಾಹಿತ್ಯ ಏಕಮುಖಿಯೂ ಏಕರೂಪಿಯೂ ಆಗಿದ್ದಾಗಿರದೆ ಅದು ಬಹುರೂಪಿಯಾಗಿದೆ. ಇದಕ್ಕೆ ಕಾರಣ ಏಕೀಕರಣಕ್ಕೆ ಮೊದಲು ಕನ್ನಡ ಭಾಷಾ ಪ್ರದೇಶಗಳಲ್ಲಿದ್ದ ವೈವಿಧ್ಯಪೂರ್ಣ ರಾಜಕೀಯ ಪರಿಸ್ಥಿತಿ, ಸ್ಥಾನಿಕ ಕರ್ಷಣಗಳು ಹಾಗೂ ಆ ಕಾಲದಲ್ಲಿ ಮುನ್ನಡೆಗೆ ಬಂದ ಹಿತಾಸಕ್ತಿಗಳು ಹಾಗೂ ಭಾಷಿಕ ರೂಪಗಳು. ವಿವಿಧ ಭಾಗಗಳಲ್ಲಿದ್ದ ಪ್ರೇರಕ ಸಂಗತಿಗಳಲ್ಲಿ ವ್ಯತ್ಯಾಸ ಉಂಟಾಯಿತು. ಸ್ವಾತಂತ್ರ್ಯ ಚಳವಳಿ ಎಲ್ಲಾ ಭಾಗಗಳಲ್ಲೂ ಅಷ್ಟೇ ತೀವ್ರವಾಗಿರಲಿಲ್ಲ. ಉತ್ತರ ಕರ್ನಾಟಕದಲ್ಲಿ ಇಂಗ್ಲೀಷ್ ಸಾಹಿತ್ಯದ ಪ್ರಭಾವವು ಅರವಿಂದ, ಟಾಗೋರ್‌ರ ಮೂಲಕ ಹಾದು ಬಂತು. ಅನುಭಾವ, ವಚನ, ಜಾನಪದ ಸಾಹಿತ್ಯಗಳು, ಮರಾಠಿ ನಾಟಕ ಇತ್ಯಾದಿಗಳ ಪ್ರಭಾವ ಈ ಭಾಗದ ಮೇಲೆ ಆಯಿತು. ಮಂಗಳೂರಿನಲ್ಲಿ ಕ್ರಿಶ್ಚಿಯನ್ ಮಿಶನರಿ ಚಟುವಟಿಕೆಗಳ ಮೂಲಕ ಇಂಗ್ಲೀಷ್ ಭಾಷೆ ಪ್ರವೇಶಿಸಲು ಸಾಧ್ಯವಾಯಿತು. ಅದು ಅಲ್ಲದೆ ತುಳು, ಕೊಂಕಣಿ ಭಾಷೆ, ಯಕ್ಷಗಾನ, ದಾಸರ ಪದ, ಬ್ರಹ್ಮ ಸಮಾಜದ ವಿಚಾರಗಳ ಪ್ರಭಾವವೂ ಆಯಿತು. ಮೈಸೂರು ಭಾಗದಲ್ಲಿ ಅಕಾಡೆಮಿಕ್ ವಲಯದಲ್ಲಿ ಇಂಗ್ಲೀಷ್‌ನ ಪ್ರವೇಶ ಸಾಧ್ಯವಾಯಿತು. ಅಲ್ಲದೆ ವಿವೇಕಾನಂದ, ಪರಮಹಂಸರ ವೈಚಾರಿಕತೆಗಳ ಪ್ರಭಾವ ನಡೆಯಿತು. ಯಾವ ಸಂಸ್ಕೃತಿಯೂ ಇನ್ನೊಂದು ಸಂಸ್ಕೃತಿಯ ವೈಚಾರಿಕ ಆಕೃತಿಗಳನ್ನು ಮೂಲ ರೂಪದಲ್ಲಿಯೇ ಸ್ವೀಕರಿಸುವುದಿಲ್ಲ. ನವೋದಯ ಕಾಲದಲ್ಲಿ ಪಾಶ್ಚಾತ್ಯ ವೈಚಾರಿಕ ಆಕೃತಿಗಳನ್ನೂ ಕಾವ್ಯ ರೂಪಗಳನ್ನೂ ಕನ್ನಡೀಕರಿಸುವ ಪ್ರಕ್ರಿಯೆ ನಡೆಯಿತು. ಈ ದೃಷ್ಟಿಯಿಂದ ಕನ್ನಡ ನವೋದಯವನ್ನು ೧೫ನೇ ಶತಮಾನದ ಯುರೋಪಿಯನ್ ರಿನೇಸಾನ್ಸಿ (Renaissance)ಗೆ ಹೋಲಿಸಬಹುದು.

ನವೋದಯದ ಏಕಕಾರಿ ಭಾರತೀಯತೆಯ ಕಲ್ಪನೆ, ರಾಜಕೀಯ ನಿಲುವಿನ ಅಸ್ಪಷ್ಟತೆ ಇತ್ಯಾದಿಗಳನ್ನು ಒಪ್ಪಿಕೊಳ್ಳದಿದ್ದರೂ ಅಭಿವ್ಯಕ್ತಿ ಪರವಾಗಿದ್ದೂ ವ್ಯಕ್ತಿ ವಿಶಿಷ್ಟತೆಯ ಬೋನಿನಲ್ಲಿ ಸಿಕ್ಕು ಬೀಳದ ಕೌಶಲ, ಅದು ವಸಾಹತುಶಾಹಿಯನ್ನು ಎದುರಿಸಿದ ಬಗೆ, ಪಾಶ್ಚಾತ್ಯ ವೈಚಾರಿಕ ಆಕೃತಿಗಳನ್ನು ಬರಮಾಡಿಕೊಂಡ ಕ್ರಮ, ಅದರ ಹಿಂದಿರುವ ಜೀವನೋತ್ಸಾಹ, ಶ್ರದ್ಧೆ ಹಾಗೂ ಪ್ರೀತಿ ಸಾಕಷ್ಟು ಪ್ರಗತಿ ಪರವಾಗಿದೆ ಹಾಗೂ ಅಭ್ಯಾಸಾಹಣವಾಗಿದೆ.

೨.೨. ಕುವೆಂಪು ಮತ್ತು ನವೋದಯ ಕಾಲ

ಕುವೆಂಪು ಸಾಹಿತ್ಯ ಪ್ರವೇಶಿಸಿದ್ದು ಇಂಗ್ಲೀಷಿನ ಮೂಲಕವೇ ಹೊರತು ಕನ್ನಡದಿಂದಲ್ಲ, ಅವರಿಗೆ ಕನ್ನಡ ಸಾಹಿತ್ಯದ ಪರಂಪರೆ ಅರ್ಥವಾಗುವ ಮೊದಲೇ ಪಶ್ಚಿಮದ ಷೇಕ್ಸ್‌ಪಿಯರ್ – ವರ್ಡ್ಸ್ ವರ್ತ್–ಮಿಲ್ಟನ್ ಮೊದಲಾದ ಕವಿಗಳು ಅವರ ಮನಸ್ಸನ್ನು ಆಕ್ರಮಿಸಿಕೊಂಡು ಬಿಟ್ಟರು. ಅಲ್ಲಿಂದ ಹುಟ್ಟಿತು ಕುವೆಂಪು ಅವರಲ್ಲಿ ಸಾಹಿತ್ಯದ ಹುಚ್ಚು. ಮೈಸೂರಿನ ವೆಸ್ಲಿಯನ್ ಮಿಶನ್ ಹೈಸ್ಕೂಲಿನ ವಿದ್ಯಾರ್ಥಿಯಾಗಿದ್ದಾಗಲೇ, ಪಬ್ಲಿಕ್ ಲೈಬ್ರರಿಯ ಸಾರಸ್ವತ ಪ್ರಪಂಚವನ್ನು ತಮ್ಮದಾಗಿಸಿಕೊಂಡಿದ್ದರು. ಅವರು ತಮ್ಮ 'ನೆನಪಿನ ದೋಣಿಯಲ್ಲಿ' ಹೇಳಿಕೊಂಡಿರುವಂತೆ, 'ಯಾವ ನೆರವು ನಿರ್ದೇಶನಗಳೂ ಇಲ್ಲದೆ, ಎಸ್.ಎಸ್.ಎಲ್.ಸಿ. ತರಗತಿಯಲ್ಲಿರುವಾಗಲೇ, ಷೇಕ್ಸ್‌ಪಿಯರನ ನಾಟಕಗಳನ್ನೂ, ಮಿಲ್ಟನನ ಪ್ಯಾರಡೈಸ್ ಲಾಸ್ಟ್ ನ್ನೂ ಓದಲು ಸಮರ್ಥ (ನೆ.ದೋ. ಪುಟ–೧೧೯)ರಾದರಂತೆ. ಅಷ್ಟೆ ಅಲ್ಲದೆ ಬಿ.ಎ. ತರಗತಿಯನ್ನು ಪ್ರವೇಶಿಸುವ ಹೊತ್ತಿಗೆ "ಅನೇಕ ಸಾಹಿತ್ಯ ಕ್ಷೇತ್ರಗಳಲ್ಲಿ ವಿಶೇಷವಾಗಿ ಇಂಗ್ಲೀಷ್ ಸಾಹಿತ್ಯದಲ್ಲಿ ಮತ್ತು ಇಂಗ್ಲೀಷ್ ಭಾಷಾಂತರದ ಮೂಲಕ ರಷ್ಯನ್, ಫ್ರೆಂಚ್, ಜರ್ಮನ್, ಇಟಾಲಿಯನ್ ಮತ್ತು ಸಂಸ್ಕೃತ ಸಾಹಿತ್ಯ ಕ್ಷೇತ್ರಗಳಲ್ಲಿ ಕವಿ ಪ್ರಜ್ಞೆ ಯಾತ್ರಿಯಾಗಿ ತನ್ನ ವಿಕಾಸನದ ಸಿದ್ಧಿಗೆ ಅತ್ಯವಶ್ಯಕವಾದ ಚಿಂತನಾಂಶ, ಕಲ್ಪನಾಂಶ, ಭಾವಾಂಶಗಳನ್ನೂ ಸಂಪಾದಿಸಿತು (ನೆ.ದೋ.ಪು.–೩೧೬) ಈ ಹಿನ್ನೆಲೆಯಿಂದಾಗಿ, ಅವರೊಳಗೆ ಆಗಲೇ ಇದ್ದ ಸಹಜ ಕವಿ ತನ್ನ ಮೊದಲ 'ಬಿಗಿನರ್ಸ್ ಮ್ಯೂಸ್' ಎಂಬ ಹೆಸರಿನ ಇಂಗ್ಲೀಷ್ ಕವನ ಸಂಗ್ರಹವನ್ನು ಹದಿನೆಂಟನೇ ವಯಸ್ಸಿನಲ್ಲಿ ಪ್ರಕಟಿಸಿತು. ವಾಸ್ತವವಾಗಿ ಅದು ಕನ್ನಡ ಸಾಹಿತ್ಯದ ನವೋದಯದ ಕಾಲ. ಕುವೆಂಪು ಅವರಿಗೆ ನವೋದಯದ ಪರಿವೆಯೇ ಇರಲಿಲ್ಲ. ಅವರೇ ಹೇಳಿಕೊಳ್ಳುವಂತೆ "ನನ್ನ ಬದುಕಿನ ಹೊಳೆ ಕನ್ನಡ ಸಾಹಿತ್ಯದ ನವೋದಯದ ನದಿಗೆ ಬಹುದೂರದಲ್ಲಿಯೆ ಹರಿಯುತ್ತಿತ್ತು. ಅದನ್ನು ಸಮೀಪಿಸಿಯೂ ಇರಲಿಲ್ಲ" (ನೆ.ದೋ.ಪು.–೨೫೩) ಈ ತೆರನಾದ ಸಂಪರ್ಕ ಮತ್ತು ತಿಳುವಳಿಕೆ ಉಂಟಾದದ್ದು ಕನ್ನಡ ಎಂ.ಎ. ತರಗತಿಗಳಿಗೆ ಬಂದಾಗಲೇ ಎಂದೆನ್ನುತ್ತಾರೆ. ಹೀಗೆ ಇಂಗ್ಲೀಷಿನಲ್ಲಿ ತನ್ನ ಅಭಿವ್ಯಕ್ತಿಯನ್ನು ಕಂಡುಕೊಳ್ಳುತ್ತಿದ್ದ ಹೊತ್ತಿನಲ್ಲಿ ಅವರನ್ನು 'ಕನ್ನಡದ ಪುನರುತ್ಥಾನದ ಮತ್ತು ನವೋದಯದ ಕೇಂದ್ರಾನುಗ ಶಕ್ತಿವಲಯಕ್ಕೆ ನೂಕಿ ಬಿಟ್ಟದ್ದು' (ನೆ.ದೋ.ಪು.–೫೭೭) ಮೈಸೂರಿನಲ್ಲಿ ಜೆ.ಎಚ್.ಕಸಿನ್ಸ್ ಎಂಬ ಐರಿಷ್ ಕವಿಯನ್ನು ಬೇಟಿಯಾದ ಸಂದರ್ಭ ಆ ಮೂಲಕ ತನ್ನ ಇಂಗ್ಲೀಷ್ ಹೆಮ್ಮೆಗೆ ಮೊದಲ ಬಾರಿ ಆಘಾತವಾಯಿತು. ನಿಮ್ಮದಲ್ಲದ

ಭಾಷೆಯಲ್ಲಿ ಬರೆದು ನೀವೆಂದೂ ಒಳ್ಳೆಯ ಬರಹಗಾರರಲಾಗಲಾರಿರಿ. ಅದರಲ್ಲಿ ಕವಿತೆಯಂಥ ಸೃಜನಾತ್ಮಕ ಅಭಿವ್ಯಕ್ತಿಯಂತೂ ನಿಮ್ಮದಲ್ಲದ ಭಾಷೆಯಲ್ಲಿ ನಿಮಗೆ ದಕ್ಕಲಾರದು ಎಂಬರ್ಥದ ಮಾತುಗಳನ್ನಾಡಿದರು. ಕುವೆಂಪು ಅವರನ್ನು ಕನ್ನಡ ಕಡೆಗೆ ತಿರುಗಿಸಿದವರು ಕಸಿನ್ಸ್ ಅವರು. ಇಂಗ್ಲೀಷಿನ ಮೂಲಕ ಪಶ್ಚಿಮದ ಸಾಹಿತ್ಯದೊಂದಿಗೆ ನಡೆಯಿಸಿದ ಅನುಸಂಧಾನದಿಂದಾಗಿ ಅವರು ಹೊಸಗನ್ನಡದಲ್ಲಿ ಅನೇಕ ಪ್ರಯೋಗಗಳನ್ನು ಕೈಗೊಳ್ಳಲೂ ಮತ್ತು ಅನೇಕ ಸಂವಾದಿ ರೂಪಗಳನ್ನು ಆವಿಷ್ಕರಿಸಲೂ ಹಾಗೂ ಕನ್ನಡ ವಿಮರ್ಶೆಗೆ ಹೊಸ ಆಯೊಮಗಳನ್ನೂ ಕೊಡಲು ಸಾಧ್ಯವಾಯಿತು.

ಕುವೆಂಪು ಅವರ ಮೊದಲ ಕವನ ಸಂಗ್ರಹ ೧೯೩೦ರಲ್ಲಿ 'ಕೊಳಲು' ಪ್ರಕಟವಾಯಿತು. ಕುವೆಂಪು ಸಂಪೂರ್ಣವಾಗಿ ಕನ್ನಡದ ಕಡೆಗೆ ತಿರುಗಿ ಬಹುಸಂಖ್ಯೆಯ ಕವನಗಳನ್ನೂ ಮತ್ತು ಬ್ಲ್ಯಾಂಕ್‌ವರ್ಸಿನ ನಾಟಕಗಳನ್ನು ಬರೆದು, ಬಿ.ಎ. ಮುಗಿಸಿ, ೧೯೨೩ರಲ್ಲಿ ಎಂ.ಎ. ತರಗತಿಗೆ ಸೇರುವ ಹೊತ್ತಿಗೆ, ಅವರು ಸಾಕಷ್ಟು ಹೆಸರು ಮಾಡಿದ್ದರು. ತತ್ವಶಾಸ್ತ್ರದ ಎಂ.ಎ. ಮಾಡಬೇಕೆಂದು ಆಸಕ್ತರಾಗಿದ್ದ ಕುವೆಂಪು ಅವರು ಪ್ರೊ.ಎ.ಆರ್ ಕೃಷ್ಣಶಾಸ್ತ್ರಿಯವರ ಅಪೇಕ್ಷೆಯ ಮೇರೆಗೆ ಕನ್ನಡ ಎಂ.ಎ.ಯನ್ನು ಕಲಿತರು. ಅವರು ಕನ್ನಡ ಮಾಡಿ ಆದ ಲಾಭವನ್ನು ಈ ರೀತಿ ಹೇಳುತ್ತಾರೆ. "ನಾನು ಕನ್ನಡವನ್ನು ಸ್ನಾತಕೋತ್ತರ ವಿಷಯವಾಗಿ ಆಳವಾಗಿ ಅಭ್ಯಾಸ ಮಾಡದಿದ್ದರೆ, ಪಂಪ, ರನ್ನ, ಜನ್ನ ನಾಗವರ್ಮ, ರಾಘವಾಂಕ, ಕುಮಾರವ್ಯಾಸ, ಲಕ್ಷ್ಮೀಶಾದಿ ಮಹಾಕವಿ ವರಕವಿಗಳ ಕೃತಿಗಳನ್ನು ಅಧ್ಯಯನ ಮಾಡದಿದ್ದರೆ, ಕೊನೆಗೆ ಕನ್ನಡ ಅಧ್ಯಾಪಕನಾಗಿ ಪಾಠ ಹೇಳದೆ ಇದ್ದಿದ್ದರೂ, ವಿಷಯ ವಸ್ತು ಭಾವಾದಿ ಸಂಪತ್ತಿಯಲ್ಲಿ ಕೊರತೆಯಿರದಿರುವ ಉತ್ತುಂಗ ಪ್ರಜ್ಞಾ ಸ್ಥಿತಿಗೆ ಏರಬಹುದಾಗಿದ್ದರೂ, 'ಶ್ರೀರಾಮಾಯಣದರ್ಶನಂ' ಮಹಾಕಾವ್ಯದಂತಹ ಮೇರುಕೃತಿಗೆ ಬೇಕಾಗುವ ಪದಸಂಪತ್ತಿಯನ್ನೂ ಮಹಾಶೈಲಿಯನ್ನೂ ಖಂಡಿತವಾಗಿಯೂ ಪಡೆಯಲಾಗುತ್ತಿರಲಿಲ್ಲ. (ಕುವೆಂಪು ಸಮಗ್ರ ಗದ್ಯ ಸಂ.–೨, ಪು.–೪೦೪).

ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ನವೋದಯದ ಆಚಾರ್ಯ ಬಿ.ಎಂ.ಶ್ರೀ, ಪ್ರೊ.ಟಿ.ಎಸ್. ವೆಂಕಣ್ಣಯ್ಯ, ಪ್ರೊ.ಎ.ಆರ್ ಕೃಷ್ಣಶಾಸ್ತ್ರಿ ಇಂಥವರ ಪ್ರಭಾವದ ಬೆಳಕಿನಲ್ಲಿ ಅರಳಿಕೊಳ್ಳುತ್ತಿದ್ದ ವಿದ್ಯಾರ್ಥಿ ಕುವೆಂಪು. ಪ್ರೊ.ಎ.ಆರ್.ಕೃಷ್ಣಶಾಸ್ತ್ರಿಯವರು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ನಡೆದ ವಿದ್ಯಾರ್ಥಿ ಕವಿ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾದರು. ತಮ್ಮ ಭಾಷಣದಲ್ಲಿ

ಹಳತಿಲ್ಲದೆ ಸಂಪೂರ್ಣವಾಗಿ ಹೊಸ ಸೃಷ್ಟಿ ಸಾಧ್ಯವಿಲ್ಲ. "ಹಳೆಯದೆಂದರೆ ಹೊಸದರ ಬೆನ್ನುಮೂಳೆ, ಅದು ನಮ್ಮ ಬಲವಾದ ತಳಹದಿ (ಕುವೆಂಪು ಸಮಗ್ರ ಗದ್ಯ ಸಂ.–೧ ಪು.–೮) ಎಂದರು. ಅವರಿಗೆ ತಮ್ಮ ಬಾಲ್ಯದ ದಿನಗಳಲ್ಲಿ ಮಲೆನಾಡಿನ ಮನೆಯಲ್ಲಿ, ಕಿವಿಯೊಳಗೆ ಅನುರಣಿಸಿ ಮರೆತು ಹೋಗಿದ್ದ ತೊರವೆ ರಾಮಾಯಣದ, ಲಕ್ಷ್ಮೀಶನ ಜೈಮಿನಿ ಭಾರತದ ಮತ್ತು ಕುಮಾರವ್ಯಾಸನ ಕೃತಿ ಸ್ಮೃತಿಗಳು ಈಗ ಜೀವಂತವಾದ ಚಿನ್ನದ ಗಣಿಗಳಂತೆ ತೆರೆದುಕೊಳ್ಳತೊಡಗಿದವು. ಅದುವರೆಗೆ ಅದಮ್ಯದಾಹದಿಂದ ಪರಿಚಯ ಮಾಡಿಕೊಂಡ ಪಶ್ಚಿಮದ ಕವಿಗಳ ಜತೆ, ಈಗ ಪರಿಚಿತವಾಗ ತೊಡಗಿದ ಪಂಪ–ರನ್ನ–ಕುಮಾರವ್ಯಾಸ–ರಾಘವಾಂಕ–ಲಕ್ಷ್ಮೀಶಾದಿಗಳೂ, ವ್ಯಾಸ – ವಾಲ್ಮೀಕಿ–ಕಾಳಿದಾಸಾದ್ಯರೂ ಸೇರಿಕೊಂಡು ಅವರ ಪರಂಪರೆಯ ಪರಧಿಗಳು ವಿಸ್ತಾರಗೊಂಡವು. ಮುಂದೆ ಉದ್ದಕ್ಕೂ ಕುವೆಂಪು ಒಬ್ಬ ಸೃಜನಶೀಲ ಬರಹಗಾರರಾಗಿ ಕನ್ನಡ ಹಾಗೂ ಭಾರತೀಯ ಸಾಹಿತ್ಯ ಪರಂಪರೆಗಳೊಂದಿಗೆ ನಡೆಯಿಸಿದ ಸಂವಾದ, ತೋರಿದ ಪ್ರತಿಕ್ರಿಯೆ, ಕನ್ನಡ ಸಾಹಿತ್ಯ ಚರಿತ್ರೆಯ ಭಾಗವಾಯಿತು. ಆಧುನಿಕ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ 'ಪಂಪನಿಂದ ಕುವೆಂಪುವರೆಗೆ' ಎಂಬ ಉಕ್ತಿಯೊಂದು ಪ್ರಚಲಿತದಲ್ಲಿದೆ. ಈ ನುಡಿಗಟ್ಟಿನ ಬಳಕೆ ಯಾರಿಂದ ಮೊದಲಾಯಿತು ಎಂಬುದರ ಬಗ್ಗೆ ಸರಿಯಾಗಿ ಅರಿವಿಲ್ಲ. ಆದರೆ ಈ ಜಾಣ್ನುಡಿ ತುಂಬ ಅರ್ಥಪೂರ್ಣವಾದದ್ದು. ಯಾಕೆಂದರೆ ಇದು ಇಡೀ ಕನ್ನಡ ಸಾಹಿತ್ಯ ಪರಂಪರೆಯ ಸೀಮಾರೇಖೆಗಳನ್ನು ಇಬ್ಬರು ಮಹತ್ವದ ಕವಿಗಳ ಮೂಲಮಾನದಲ್ಲಿ ಗ್ರಹಿಸುವ ಒಂದು ಉಕ್ತಿಯಾಗಿದೆ. ಅಷ್ಟೇ ಅಲ್ಲ ಪಂಪನಿಗೂ ಕುವೆಂಪು ಅವರಿಗೂ ಇರುವ ಸಾಮ್ಯವನ್ನು ಸೂಕ್ಷ್ಮವಾಗಿ ಸೂಚಿಸುತ್ತದೆ.

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಆಧುನಿಕ ಸಾಹಿತ್ಯ ಸಂದರ್ಭವು ಒಂದು. ಆಧುನಿಕ ಸಾಹಿತ್ಯದ ಮುಖ್ಯ ವಕ್ತಾರರಾಗಿ ಕುವೆಂಪು ಕಾಣಿಸಿಕೊಳ್ಳುತ್ತಾರೆ. ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಪ್ರಾರಂಭಿಕ ಹಂತದಿಂದ ವೈದಿಕ ವಿರೋಧಿ ನಿಲುವನ್ನು ಕಾಣುತ್ತೇವೆ. ಅಂತೆಯೇ ಆಧುನಿಕ ಸಾಹಿತ್ಯ ಸಂದರ್ಭದಲ್ಲಿಯೂ ವೈದಿಕ ವಿರೋಧಿ ನಿಲುವಿನ ಜತೆಗೆ ಪ್ರಭುತ್ವ ವಿರೋಧಿ ನಿಲುವು ಈ ಕಾಲದ ಮುಖ್ಯ ಲಕ್ಷಣವಾಗಿದೆ. ಕವಿಯ ಕಾವ್ಯ ನಿರ್ಮಿತಿಯನ್ನು ನಿಯಂತ್ರಿಸುವ, ಧಾರ್ಮಿಕವಲ್ಲದೆ ಇನ್ನಿತರ ಪ್ರಭುತ್ವಗಳನ್ನು ನಿರಾಕರಿಸುವ ನಿಲುವು ಇದಾಗಿದೆ. ಪ್ರಭುತ್ವಗಳ ನಿಯಂತ್ರಣಗಳಿಂದ ಸೃಜನಶಿಲತೆ ದೂರ ಸರಿ ಉಳಿಯುತ್ತಿತ್ತು. ಈ ಪ್ರಭುತ್ವ ನಿರಾಕರಣೆಯ ನಿಲುವು, ಆಧುನಿಕ ಯುಗದ ಕವಿಯಾದ ಕುವೆಂಪು ಅವರಲ್ಲಿ ಹರಳುಗಟ್ಟಿತು. ಕುವೆಂಪು ಅವರ ವ್ಯಕ್ತಿತ್ವದಲ್ಲಿಯೇ ಒಂದು ಬಗೆಯ ದಿಟ್ಟತನ ಅವರಿಗೆ ಹುಟ್ಟಿನೊಂದಿಗೆ

ಬಂದಂತೆ ತೋರುತ್ತದೆ. ಹೀಗಾಗಿ ಅವರು ಯಾವುದಕ್ಕೂ ಅಧೀನವಾಗದ ಒಂದು 'ನಿರಂಕುಶ ಮತಿ'ಯ ಪ್ರತಿಪಾದಕರಾಗಿದ್ದರು. ಕೀರ್ತಿ–ಪ್ರತಿಷ್ಠೆ ವಿಚಾರಗಳಲ್ಲಿ ಒಂದು ಬಗೆಯ ದಿವ್ಯ ನಿರ್ಲಕ್ಷ್ಯವನ್ನು ಬೆಳೆಸಿಕೊಂಡಿದ್ದರು. 'ವಸಂತ ವನದಲಿ ಕೂಗುವ ಕೋಗಿಲೆ ರಾಜನ ಬಿರುದನ್ನು ಬಯಸುವುದಿಲ್ಲ', 'ಕವಿಗರಸುಗಿರಸುಗಳ ಋಣವಿಲ್ಲ' – ಇದು ಕುವೆಂಪು ಅವರ ನಿಲುವಾಗಿತ್ತು. 'ಪಾಂಚಜನ್ಯ' ಎಂಬ ಕವನ ಸಂಗ್ರಹದ ಅನೇಕ ಕವಿತೆಗಳು ಅಂದಿನ ಬ್ರಿಟಿಷ್ ಸಾಮ್ರಾಜ್ಯಶಾಹಿಯ ವಿರುದ್ಧ ನಡೆಯುತ್ತಿದ್ದ ಸ್ವಾತಂತ್ರ್ಯ ಚಳುವಳಿಗೆ ಸ್ಫೂರ್ತಿಯಾದವು. ಅಷ್ಟೇ ಅಲ್ಲ ಈ ಸಾಮ್ರಾಜ್ಯಶಾಹಿಯ ಒಂದು ಭಾಗವಾದ ರಾಜಪ್ರಭುತ್ವದ ವಿಚಾರದಲ್ಲೂ ಕುವೆಂಪು ಅವರಿಗೆ ಗಾಢವಾದ ತಿರಸ್ಕಾರವಿತ್ತು. ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದ ಹೊತ್ತಿನಲ್ಲಿ, ಅರಮನೆಗೆ ಒಂದು ರಾಜಕುಮಾರರಿಗೆ ಪಾಠ ಹೇಳಿಕೊಡಬೇಕೆಂದು ಆಹ್ವಾನ ಬರುತ್ತಿದೆ. ಅದಕ್ಕೆ ಉತ್ತರವಾಗಿ 'ಅರಮನೆಗೆ ಹೋಗಿ ರಾಜಕುಮಾರರಿಗೆ ಪಾಠ ಹೇಳುವುದಕ್ಕಿಂತ ಉತ್ತಮವಾದ ಕೆಲಸಗಳು ನನಗಿವೆ' – ಎಚಿದು ಕಡೆಗಣ್ಣಿನಿಂದ ಅರಮನೆಯ ಕರೆಯನ್ನು ಕುವೆಂಪು ನಿರಾಕರಿಸಿದರು. ಇದು ಆಗಿನ ಕಾಲಕ್ಕೆ ಸಾಮಾನ್ಯವಾದ ಸಂಗತಿಯಲಲ್. ೧೯೫೦ರ ಕಾಲಘಟ್ಟ ಕರ್ನಾಟಕ ಏಕೀಕರಣವು ರಾಜಕೀಯ ವಿಷಯವಾಗಿ ಚರ್ಚೆಗೊಳಗಾದ ಸಂದರ್ಭ ಕುವೆಂಪು ಇದರ ಪರವಾಗಿ ಹೋರಾಟ ಮಾಡುವುದರ ಮೂಲಕ ಸರ್ಕಾರದ ವಿರುದ್ಧ ದನಿ ಎತ್ತಿದರು.

ಭಾಷೆಯ ದೃಷ್ಟಿಯಿಂದ ಗಮನಿಸುವುದಾದರೆ ಕನ್ನಡ ಸಾಹಿತ್ಯದ ಪರಂಪರೆಯಲ್ಲಿ ಉದ್ದಕ್ಕೂ ದ್ವಿಭಾಷಾ (ಕನ್ನಡ – ಸಂಸ್ಕೃತ) ಸಂದರ್ಭದಲ್ಲಿ ಅಭಿವ್ಯಕ್ತಿಸಿರುವುದನ್ನು ಕಾಣುತ್ತೇವೆ. ಕನ್ನಡವು ಯಾವತ್ತೂ ಸಂಸ್ಕೃತವನ್ನು ಅನ್ಯಭಾಷೆಯೆಂದಾಗಲೀ, ತಾನು ಅದರ ಸಂಪರ್ಕ ಹಾಗೂ ಸೆಳೆತಗಳಿಂದ ದೂರ ನಿಲ್ಲಬೇಕೆಂದು ಭಾವಿಸಿಲ್ಲ. ಒಟ್ಟಿನಲ್ಲಿ ಕನ್ನಡದ ಸೊಗಸನ್ನು ಕಬಳಿಸದಂತೆ, ಸಂಸ್ಕೃತವನ್ನು ಒಂದು ನಿಯಂತ್ರಿತ ಹದದಲ್ಲಿ ಅಳವಡಿಸಿಕೊಂಡು 'ಮಾರ್ಗದೇಸಿ'ಗಳ ಒಡಂಬಡಿಕೆಯನ್ನು ಸಾಧಿಸುವುದು ಅಗತ್ಯವಾಗಿತ್ತು. ಕುವೆಂಪು ಅವರಲ್ಲಿ ನಡೆದಿರುವ ಭಾಷಾ ಪ್ರಯೋಗವು ಕನ್ನಡ ಸಂಸ್ಕೃತಗಳ ಸಮ್ಮಿಲನದಂತೆ ಕಾಣುತ್ತದೆ. ಆದರೆ 'ಕುವೆಂಪು' ಭಾಷೆ ಸಂಸ್ಕೃತ ಭೂಯಿಷ್ಠವಾಗಿದೆ' ಎಂದು ಅವರ ಬಗ್ಗೆ ಆಕ್ಷೇಪಣೆಯಿದೆ. ಈ ಮಾತಿನ ಹಿಂದೆ ಕುವೆಂಪು ಭಾಷೆಯ ಸ್ವರೂಪ ಮತ್ತು ಲಯಗಳ ಕುರಿತು ಆಳವಾದ ಪರಿಶಿಲನೆ ಹಾಗೂ ತಿಳುವಳಿಕೆಯ ಅಭಾವವಿರುವುದು ಕಂಡು ಬರುತ್ತದೆ. ಕುವೆಂಪು ಅವರ ಕಾವ್ಯಭಾಷೆ ಸಂಸ್ಕೃತ

ಓಜಸ್ಸಿನಿಂದ ಕೂಡಿರಲು ಅದಕ್ಕೆ ಸಾಂಸ್ಕೃತಿಕ ಕಾರಣಗಳೂ ಬಲವಾಗಿದೆ. ಇದು ಅವರ ಕಾವ್ಯ ಪ್ರಪಂಚದ ಭಾಷೆ ಹಿನ್ನೆಲೆ, ಆದರೆ ಅವರ ಎರಡೂ ಕಾದಂಬರಿಗಳಲ್ಲಿ ನಿರೂಪಕನ ಭಾಷೆ 'ಮಾರ್ಗ' ಸ್ಪರ್ಶದಿಂದ ಕೂಡಿದ್ದರೆ, ವಿವಿಧ ಸಾಮಾಜಿಕ ಸ್ತರಗಳಿಗೆ ಸೇರಿದ ಬಹುಸಂಖ್ಯೆಯ ಪಾತ್ರಗಳು ತಮ್ಮ ಸ್ವಭಾವಾನುಸಾರಿಯಾಗಿ ಮಾತನಾಡುವ 'ದೇಸಿ'ಯ ಚಹರೆಯನ್ನು ಕಾಣುತ್ತೇವೆ. ಕುವೆಂಪು ಕಾದಂಬರಿಯಲ್ಲಿ ಆ ಪರಂಪರೆಯ ಆಳವಾದ ಅರಿವಿನಿಂದ ನಿಷ್ಪನ್ನವಾದ ಭಾಷೆಯನ್ನು ಕಾಣುತ್ತೇವೆ. ಇದು ಕುವೆಂಪು ಅವರ ಭಾಷೆಯ ವೈವಿಧ್ಯ ಮತ್ತು ವಿಸ್ತಾರವನ್ನು ವ್ಯಕ್ತಪಡಿಸುತ್ತಾರೆ. ನಿಜಕ್ಕೂ ಅಚ್ಚರಿ ಹುಟ್ಟಿಸುತ್ತದೆ.

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಗಮನಿಸಬೇಕಾದ ಇನ್ನೊಂದು ಲಕ್ಷಣವೆಂದರೆ, ಅದರ ಕಥನ ಕಾವ್ಯಪದ್ಧತಿಯ ನಿರಂತರತೆ. ಪಂಪನಿಂದ ಹಿಡಿದು ಮುದ್ದಣನವರೆಗೆ ಈ ಕಥನ ಕಾವ್ಯ ಪರಂಪರೆಯು ಚಾಚಿಕೊಂಡಿತ್ತು. ಹತ್ತೊಂಭತ್ತು ಇಪ್ಪತ್ತನೆಯ ಶತಮಾನದಲ್ಲಿ ಪಶ್ಚಿಮದ ಕಾವ್ಯ ಪ್ರೇರಣೆಗಳಿಂದ ಇದು ವ್ಯಕ್ತಿನಿಷ್ಠ ಕಾವ್ಯ ಪರಂಪರೆಯ ರೂಪ ಪಡೆಯಿತು. ಇದರಿಂದಾಗಿ ಕನ್ನಡ ಕಾವ್ಯ ಭಾರತೀಯ ಮಹತ್ ಸಾಹಿತ್ಯ ಪರಂಪರೆಯೊಂದಿಗೆ ತನ್ನ ಸಂಬಂಧವನ್ನು ಕಳಚಿಕೊಂಡಿತು. ಅಲ್ಲದೆ ಪ್ರಾಚೀನ ಕನ್ನಡ ಸಾಹಿತ್ಯ ಪರಂಪರೆಯೊಂದಿಗೂ ತನ್ನ ಸಂಬಂಧವನ್ನು ಕಳಚಿಕೊಂಡಿತು. ತನ್ನ ನೆರೆಹೊರೆಯ ಸೋದರ ಭಾಷೆಗಳೊಂದಿಗೆ ನಡೆಯುತ್ತಿದ್ದ ಸಂವಾದವೂ ಸ್ಥಗಿತವಾಯಿತು. ನವೋದಯ ಕಾವ್ಯದ ಈ ಹಂತದಲ್ಲಿ ಕುವೆಂಪು ಕನ್ನಡ ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸಿದರು. ಅಲ್ಲದೆ ಪಶ್ಚಿಮದ ಸಾಹಿತ್ಯಕ್ಕೆ ಸವಾಲಾಗುವಂತೆ, ಅಲ್ಲಿನ ಸಮಸ್ತ ಪ್ರಕಾರಗಳನ್ನೂ ಅತ್ಯಂತ ಸಮರ್ಥವಾಗಿ ಕನ್ನಡಕ್ಕೆ ತಂದರು. ಅವರ ಕಾವ್ಯ ಮತ್ತು ಕಾದಂಬರಿಗಳ ರೂಪ ಇಂಗ್ಲೀಷ್ ಮತ್ತು ಯೂರೋಪಿನ ಮಾದರಿಯಾದರೂ ಅದರ ಅನುಭವ ಸಾರ ಅದು ಕುವೆಂಪು ಅವರ ಜೀವಾಳದ ದ್ರವ್ಯಗಳೂ. ಕುವೆಂಪು ಪ್ರಾಚ್ಯ–ಪಾಶ್ಚಾತ್ಯ ಸಾಹಿತ್ಯ ಮಾತ್ರವಲ್ಲದೆ ತತ್ವಜ್ಞಾನ ಪರಂಪರೆಯನ್ನು ಅರಗಿಸಿಕೊಂಡವರು. ಅಲ್ಲದೆ ಜಾಗತಿಕ ಸಮಾಜವಾದೀ ಚಿಂತನೆ ಹಾಗೂ ವಿಜ್ಞಾನವನ್ನು ತಮ್ಮದಾಗಿಸಿಕೊಂಡರು ಕುವೆಂಪು. ಆ ಮೂಲಕ ಕಾವ್ಯ, ಕಾದಂಬರಿ, ನಾಟಕ ಸಾಹಿತ್ಯ ವಿಮರ್ಶೆಗಳಷ್ಟಕ್ಕೆ ಅಲ್ಲದೆ ಶ್ರೀರಾಮಾಯಣದರ್ಶನದಂಥ ಮಹಾಕಾವ್ಯ ನಿರ್ಮಿತಿಗೆ ಕೈ ಹಾಕಿದರು. ಹೀಗೆ ಕನ್ನಡದ ಕಥನ ಪರಂಪರೆಗೆ ಹಾಗೂ ಅದಕ್ಕೆ ಹಿನ್ನೆಲೆಯಾದ ಭಾರತೀಯ ಮಹತ್ ಕಾವ್ಯ ಪರಂಪರೆಗೆ ಮರಳಿದ್ದು ಮಹತ್ವದ ವಿಚಾರವಾಗಿದೆ.

ಕುವೆಂಪು ಇಂಗ್ಲೀಷಿನ ಮಾದರಿಗಳಿಂದ ಬಿಡಿಸಿಕೊಂಡು ಮತ್ತೆ ಕನ್ನಡ ಸಾಹಿತ್ಯ ಪರಂಪರೆಗೆ ಹಿಂತಿರುಗಿರುವುದನ್ನು ಕಾಣುತ್ತೇವೆ. ಹಾಗೆಯೇ ಕನ್ನಡಕ್ಕೂ ಭಾರತೀಯ ಮಹತ್ ಕಾವ್ಯ ಪರಂಪರೆಗೂ ಕಳಚಿಕೊಂಡ ಸಂಬಂಧವನ್ನು ಮತ್ತೆ ಜೋಡಿಸುವುದರ ಮೂಲಕ ಪರಂಪರೆಗೆ ಪುನರುಜ್ಜೀವನವನ್ನುಂಟು ಮಾಡಿದ್ದರು. 'ಶ್ರೀರಾಮಾಯಣದರ್ಶನಂ' ಮಹಾಕಾವ್ಯವನ್ನು ಬರೆಯುವುದರ ಮೂಲಕ ಇದನ್ನು ಸಾಧಿಸಿದ್ದರು. ಕಾವ್ಯಗಳ ಪರಂಪರೆಯನ್ನು ಕುವೆಂಪು ಕನ್ನಡದಲ್ಲಿ ಈ ಮೂಲಕ ಮುಂದುವರಿಸಿದ್ದರು. ಕನ್ನಡ–ಸಂಸ್ಕೃತ ಮತ್ತು ಪಾಶ್ಚಾತ್ಯ ಮಹಾಕಾವ್ಯಗಳ ಪರಿಚಯದಿಂದ ಮೈಗೂಡಿಸಿಕೊಂಡ ಜಾಗತಿಕ ಪ್ರಜ್ಞೆಯ ಬೆಳಕಿನಿಂದ, ವಾಲ್ಮೀಕಿ ರಾಮಾಯಣದ ಕಥೆಯನ್ನು ಇಪ್ಪತ್ತನೆಯ ಶತಮಾನದ ವ್ಯಾಖ್ಯಾನವನ್ನಾಗಿ ನಿರ್ಮಾಣ ಮಾಡಿದ್ದಾರೆ. ಇಷ್ಟರವರೆಗೆ ಬಂದಿರುವಂತಹ ರಾಮಾಯಣದ ಕಥೆಗಳ ಪಡೆದುಕೊಳ್ಳಲು ಸಾಧ್ಯವಾಗದಿರುವ ಸಿದ್ಧಿಯನ್ನು 'ಶ್ರೀರಾಮಾಯಣದರ್ಶನಂ' ಮಹಾಕಾವ್ಯವು ಪಡೆಯಿತು. 'ಶೂದ್ರ ತಪಸ್ವಿ' 'ವಾಲ್ಮೀಕಿಯ ಭಾಗ್ಯ' ಎಂಬ ರಾಮಾಯಣದ ವಸ್ತುವುಳ್ಳ ಇತರ ನಾಟಕಗಳನ್ನು ಅಂತೆಯೇ ಮಹಾಭಾರತದ ಭಾಗವಾಗಿರುವ 'ಚಿತ್ರಾಂಗದಾ'ವೆಂಬ ಖಂಡಕಾವ್ಯ ಮತ್ತು 'ಶ್ಮಶಾನ ಕುರುಕ್ಷೇತ್ರ' 'ಬೆರಳ್‌ಗೆ ಕೊರಳ್' 'ಕಾನೀನ' ಇಂತಹ ನಾಟಕಗಳನ್ನು ರಚಿಸಿದರು. ಹೀಗೆ ಹೊಸಗನ್ನಡ ಸಾಹಿತ್ಯ ಸಂದರ್ಭದಲ್ಲಿ ಹಿಂದಿನ ಪರಂಪರೆ ಮುಂದುವರಿಯಿತು. ಆ ಮೂಲಕ ತಮ್ಮ ವೈಚಾರಿಕತೆಯ ಹಾಗೂ ದರ್ಶನದ ಬೆಳಕಿನಲ್ಲಿ ಚಿಕಿತ್ಸೆಗೆ ಮತ್ತು ಪುನರ್ ವ್ಯಾಖ್ಯಾನ ಮಾಡಲು ಸಾಧ್ಯವಾಯಿತು. ಇದು ಒಬ್ಬ ಶ್ರೇಷ್ಠ ಸೃಜನಶೀಲ ಲೇಖಕ ತನ್ನ ಪರಂಪರೆಯೊಂದಿಗೆ ನಡೆಸಿದ ಸಂವಾದ ಹಾಗೂ ಅನುಸಂಧಾನಕ್ಕೆ ನಿದರ್ಶನವಾಗಿದೆ.

ಕುವೆಂಪು ಅವರೊಬ್ಬ ರಸ ಋಷಿ. ಅವರನ್ನು ಪ್ರಭಾವಿಸಿದವರು ಶ್ರೀರಾಮಕೃಷ್ಣ ವಿವೇಕಾನಂದರು ಹಾಗೂ ಸ್ವಾಮಿ ಸಿದ್ಧೇಶ್ವರಾನಂದರು. ಇವರೆಲ್ಲರೂ ಕಲಾಭಿರುಚಿ, ರಸದೃಷ್ಟಿಯುಳ್ಳವರಾಗಿದ್ದರೆ ಹೊರತು ಗೊಡ್ಡು ಸಂನ್ಯಾಸಿಗಳಾಗಿರಲಿಲ್ಲ. ಕುವೆಂಪು ಅವರಿಗೆ ಅತೀಂದ್ರಿಯದಲ್ಲಿ ಮೊದಲಿನಿಂದಲೂ ಶ್ರದ್ಧಾಸಕ್ತಿಗಳಿದ್ದವು. ಈ ಆಧ್ಯಾತ್ಮಿಕ ಆಸ್ಥೆ, ಅಭೀಪ್ಸೆಗಳಿಗೆ ಶ್ರೀರಾಮಕೃಷ್ಣ, ಸ್ವಾಮಿ ವಿವೇಕಾನಂದರ ಪ್ರಭಾವ ಪ್ರಬಲವಾದ ಒತ್ತಾಸೆಯಾಗಿ ಬಂತು. ಶ್ರೀರಾಮಕೃಷ್ಣಾಶ್ರಮದ ಸಂಪರ್ಕ ಕುವೆಂಪು ಅವರಿಗಾಗಿ ಮುನ್ನುಡಿ ಅವರು ಶ್ರೀರಾಮಕೃಷ್ಣ ವಿವೇಕಾನಂದ ಸಂಬಂಧವಾದ ಸಾಹಿತ್ಯವನ್ನು ಗಾಢವಾಗಿ ಓದಿಕೊಂಡಿದ್ದರು. ಆದರೂ ಅವರ ಆಧ್ಯಾತ್ಮಿಕ ನೌಕಾಯಾನಕ್ಕೆ ಧ್ರುವತಾರೆ ದೊರೆಕೊಂಡದ್ದು, ಕಣ್ಣು ಬಂದದ್ದು ಅವರು

ಶ್ರೀರಾಮಕೃಷ್ಣಾಶ್ರಮವನ್ನು ಸೇರಿದ ಮೇಲೆಯೇ. ತಮ್ಮ ಆತ್ಮಕಥೆಯ ಉದ್ದಕ್ಕೂ ತಮ್ಮ ದಿನಚರಿಯನ್ನು ಉದ್ಧರಿಸಿದ್ದಾರೆ. ಗುರುಕೃಪೆ ಅವರನ್ನು ನಿರಂತರವಾಗಿ ಕೈಹಿಡಿದು ಕಾಪಾಡಿದ ಪರಿಯನ್ನು ತಿಳಿಸು ತ್ತಾರೆ. "ನನ್ನಲ್ಲಿ ಏನಾದರೂ ಇತರರಲ್ಲಿ ಇಲ್ಲದ ಒಂದು ವಿಶೇಷ ವಿಭೂತಿ ಪ್ರಕಾಶಿತವಾಗಿದ್ದರೆ, ಅದಕ್ಕೆ ಶ್ರೀಗುರುವಿನ ಅನುಗ್ರಹವೇ ಕಾರಣ" ಎಂಬುದು ಬಲವಾದ ನಂಬಿಕೆ.

೨.೩. ವಿವೇಕಾನಂದರ ಚಿಂತನೆ

ಪ್ರವೇಶ

ಪುರಾತನವಾದ ಹಿಂದೂ ಧರ್ಮದಲ್ಲಿ ಪ್ರಪಂಚದ ಎಲ್ಲಾ ಸಮಸ್ಯೆಗಳಿಗೆ ಉತ್ತರಕೊಡಬಲ್ಲ ಸಾಮರ್ಥ್ಯ ಹಾಗೂ ಜೀವಾಳವಿರುವುದನ್ನು ಎತ್ತಿ ತೋರಿಸಿದ ಧೀಮಂತ ಸ್ವಾಮಿ ವಿವೇಕಾನಂದರು ವೈಜ್ಞಾನಿಕ ಶಕ್ತಿಗಳ ಪ್ರವಾಹದಿಂದ ಮುಳುಗದೆ, ಕದಲದೆ ಉಳಿಯಲು ಬೇಕಾದ ಸತ್ತೋನ್ನತಿಯು ವೇದವೇದಾಂತಗಳಲ್ಲಿರುವುದು, ಎಂಬುದನ್ನು ಸ್ವಾಮಿ ವಿವೇಕಾನಂದರು ಕಂಡುಕೊಂಡರು. ವಿವೇಕಾನಂದರ ಕಾಲದಲ್ಲಿ ಹಿಂದೂ ಸಮಾಜಕ್ಕೆ ಮಹಾಶಂಕೆ ಹಾಗೂ ಮರಣಭೀತಿ ಆವರಿಸಿತ್ತು. ಆ ಭಯಕ್ಕೆ ಕಾರಣವಿಲ್ಲವೆಂದು ಭರವಸೆ ತೋರಿ, ಸಮಾಜದ ಆತ್ಮಶ್ರದ್ಧೆಯನ್ನು ಹೆಚ್ಚಿಸಿದರು. ಆತ್ಮಾನುಭವ ಆನಂದದಲ್ಲಿ ತನ್ಮಯರಾಗಿ ಆ ಅನುಭವದ ಸಾರವನ್ನು ಹಂಚಿದ ಮಹಾಯೋಗಿ. ಸ್ವಧರ್ಮದ ಶ್ರೇಷ್ಠತೆಯನ್ನು ಎತ್ತಿ ತೋರಿದಂತೆ, ಸ್ವಸಮಾಜ ದೋಷ ದೌರ್ಬಲ್ಯಗಳನ್ನು ಕಂಡು ಪರಿಹರಿಸಿದವರು. ಶ್ರೀರಾಮಕೃಷ್ಣ ಪರಮಹಂಸರ ಗುರುಕೃಪೆಗೆ ಪಾತ್ರರಾದ ಏಕೈಕ ಶ್ರೇಷ್ಠ ವ್ಯಕ್ತಿ ವಿವೇಕಾನಂದರು. ಗುರುಕೃಪೆಯಿಂದ ಜೀವನಸ್ವರೂಪ, ಭಗವತ್ಸ್ವರೂಪ, ಧರ್ಮಮೂಲ ಸ್ವರೂಪದ ರಹಸ್ಯಗಳು ವಿವೇಕಾನಂದರಿಗೆ ಆತ್ಮಗತವಾಗಿದ್ದವು.

ವೇದಾಂತವು ಸ್ವಾಮಿ ವಿವೇಕಾನಂದರಿಗೆ ದೇಹದಲ್ಲಿ ಸಂಚರಿಸುವ ಶ್ವಾಸದಂತಿತ್ತು. ಜೀವನದಲ್ಲಿ ಬೇರೆ ಬೇರೆ ಅವಸ್ಥೆಗಳಿರುವುವು. ಜೀವ ಜಗತ್ತಿನ ಸಂಬಂಧಗಳ ನಡುವೆ ನಾನಾ ಸಂಸ್ಕಾರಗಳಿರುವುವು. ಈ ಸೂಕ್ಷ್ಮಗಳು ಸಕಲ ಮತಧರ್ಮಗಳಲ್ಲಿರುವ ಮೂಲಭೂತ ವಿಚಾರಗಳು. ಇವುಗಳ ಕುರಿತು ನಿಸ್ಸಂಶಯ ಜ್ಞಾನವು ವಿವೇಕಾನಂದರಿಗಿದ್ದಿತು. ಇದಕ್ಕೆ ಕಾರಣ ಗುರುಗಳು ಕರುಣಿಸಿದ ಆತ್ಮ ಸಾಕ್ಷಾತ್ಕಾರಬಲ ಹಾಗೂ ಅವರೊಳಗಿರುವ ಜೀವದ್ಧ್ವನಿ, ಜೀವೋತ್ತೇಜಕ ಪ್ರಭೆ ಮತ್ತು ಜೀವನೋಪಯುಕ್ತ ಶಕ್ತಿ. ವಿವೇಕಾನಂದರು ಸಂನ್ಯಾಸಿಯಾದರೂ ಜೀವನವನ್ನು ತುಚ್ಛವೆಂದೆಣಿಸಿದವರಲ್ಲ. ಈ ಜಗತ್ತು ಭಗವಂತನದು, ಇದರ ಜೀವನವು ಭಗವಂತನದು, ಆದ ಕಾರಣ ಬದುಕಿನ ಬಗ್ಗೆ ಆದರ ಗೌರವಗಳಿರಬೇಕು. ಬದುಕನ್ನು ಕೆಡುಕೆನ್ನದಿರಿ, ಪೌರುಷದಿಂದ ಬದುಕಿರಿ, ತೇಜಸ್ಸಿನಿಂದ ಬದುಕಿರಿ, ನಗುಮುಖದಿಂದ ಬದುಕಿರಿ, ಎಂಬ ಧೀರ ಸಂದೇಶವನ್ನು ಅವರು ನೀಡಿದ್ದರು.

ವಿವೇಕಾನಂದರು ಯಾವುದೋ ಒಂದು ಸಣ್ಣ ಜಾತಿಯ ದೃಷ್ಟಿಯಿಂದ, ಕೋಮಿನ ದೃಷ್ಟಿಯಿಂದ, ಮತದ ದೃಷ್ಟಿಯಿಂದ ತನ್ನ ಮಾರ್ಗವನ್ನು ಕಂಡುಕೊಂಡವರಲ್ಲ. ಇವರು ಎಲ್ಲಾ ಕಾಲಕ್ಕೂ, ಎಲ್ಲಾ ದೇಶಕ್ಕೂ, ಎಲ್ಲಾ ಕುಲಗೋತ್ರಗಳಿಗೂ ಒದಗಿ ಬರುವ ಸಂದೇಶವನ್ನು ಸಾರಿರುವರು. ಬೇರೆ ಬೇರೆ ಸಂಸ್ಕಾರಗಳ ಜನರಿಗೆ ಧರ್ಮಚಿಂತನೆಯನ್ನು ನೀಡಿದರು. ಹಿಂದೂ ಧರ್ಮದ ವಿಸ್ತಾರವನ್ನು ಮತ್ತು ವೇದಾಂತ ತತ್ತ್ವದ ಗಂಭೀರತೆಯನ್ನು ಇವರ ಉಪನ್ಯಾಸಗಳಲ್ಲಿ ಕಾಣಬಹುದು. ಸುಲಭ ಗ್ರಾಹ್ಯವಾಗಿ, ಸರ್ವಸಾಮಾನ್ಯರೂ ಅರ್ಥೈಸುವಂತೆ ಈ ಉಪನ್ಯಾಸಗಳಿರುವುವು. ಸಂಕುಚಿತ ಮತಭಾವಗಳನ್ನು ಕತ್ತರಿಸಿ ಉದಾತ್ತ ಸಮನ್ವಯ ದೃಷ್ಟಿಯನ್ನು ಪ್ರಜ್ವಲಿಸುವ ಶಕ್ತಿಯನ್ನು ಈ ಮೂಲಕ ಪಡೆಯಲು ಸಾಧ್ಯ.

"ಪ್ರಪಂಚದಲ್ಲಿ ಯಾವುದಾದರೂ ಒಂದು ದೇಶವು ಪುಣ್ಯ ಭೂಮಿಯೆಂದು ಕರೆಯಿಸಿಕೊಳ್ಳಲು ಅರ್ಹವಾಗಿದ್ದರೆ, ಜೀವಿಗಳು ತಮ್ಮ ಬಾಳಿನ ಕೊನೆಯ ಕರ್ಮವನ್ನು ಸವೆಯಿಸಲು ಬರಬೇಕಾದ ಸ್ಥಳವೊಂದಿದ್ದರೆ, ಭಗವಂತನೆಡೆಗೆ ಸಂಚರಿಸುತ್ತಿರುವ ಪ್ರತಿಯೊಂದು ಜೀವಿಯು ತನ್ನ ಕೊನೆಯ ಯಾತ್ರೆಯನ್ನು ಪೂರೈಸುವುದಕ್ಕೆ ಒಂದು ಕರ್ಮಭೂಮಿಗೆ ಬರಬೇಕಾಗಿದ್ದರೆ, ಯಾವುದಾದರೂ ದೇಶದಲ್ಲಿ ಮಾನವ ಕೋಟಿ, ಮಾಧುರ್ಯ, ಔದಾರ್ಯ, ಪಾವಿತ್ರ್ಯ, ಶಾಂತಿ – ಇವುಗಳಲ್ಲಿ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಧ್ಯಾನದಲ್ಲಿ ಮತ್ತು ಅಂತರ್ಮುಖ ಜೀವನದಲ್ಲಿ ತನ್ನ ಪರಾಕಾಷ್ಠೆಯನ್ನು ಮುಟ್ಟಿದ್ದರೆ, ಅದು ಈ ಭರತ ಖಂಡವೇ ಆಗಿದೆ". (ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ.–೫, ಪು.–೧) ಎಂದು ಘಂಟಾಘೋಷವಾಗಿ ಸಾರಿಹೇಳಿದವರು ಸ್ವಾಮಿ ವಿವೇಕಾನಂದರು. ಇಲ್ಲಿ ಹುಟ್ಟಿದ ಆಧ್ಯಾತ್ಮಿಕ ಪ್ರವಾಹದ ಅಲೆ ಪೂರ್ವ ಪಶ್ಚಿಮ ಉತ್ತರ ದಕ್ಷಿಣವೆನ್ನದೆ ಜಗತ್ತನ್ನು ಆವರಿಸಿರುವುದು. ನಮ್ಮ ಭರತಖಂಡದಲ್ಲಿ ಬಾಳಿಗೆ ಹೊಸ ಬೆಳಕನ್ನು ಕೊಡುವ ಅಮೃತ ಪ್ರವಾಹವಿರುವುದು.

೨.೩.೧. ಧರ್ಮವೇ ರಾಷ್ಟ್ರ ಜೀವನ

ಪ್ರಪಂಚದ ಇತರ ರಾಷ್ಟ್ರಗಳಿಗೆ ಧರ್ಮವೆಂಬುದು ಜೀವನದ ಹಲವು ಕಸಬುಗಳಲ್ಲಿ ಒಂದು. ಆದರೆ ಇಲ್ಲಿ ಭರತಖಂಡದಲ್ಲಿ ಧರ್ಮ ಏಕ ಮಾತ್ರ ವ್ಯವಹಾರ. ಇಂಗ್ಲೆಂಡ್, ಅಮೆರಿಕಾ, ಫ್ರಾನ್ಸ್, ಜರ್ಮನಿ – ಈ ದೇಶಗಳ ರೈತರನ್ನು

ನೀವು ಯಾವ ರಾಜಕೀಯ ಪಂಗಡಕ್ಕೆ ಸೇರಿದವರು ಎಂದು ಪ್ರಶ್ನಿಸಿದರೆ ಅವರು ಉತ್ತರಿಸಬಲ್ಲರು. ಆದರೆ ಭರತಖಂಡದ ರೈತನ ಬಳಿ ಪ್ರಶ್ನಿಸಿದರೆ ಅವನಿಗೆ ಅದರ ಬಗ್ಗೆ ತಿಳಿದಿರಲಾರದು. "ನಿನ್ನ ಧರ್ಮ ಯಾವುದು?" ಎಂದು ಪ್ರಶ್ನಿಸಿದರೆ ಆತ "ನೋಡು ಮಿತ್ರನೆ, ಅದನ್ನು ಹಣೆಯ ಮೇಲೆ ಬರೆದಿರುವೆನು" ಎನ್ನುವನು. ಇದೇ ನಮ್ಮ ರಾಷ್ಟ್ರ ಜೀವನ.

ಪ್ರತಿಯೊಂದು ಜನಾಂಗಕ್ಕೆ ಒಂದು ವಿಧವಾದ ಸಂಸ್ಕಾರವಿದೆ. ಪ್ರತಿಯೊಂದು ಜನಾಂಗಕ್ಕೂ ನಿರ್ದಿಷ್ಟವಾದ ಉದ್ದೇಶವಿರುತ್ತದೆ. ರಾಜಕೀಯ ಮಹತ್ವವಾಗಲಿ, ಸೇನಾಶಕ್ತಿಯಾಗಲಿ ನಮ್ಮ ಜನಾಂಗದ ಗುರಿಯಲ್ಲ. ಜನಾಂಗದ ಕರ್ತವ್ಯವೇ ಬೇರೆ ಜನಾಂಗದ ಆಧ್ಯಾತ್ಮಿಕ ಶಕ್ತಿಯೆಲ್ಲ ಒಟ್ಟು ಸೇರುವುದು. ನಂತರ ಸಮಯ ಬಂದಾಗ ಆ ಆಧ್ಯಾತ್ಮಿಕ ಶಕ್ತಿಯೆಂಬ ಪ್ರವಾಹದಿಂದ ಜಗತ್ತನ್ನು ಸಂಪೂರ್ಣವಾಗಿ ವ್ಯಾಪ್ತಿಸುವುದು ಅದರ ಮುಖ್ಯಗುರಿ. ಆಧ್ಯಾತ್ಮಿಕ ಜ್ಞಾನವೇ ಪ್ರಪಂಚಕ್ಕೆ ಭರತಖಂಡ ಕೊಡುವ ಬಹುಮಾನವಾಗಿದೆ. ಪರ ರಾಷ್ಟ್ರಗಳ ಮೇಲೆ ನಮ್ಮ ಧರ್ಮ ತನ್ನ ಪ್ರಭಾವವನ್ನು ಬೀರುತ್ತಿದೆ. ಎಂದರೆ ನಮ್ಮ ಧರ್ಮದಲ್ಲಿ ಮೂಲವಾದ ಅದರ ಹಿನ್ನೆಲೆಯಾದ, ತತ್ತ್ವಗಳು ಮಾತ್ರ ಎಂದು ಹೇಳಬೇಕಾಗಿದೆ. ಹಲವು ಶತಮಾನಗಳಿಂದ ಸಮಾಜದ ಹಿತರಕ್ಷಣೆಯ ಅವಶ್ಯಕತೆಗಾಗಿ ಉದಯಿಸಿದ ಆಚಾರ ವ್ಯವಹಾರಗಳು ಗೌಣ. ಅವು ಧರ್ಮವಲ್ಲ. ನಮ್ಮ ಶಾಸ್ತ್ರದಲ್ಲಿ ಎರಡು ವಿಧವಾದ ಸತ್ಯಗಳಿವೆ. ಮೊದಲನೆಯದು – ಸೃಷ್ಟಿಯ ಅನಂತತೆ. ಜಗತ್ತು ಶೂನ್ಯದಿಂದ ಜನಿಸಿಲ್ಲ. ಅದು ಆದಿಯಲ್ಲಿ ಇದ್ದ ಸೂಕ್ಷ್ಮ ವಸ್ತುವಿನ ವಿಕಾಸ. ಅದು ಯುಗ ಪ್ರವಾಹ ಸಂಬಂಧವಾದ ಅದ್ಭುತ ನಿಯಮಾವಳಿಯ ಮೇಲೆ ನಿಂತಿದೆ. ಇದು ಪ್ರಕೃತಿಯ ಸರ್ವವ್ಯಾಪಿ ನಿಯಮಾವಳಿಯ ಮೇಲೆ ನಿಂತ ಸನಾತನ ತತ್ತ್ವಗಳಾಗಿವೆ. ಎರಡನೆಯದು ಗೌಣ ನಿಯಮಗಳು. ಇವಕ್ಕೂ ಆಧ್ಯಾತ್ಮಿಕ ತತ್ತ್ವಕ್ಕೂ ಸಂಬಂಧವಿಲ್ಲ. ಇದು ಕಾಲಕಾಲಕ್ಕೆ ಬದಲಾಗುತ್ತಿದೆ. ಒಂದು ಕಾಲದ, ಒಂದು ಯುಗದ ಆಚಾರ ವ್ಯವಹಾರಗಳು ಮತ್ತೊಂದು ಕಾಲಕ್ಕೆ, ಯುಗಕ್ಕೆ ಅನ್ವಯಿಸುವುದಿಲ್ಲ.

ಜೀವಾತ್ಮ, ಪರಮಾತ್ಮ, ಬ್ರಹ್ಮಾಂಡ ಇವುಗಳಿಗೆ ಸಂಬಂಧಪಟ್ಟ ಅಪೂರ್ವ ಅನಂತ ಮಹಾತತ್ತ್ವಗಳು ಭರತಖಂಡದಲ್ಲಿ ಉತ್ಪನ್ನವಾಗಿವೆ. ಮಾನವನ ಅನಂತತೆಯ ಮೇಲೆ ನಿಂತ ಈ ಸನಾತನ ತತ್ತ್ವಗಳು, ಮಾನವನ ಹಿತಕ್ಕೆ ಹಿಂದೆ ಹೇಗೆ ಪ್ರಯೋಜನಕಾರಿಯಾಗಿದ್ದವೋ ಹಾಗೆಯೇ ಈಗಲೂ ಆಗಿದೆ. ಈ ತತ್ತ್ವಗಳು ಪ್ರಪಂಚವಿರುವವರೆಗೆ ಚಿರ ಜಾಗೃತವಾಗಿರುವುವು. ಎಲ್ಲಕ್ಕಿಂತ ಹೆಚ್ಚಾಗಿ ಭರತಖಂಡ,

ಪ್ರಪಂಚಕ್ಕೆ ಮಾಡುವ ಮಹಾದಾನ ಇದು. ಪ್ರಪಂಚದಲ್ಲಿ ಎಲ್ಲಿಯಾದರೂ ಧಾರ್ಮಿಕ ಭಾವನೆಗಳ ಮೇಲೆ ಸ್ವಲ್ಪ ಸಹಿಷ್ಣುತೆ ಇದ್ದರೆ, ದಯೆ ಇದ್ದರೆ, ಅದು ಈ ಆರ್ಯ ಭೂಮಿಯೊಂದರಲ್ಲಿ ಮಾತ್ರ. ಶಿವನನ್ನು ಲಿಂಗದಲ್ಲಿ ಮಾತ್ರ ನೋಡದೆ ಎಲ್ಲೆಡೆಯಲ್ಲಿಯೂ ಅವನನ್ನು ನೋಡಿದಾಗ ಮಾತ್ರ ನಮ್ಮ ಶಿವಭಕ್ತಿ ಪೂರ್ಣವಾಗುವುದು. ಎಲ್ಲೆಲ್ಲಿಯೂ ಎಲ್ಲದರಲ್ಲಿಯೂ ಯಾರು ಹರಿಯನ್ನು ನೋಡಬಲ್ಲರೋ ಅವನೇ ಸಾಧು, ಅವನೇ ಹರಿಭಕ್ತ. ಯಾವ ನಾಮರೂಪಗಳಿಂದ ಅವನನ್ನು ಕರೆಯಲಿ, ಪೂಜೆಯೆಲ್ಲ ಅವನಿಗೆ ಸಲ್ಲಬೇಕು. ಈ ಪ್ರಪಂಚಕ್ಕೆ ಏನು ಬೇಕೋ ಅದು, ನಮಗಿಂತ ಅವನಿಗೆ ಚೆನ್ನಾಗಿ ಗೊತ್ತು. ಈ ವೈವಿಧ್ಯ ಮಾಯವಾಗುವುದಿಲ್ಲ, ಅದು ಇರಲೇ ಬೇಕು. ವೈವಿಧ್ಯ ಇಲ್ಲದೆ ಇದ್ದರೆ ಸೃಷ್ಟಿ ನಾಶವಾದಂತೆ. ಈ ಆಲೋಚನೆಯ ಘರ್ಷಣೆಯಿಂದಲೇ, ಭಿನ್ನತೆಯಿಂದಲೇ ಬೆಳಕು ಉತ್ಪನ್ನವಾಗುವುದು, ಚಲನೆ ಪ್ರಾರಂಭವಾಗುವುದು ವೈವಿಧ್ಯತೆಗಾಗಿ ಒಬ್ಬರನ್ನೊಬ್ಬರು ದ್ವೇಷಿಸುವುದು, ಕಾದಾಡುವುದು ಸರಿಯಲ್ಲ. ಈ ಧರ್ಮವು ನಮ್ಮ ದೇಶದಲ್ಲಿ ಮಾತ್ರ ಅನುದಿನವೂ ಅನುಷ್ಠಾನಗೊಳ್ಳುತ್ತಿರುವುದು. ಆದರೆ ಈ ಧರ್ಮವು ಕೇವಲ ಪಂಡಿತರಿಗೆ ಮಾತ್ರ ಸೀಮಿತವಾಗಿರಬಾರದು. ಅದರಲ್ಲಿರುವ ಶಾಂತಭಾವ, ಅನ್ಯಮತ ಸಹಿಷ್ಣುತೆ, ದಯೆ, ಸಹೋದರತ್ವ ಮುಂತಾದುವನ್ನು ಯಾವ ಜಾತಿ ಕುಲಗೋತ್ರಕ್ಕೆ ಸೇರಿರಲಿ, ಎಲ್ಲರೂ ಅನುಷ್ಠಾನಕ್ಕೆ ತರಬೇಕು, ಎಂದು ಸ್ವಾಮಿ ವಿವೇಕಾನಂದರು ಧರ್ಮದೊಳಗಿರುವ ಚಿಂತನೆಯನ್ನು ನಮ್ಮ ಮುಂದಿಡುವುದರ ಮೂಲಕ ಅದರ ಪಾಲನೆ ಘೋಷಣೆ ನಮ್ಮೆಲ್ಲರ ಕರ್ತವ್ಯವಾಗಬೇಕೆಂದರು.

೨.೩.೨. ಪೂಜೆಯ ಸ್ವರೂಪ

ಧರ್ಮ ಇರುವುದು ಪ್ರೀತಿಯಲ್ಲಿ, ಬಾಹ್ಯಾಚಾರದಲ್ಲಿ ಅಲ್ಲ. ಧರ್ಮಕ್ಕೆ ಶುದ್ಧ ನಿಷ್ಕಪಟ ಹೃದಯವೇ ಮುಖ್ಯ. ಮನಸ್ಸಿನ ಪರಿಶುದ್ಧತೆ ಇಲ್ಲದೆ ದೇವಸ್ಥಾನಕ್ಕೆ ಹೋಗಿ ಪ್ರಾರ್ಥಿಸಿದರೂ, ಪ್ರಯೋಜನವಿಲ್ಲ. ಪರಿಶುದ್ಧ ದೇಹದಿಂದ ಮತ್ತು ಮನಸ್ಸಿನಿಂದ ಪ್ರಾರ್ಥಿಸಿದರೆ ಶಿವ ಅದನ್ನು ನೆರವೇರಿಸುವನು. ಬಾಹ್ಯ ಪೂಜೆ ಆಂತರಿಕ ಪೂಜೆಯ ಚಿಹ್ನೆ ಮಾತ್ರ. ಆಂತರಿಕ ಪೂಜೆಗೆ ಅಂತರಂಗ ಶುದ್ಧಿಯೇ ಮುಖ್ಯ. ಇದಿಲ್ಲದೇ ಬಾಹ್ಯ ಪೂಜೆಯಿಂದ ಪ್ರಯೋಜನವಿಲ್ಲ. ಈ ಕಲಿಯುಗದಲ್ಲಿ ಎಂತಹ ಮಹಾಪಾತಕ ಮಾಡಿದರೂ ಪುಣ್ಯಸ್ಥಳಕ್ಕೆ ಹೋದರೆ ದೇವರು ಅವರ ಪಾತಕವನ್ನು ಕ್ಷಮಿಸುವರೆಂದು ಭಾವಿಸುವರು. ಕಳ್ಳಮನಸ್ಸಿನಿಂದ ದೇವಸ್ಥಾನಕ್ಕೆ ಹೋದರೆ ಪಾಪದ ಹೊರೆ ಹೆಚ್ಚಾಗುವುದೇ ಹೊರತು ಕಡಿಮೆಯಾಗಲಾರದು.

ತೀರ್ಥವೆಂದರೆ ಪವಿತ್ರ ವಸ್ತುಗಳಿರುವ ಸ್ಥಳ, ಮಹಾತ್ಮರು ವಾಸಿಸಿರುವ, ವಾಸ ಮಾಡುವ ಸ್ಥಳ, ಮಹಾತ್ಮರು ಇದ್ದು, ಅಲ್ಲಿ ದೇವಸ್ಥಾನವಿಲ್ಲದಿದ್ದರೂ, ಆ ಸ್ಥಾನ ತೀರ್ಥಸ್ಥಾನವಾಗುವುದು. ಅಯೋಗ್ಯರು ಇರುವಲ್ಲಿ ನೂರು ದೇವಸ್ಥಾನವಿದ್ದರೂ ಪ್ರಯೋಜನವಿಲ್ಲ. ನಾವು ಸ್ವತಃ ಪರಿಶುದ್ಧರಾಗಿದ್ದು, ಇತರರಿಗೆ ಒಳ್ಳೆಯದನ್ನು ಮಾಡುವುದು ನಿಜವಾದ ಪೂಜೆಯ ಸಾರ. ಯಾರು ಬಡವರಲ್ಲ, ದುರ್ಬಲರಲ್ಲ, ಅಸಹಾರಕರಲ್ಲ, ರೋಗಿಗಳಲ್ಲಿ ಯಾರು ಶಿವನನ್ನು ನೋಡುವರೋ ಅವರೇ ನಿಜವಾದ ಶಿವನ ಆರಾಧಕರು. ಜಾತಿ ಕುಲಗೋತ್ರಗಳನ್ನು ಲೆಕ್ಕಿಸದೆ ಯಾರು ಅನಾಥನಲ್ಲಿ ಶಿವನನ್ನು ಕಂಡು ಅವನಿಗೆ ಸಹಾಯ ಮಾಡುವನೋ ಅವರ ಮೇಲೆ ಶಿವನಿಗೆ ಕೇವಲ ತನ್ನನ್ನು ವಿಗ್ರಹದಲ್ಲಿ ನೋಡುವವರಿಗಿಂತ ಹೆಚ್ಚು ಪ್ರೀತಿ.

ಮೊದಲು ನಾವು ಪರಿಶುದ್ಧರಾಗಬೇಕು. ಅಲ್ಲದೆ ನಮ್ಮ ಬಳಿ ಯಾರಾದರೂ ಸಹಾಯ ಕೇಳಿ ಬಂದಾಗ ಅವರಿಗೆ ಒಳ್ಳೆಯ ಮನಸ್ಸಿನಿಂದ ಸಹಾಯ ಮಾಡಬೇಕು ಇದೇ ಸತ್ಕರ್ಮ. ಇದರಿಂದ ಚಿತ್ತಶುದ್ಧಿಯಾಗುವುದು. ಆ ಮೂಲಕ ಸರ್ವಜೀವಿಗಳಲ್ಲಿ ನೆಲಸಿರುವ ಶಿವನ ದರ್ಶನವಾಗಲು ಸಾಧ್ಯ. ಕನ್ನಡಿಯಲ್ಲಿ ಪ್ರತಿರೂಪ ಕಾಣಬೇಕಾದರೆ ಕನ್ನಡಿ ಶುಚಿಯಾಗಿರಬೇಕು. ನಮ್ಮಲ್ಲಿರುವ ಅಜ್ಞಾನ ಮತ್ತು ದೌರ್ಜನ್ಯವೇ ನಮ್ಮ ಹೃದಯದ ಕನ್ನಡಿಗೆ ಅಂಟಿರುವ ಧೂಳಾಗಿದೆ. ನಮ್ಮ ಹಿತವನ್ನೇ ಕುರಿತು ಆಲೋಚಿಸುವ ಸ್ವಾರ್ಥತೆಯೇ ಮಹಾಪಾಪ. ಯಾರು ಇನ್ನೊಬ್ಬರ ಒಳಿತನ್ನು ಬಯಸುವನೋ ಆತನೇ ನಿಸ್ವಾರ್ಥಿ. ಯಾರಲ್ಲಿ ಈ ನಿಸ್ವಾರ್ಥತೆ ಹೆಚ್ಚಾಗಿದೆಯೋ ಅವನು ಹೆಚ್ಚು ಧಾರ್ಮಿಕ, ಅವನು ಶಿವನಿಗೆ ಸಮೀಪವರ್ತಿಯಾಗಿರುವನು. ನಿಸ್ವಾರ್ಥಿಯಾದ ವ್ಯಕ್ತಿ ಯಾರೇ ಆಗಿರಲಿ ಆತನು ಪರಮಾತ್ಮನಿಗೆ ಸಮೀಪದಲ್ಲಿರುವನು. ಸ್ವಾರ್ಥಿಯಾಗಿದ್ದು ದೇವಸ್ಥಾನಗಳನ್ನು ಸಂದರ್ಶಿಸಿ ಹರಕೆ ಹೊರುವುದರ ಮೂಲಕ, ತೀರ್ಥಸ್ನಾನ ಕೈಗೊಂಡು ತೀರ್ಥಯಾತ್ರೆಯನ್ನು ಮಾಡಿದ್ದರೂ, ಅವರು ಶಿವನಿಗೆ ಬಹಳ ದೂರದಲ್ಲಿರುವರು. ಅವರು ಶಿವನನ್ನು ಯಾವತ್ತೂ ಮುಟ್ಟಲು ಸಾಧ್ಯವಿಲ್ಲ. ಈ ವಿಧವಾಗಿ ನಿಜಪೂಜೆಯು ಯಾವುದೆಂದು ವಿವೇಕಾನಂದರು ಜನತೆಗೆ ಮನವರಿಕೆ ಮಾಡುವರು. ಆಡಂಬರದ ಭಕ್ತಿಯನ್ನು ಟೀಕಿಸುವರು. ಯಾವುದು ನಿಷ್ಠೆಯ ಭಕ್ತಿ, ಯಾವುದರಿಂದ ಮಾನಸಿಕ ನೆಮ್ಮದಿಯನ್ನು ಕಾಯ್ದುಕೊಳ್ಳಲು ಸಾಧ್ಯವೆಂಬುದನ್ನು ವಿವರಿಸುವರು.

ಪ್ರತಿಯೊಂದು ದೇಶದಲ್ಲಿ ಮತ್ತು ಪ್ರತಿಯೊಂದು ಧರ್ಮದಲ್ಲಿಯೂ ಪ್ರಗತಿಗಾಮಿ ತತ್ತ್ವಗಳು ಹುಟ್ಟಿಕೊಳ್ಳುವುವು. ತತ್ತ್ವಗಳ ಮೂಲಕ ಕೆಲಸ ಮಾಡುವ ಶಕ್ತಿ ಧರ್ಮದೊಳಗಡೆ ವ್ಯಕ್ತವಾಗುವುದು. ಅದರ ಹಿಂದೆ ಪೂಜೆಯ ಪ್ರಪಂಚಕ್ಕೆ ಸಂಬಂಧಪಟ್ಟ ಸಿದ್ಧಾಂತ, ಶಾಸ್ತ್ರ, ನಿಯಮಾವಳಿಗಳಿರುವುವು. ಇದು ಆಧ್ಯಾತ್ಮಿಕ ಪೂಜೆಯನ್ನು ಗ್ರಹಿಸಲು ಇರುವ ಬಾಹ್ಯಕ್ರಮಗಳು ಯಾವ ದೇಶದಲ್ಲಿಯಾದರೂ ಬಹುಪಾಲು ಜನರು ಅಧ್ಯಾತ್ಮದಂತೆ ಪೂಜಿಸಲಾರರು. ಇದು ಎಲ್ಲರಿಗೂ ಸಾಧ್ಯವಾಗುವ ವಿಷಯವಲ್ಲ. ಇಂದ್ರಿಯ ಪ್ರಪಂಚದಲ್ಲಿರುವ ನಮಗೆ ನಿರ್ದಿಷ್ಟವಾದ ಶಿಸ್ತುಗಳು ಅಗತ್ಯವಿದೆ. ಈ ಮೂಲಕ ಬಾಹ್ಯಪೂಜೆಯ ಕ್ರಮಗಳನ್ನು ಅರ್ಥೈಸಿಕೊಳ್ಳಬಹುದು ಹೊರತಾಗಿ ಆಧ್ಯಾತ್ಮಿಕ ಆದರ್ಶಗಳನ್ನು ಗ್ರಹಿಸಲು ಸಾಧ್ಯವಿಲ್ಲ. ಅನಾಗರಿಕರಾಗಿರುವ ಜನರ ಧಾರ್ಮಿಕ ಭಾವನೆಯು ಅನಾಗರಿಕವಾಗಿರುವುವು. ಜನರು ಸುಸಂಸ್ಕೃತರಾಗಿದ್ದರೆ, ಸೂಕ್ಷ್ಮವಾಗಿದ್ದರೆ, ಅವರ ಆದರ್ಶಗಳು ಆತ್ಮಕ್ಕೆ ಸಂಬಂಧಿಸಿರುವುವು. "ಮಹಮ್ಮದೀಯರಷ್ಟು ಬಾಹ್ಯಸಾಧನಗಳನ್ನು ಪೂಜಿಸುವುದನ್ನು ವಿರೋಧಿಸಿದವರು ಮತ್ತೊಬ್ಬರಿರಲಿಲ್ಲ. ಮಹಮ್ಮದೀಯರು ಧರ್ಮದಲ್ಲಿ ಚಿತ್ರಗಳನ್ನಾಗಲಿ, ವಿಗ್ರಹಗಳನ್ನಾಗಲಿ, ಸಂಗೀತವನ್ನಾಗಲಿ ಎಲ್ಲವನ್ನೂ ಬಹಿಷ್ಕರಿಸಿದರು. ಇವೆಲ್ಲಾ ಬಾಹ್ಯಾಚಾರಕ್ಕೆ ಒಯ್ಯುವುವು" ಎಂದು ಭಾವಿಸಿದರು. (ಸ್ವಾಮಿ ವಿವೇಕಾನಂದ ಕೃತಿ ಶ್ರೇಣಿ : ಸಂಪುಟ–೯, ಪುಟ–೨೯೫) ಆದರೆ ಮಹಮ್ಮದ್ ಕಾಲವಾಗಿ ಎರಡು ಶತಮಾನಗಳಿಗಿಂತ ಮುಂಚೆಯೇ ಮಹಾತ್ಮರ ಪೂಜೆ ತಲೆದೋರಿದ್ದವು. ಬಾಹ್ಯ ಪೂಜೆ ನಾವು ಸಾಗಿ ಹೋಗಬೇಕಾದ ಒಂದು ಹಂತ. ಇದಕ್ಕೆ ವಿರೋಧವಾಗಿ ಹೋಗುವುದು ಸರಿಯಲ್ಲ. ಪೂಜೆಯಲ್ಲಿ ಶ್ರೇಷ್ಠವಾದುದನ್ನು ತೆಗೆದುಕೊಂಡು ಅದರ ಹಿಂದಿನ ತತ್ವವನ್ನು ಪರಿಶೀಲಿಸಬೇಕು. ಮರವನ್ನು, ಕಲ್ಲನ್ನು ಪೂಜಿಸುವುದು ಅಜ್ಞಾನವೆಂದು ತೋರಬಹುದು. ಆದರೆ ಪ್ರಕೃತಿ ಪೂಜೆ ಮಾನವಕೋಟಿ ಸಾಗಿ ಹೋದ ಒಂದು ಪೂಜಾಸ್ಥಿತಿ. ಮನುಷ್ಯ ಆಧ್ಯಾತ್ಮಿಕವನ್ನಲ್ಲದೆ ಬೇರೆ ಯಾವುದನ್ನೂ ಪೂಜಿಸಲಿಲ್ಲ. ಕಲ್ಲು ಮತ್ತು ಮರದಲ್ಲಿ ಆತ್ಮನನ್ನು ಗ್ರಹಿಸಿದನು.

ಭರತಖಂಡದಲ್ಲಿ ಬಾಹ್ಯಪೂಜೆಗಳಲ್ಲಿ ಅನೇಕ ರೀತಿಯ ಪೂಜೆಗಳನ್ನು ಕಾಣುವೆವುವು ಇಂತಹ ಪದ್ಧತಿ ಭರತಖಂಡದಲ್ಲಿ ದಾರುಣವಾಗಿದೆ. ಇವುಗಳೆಲ್ಲ ಕ್ಷಯಿಸುತ್ತಿರುವ ಜನಾಂಗದ ಚಿಹ್ನೆ, ಪತನ ಸೂಚಕ, ಅಂಜಿಕೆಯ ಲಕ್ಷಣ. ನಿಜವಾದ ಜೀವನದ, ಓಜಸ್ಸಿನ, ಭರವಸೆಯ, ಆರೋಗ್ಯದ ಅಲ್ಲದೆ ಪ್ರತಿಯೊಂದು ಒಳ್ಳೆಯದರ ಲಕ್ಷಣವೇ ಶಕ್ತಿ. "ಬದುಕಿರುವವರೆಗೆ ದೇಹದಲ್ಲಿ ಶಕ್ತಿ ಇರಬೇಕು, ಮನಸ್ಸಿನಲ್ಲಿ ಶಕ್ತಿ

ಇರಬೇಕು, ಕೈಕಾಲುಗಳಲ್ಲಿ ಶಕ್ತಿ ಇರಬೇಕು". (ಸ್ವಾ ವಿ. ಕೃತಿ ಶ್ರೇಣಿ, ಸಂ.–೯, ಪುಟ–೨೯೮) ಕೆಲಸಕ್ಕೆ ಬಾರದ ಗೊಣಗಾಟಗಳಿಂದ ಆಧ್ಯಾತ್ಮಿಕ ಶಕ್ತಿಯನ್ನು ಗಳಿಸಲು ಸಾಧ್ಯವಿಲ್ಲ. ಯಾವುದಕ್ಕಾದರೂ ಪ್ರಾರ್ಥಿಸುವುದು ಪ್ರಾರ್ಥನೆಯನ್ನೇ ಮಾಡದೆ ಇರುವುದಕ್ಕಿಂತ ಮೇಲು. ಇವುಗಳೆಲ್ಲ ನಾವು ಸಾಗಿಹೋಗಬೇಕಾದ ಮೆಟ್ಟಿಲುಗಳು. ಕ್ರಮೇಣ ಮನಸ್ಸು ಇಂದ್ರಿಯಾತೀತವಾದುದನ್ನು ದೇಹಾತೀತವಾದುದನ್ನು ಈ ಪ್ರಪಂಚದ ಭೋಗಕ್ಕೆ ಅತೀತವಾದುದನ್ನು ಕುರಿತು ಯೋಚಿಸುವುದು.

ಮನುಷ್ಯ ಸಮಸ್ಯೆಯನ್ನು ಕುರಿತು ಯೋಚಿಸ ತೊಡಗಿದರೆ, ಅಲ್ಲಿ ಇಂದ್ರಿಯ ಸುಖವಿರುವುದಿಲ್ಲ. ಅಲ್ಲಿ ಆಲೋಚನೆಯ ಮಹಾದಾನಂದವಿದೆ. ಇದರಿಂದ ಏಕಾಗ್ರತೆ ಬರುವುದು. ಆಗ ದೇಹದ ಪರಿವೆಯೇ ಇರುವುದಿಲ್ಲ. ಆ ಮೂಲಕ ಯಾರು ಅಪಹರಿಸಲಾರದಂತಹ ದೇಹಕ್ಕಿಂತ ಅತೀತವಾದ ಅನುಭವವಾಗುವುದು. ಅಲ್ಲಿ ಮನಸ್ಸಿನ ಗುರಿ ಮುಖ್ಯವಾಗುವುದು. ಆಗ ಅನಂತಾತ್ಮನ ಕ್ಷಣಿಕದರ್ಶನವಾಗಲು ಸಾಧ್ಯ. ಅನಂತರ ಇಂದ್ರಿಯಗಳು, ಇಂದ್ರಿಯ ಸುಖ, ನಮ್ಮಲ್ಲಿರುವ ದೇಹಾಸಕ್ತಿ ಇವುಗಳೆಲ್ಲ ಮಾಯವಾಗುವುವು. ಅಧ್ಯಾತ್ಮ ಅಧ್ಯಾತ್ಮದಂತೆ ಲೌಕಿಕವಾದುದನ್ನು ಪಡೆಯುವುದಲ್ಲ ಎಂಬುದು ಅರ್ಥವಾಗುವುದು. ಸಿದ್ಧಾಂತಗಳಲ್ಲಿ ನಂಬಿಕೆಯಾಗಲಿ ಸಹಸ್ರಾರು ದೇವಾಲಯಗಳಿಗೆ ಹೋಗುವುದಾಗಲಿ ಪ್ರಪಂಚದ ನದಿಗಳಲ್ಲೆಲ್ಲಾ ಸ್ನಾನ ಮಾಡುವುದಾಗಲಿ ಪೂಜೆ ಎನಿಸಲಾರದು. ಮಂತ್ರದ್ರಷ್ಟನಾಗುವುದರಿಂದ, ಋಷಿಯಾಗುವುದರಿಂದ ಮಾತ್ರ ಮುಕ್ತಿ ಅಥವಾ ಸ್ವಾತಂತ್ರ್ಯ ಸಾಧ್ಯ. ಇದು ನಿಜವಾದ ಭಕ್ತಿ ಪೂಜೆ ಎನಿಸಿಕೊಳ್ಳುವುದು. ಚಿತ್ತ ಶುದ್ಧಿಯಾಗಿ ಹೃದಯ ಶುದ್ಧಿಯಾಗಿ, ನಿಷ್ಕಪಟವಾಗಿದ್ದರೆ ಪೂಜೆ ಸತ್ಯವಾಗುವುದು.

೨.೩.೩. ವೇದಾಂತದ ತಿರುಳು

ನಮ್ಮ ಜೀವನದ ಮೂಲ, ನಮ್ಮ ಕ್ರಿಯೆ, ನಮ್ಮ ಜೀವಾಳ ಎಲ್ಲಾ ಧರ್ಮವಾಗಿದೆ. ಪ್ರತಿಯೊಂದು ದೇಶಕ್ಕೂ ತನ್ನದೇ ಆದ ಆದರ್ಶವಿದೆ. ಅದು ರಾಜಕೀಯ, ಸಾಮಾಜಿಕ ಇಲ್ಲವೆ ಪಾಂಡಿತ್ಯಕ್ಕೆ ಸಂಬಂಧಪಟ್ಟದ್ದಿರಬಹುದು. ಆದರೆ ಭರತಖಂಡದಲ್ಲಿ ಆ ಮುಲ ಕೇಂದ್ರ ತಳಹದಿಯೇ ಧರ್ಮ. ಧರ್ಮವೊಂದೇ ಹಿಂದೂಗಳ ಏಕಮಾತ್ರ ಆಸಕ್ತಿ. ಧರ್ಮವು ನಮ್ಮ ರಕ್ತದಲ್ಲಿ ಬೆರೆತು ಹೋಗಿದೆ. ಅಲ್ಲದೆ ನಮ್ಮ ಬಾಳಿನ ಉಸಿರಾಗಿದೆ. ಧರ್ಮವನ್ನು ಅನುಸರಿಸುವುದೇ ಜೀವನದ

ಮಾರ್ಗ, ಏಳ್ಗೆಯ ಮಾರ್ಗ, ಶ್ರೇಯಸ್ಸಿನ ಮಾರ್ಗ, ಉಳಿದ ದೇಶಗಳಲ್ಲಿ ಧರ್ಮ ಹಲವು ಅವಶ್ಯಕ ವಸ್ತುಗಳಲ್ಲಿ ಒಂದು. ಧರ್ಮವಿರುವುದು ಇಹಲೋಕದ ಭೋಗಕ್ಕಲ್ಲ. ಮೂರು ದಿನ ಬಾಳುವ ಈ ಪ್ರಪಂಚವನ್ನೇ ನಮ್ಮ ಜೀವನದ ಪರಮ ಗುರಿಯನ್ನಾಗಿ ಮಾಡಲಾಗದು. ಈ ಕೆಲವು ದಿನಗಳಲ್ಲಿ ಸಂಸಾರವೇ ನಮ್ಮ ಧರ್ಮದ ಗುರಿಯಲ್ಲ. ನಮ್ಮದು ಇದನ್ನೆಲ್ಲವನ್ನು ಮೀರಿರುವಂತಹದ್ದು. ಇಂದ್ರಿಯ ಪರಿಮಿತಿಯಾಚೆ, ಕಾಲದೇಶಗಳಾಚೆ, ಎಲ್ಲದರಾಚೆ, ಅಲ್ಲಿ ಈ ಪ್ರಪಂಚದ ಲವಲೇಶವೂ ಇರುವುದಿಲ್ಲ. ಅಲ್ಲಿ ಆತ್ಮಜ್ಯೋತಿಯ ಮಹಾಸಾಗರದಲ್ಲಿ ಈ ಬ್ರಹ್ಮಾಂಡವೇ ಒಂದು ಬಿಂದುವಿನಂತೆ ತೋರುವುದು. ಇದುವೇ ನಮ್ಮ ನಿಜವಾದ ಧರ್ಮದ ಆಳ. ದೇವರೊಬ್ಬರೇ ಸತ್ಯ. ಈ ಸಂಸಾರವೇ ಬಹುಪಾಲು ದುಃಖಮಯವೆಂದು ಸಾರುವುದು ನಮ್ಮ ಧರ್ಮ. ಎಲ್ಲಕ್ಕಿಂತ ಹೆಚ್ಚಾಗಿ ಇದು ತ್ಯಾಗವನ್ನು ಸಾರುವುದು. ತ್ಯಾಗದಿಂದ ಮಾತ್ರ ಅಮೃತ ಪ್ರಾಪ್ತಿ ಭೋಗದಿಂದ ಅಲ್ಲ (ಸ್ವಾವಿ. ಕೃತಿಶ್ರೇಣಿ, ಸಂ.–೫, ಪು.–೭೧–೭೨).

ಮನುಷ್ಯ ಎಷ್ಟು ವಸ್ತುಗಳನ್ನು ಹೊಂದಬಹುದೆಂಬುದನ್ನು ನಿಶ್ಚಯಿಸಲು ಪಾಶ್ಚಾತ್ಯರು ಕಾತರರಾಗಿರುವರು. ಭಾರತೀಯರು ಮಾನವನ ಜೀವನಕ್ಕೆ ಎಷ್ಟು ಅಲ್ಪ ಸಾಕಾಗಬಹುದು ಎಂಬುದನ್ನು ಕಂಡುಹಿಡಿಯಲು ಯತ್ನಿಸುತ್ತಿರುವರು. ಈ ವಿಭಿನ್ನ ಹೋರಾಟ ಶತಮಾನಗಳವರೆಗೆ ನಡೆಯುವುದು. ಆದರೆ ಯಾರು ಅತಿ ಕಡಿಮೆಯ ಮೇಲೆ ಜೀವಿಸುವರೋ, ಯಾರು ಸಂಯಮಿಗಳೋ, ಅವರೇ ಕೊನೆಗೆ ಜಯಶಾಲಿಗಳಾಗುವರು. ಯಾರು ಸುಖ ಭೋಗಗಳನ್ನು ಬೆನ್ನಟ್ಟಿ ಹೋಗುವರೋ, ಅವರು ತಾತ್ಕಾಲಿಕವಾಗಿ ಎಷ್ಟೇ ಬಲಾಢ್ಯರಾಗಿ ಕಂಡರೂ ಕೊನೆಗೆ ನಾಶವಾಗಲೇಬೇಕು. ಕೇವಲ ಆರ್ಥಿಕ ಮತ್ತು ಸಾಮಾಜಿಕ ಚಿಕಿತ್ಸೆಯಿಂದಲೇ ಮಾನವನ ಸಮಸ್ಯೆಯನ್ನು ಬಗೆಹರಿಸಲು ಅಸಾಧ್ಯ. ಮಾನವ ಜೀವನವನ್ನು ಉತ್ತಮ ಪರಿಸ್ಥಿತಿಗೆ ತರುವುದರಿಂದ ಮಾತ್ರ ಇದು ಸಾಧ್ಯ. ಜನಾಂಗದಲ್ಲಿರುವ ದೋಷಗಳನ್ನು ಆಧ್ಯಾತ್ಮಿಕ ಮತ್ತು ನೈತಿಕ ಆದರ್ಶಗಳು ಮಾತ್ರ ನಿರ್ಮೂಲ ಮಾಡಬಲ್ಲವು. ಪಾಶ್ಚಾತ್ಯ ಜನಾಂಗಗಳು ಬಯಸುವ ಆಧ್ಯಾತ್ಮಿಕ ಭಾವನೆಗಳು ನಮ್ಮ ಪುರಾತನ ದರ್ಶನಗಳಲ್ಲಿ ಅದರಲ್ಲೂ ವೇದಾಂತದಲ್ಲಿ ದೊರೆತಿವೆಯೆಂದರೆ ಆಶ್ಚರ್ಯವಿಲ್ಲ. ನಮ್ಮ ಧರ್ಮ ವಿನಃ ಉಳಿದ ಧರ್ಮಗಳೆಲ್ಲ ಆಯಾಯ ಮತಸ್ಥಾಪಕರ, ಒಬ್ಬರ ಅಥವಾ ಹಲವು ಜೀವಿಗಳ ಮೇಲೆ ನಿಂತಿದೆ. ಅವರ ಸಿದ್ಧಾಂತ ಬೋಧನೆ ಮತ್ತು ನೀತಿಯೆಲ್ಲ ಆ ವ್ಯಕ್ತಿಯ ಜೀವನದ ಮೇಲೆ ನಿಂತಿದೆ. ನಮ್ಮ ಧರ್ಮದ ವಿನಃ ಪ್ರಪಂಚದ ಉಳಿದ ಪ್ರಮುಖ ಧರ್ಮಗಳೆಲ್ಲ ಅಂತಹ ವ್ಯಕ್ತಿಯ ಐತಿಹ್ಯದ ಮೇಲೆ

ನಿಂತಿದೆ. ನಮ್ಮ ಧರ್ಮ ನಿಂತಿರುವುದು ತತ್ತ್ವಗಳ ಮೇಲೆ. ವೇದವನ್ನು ಯಾರು ಸೃಷ್ಟಿಸಿಲ್ಲ. ಅಲ್ಲಿರುವುದು ಸನಾತನ ತತ್ತ್ವಗಳು. ಋಷಿಗಳು ಅದನ್ನು ಕಂಡು ಹಿಡಿದರು. ಧರ್ಮಕ್ಷೇತ್ರದಲ್ಲಿ ಪ್ರಪಂಚದ ಬಹುಮಂದಿ ಜನರನ್ನು ಒಂದೇ ರೀತಿ ಅಲೋಚಿಸುವಂತೆ ಮಾಡಲು ಸಾಧ್ಯವಾದರೆ ಅದು ಸನಾತನ ತತ್ತ್ವದ ಮೂಲಕ ಸಾಧ್ಯ. ಧರ್ಮದಲ್ಲಿ ವ್ಯಕ್ತಿಯ ಪ್ರಭಾವಕ್ಕೆ ಮತ್ತು ಅಧಿಕಾರಕ್ಕೆ ಬೇಕಾದಷ್ಟು ಅವಕಾಶವಿದೆ. ಇರುವ ಸಾಕಷ್ಟು ಧಾರ್ಮಿಕ ವ್ಯಕ್ತಿಗಳಲ್ಲಿ ಯಾರನ್ನು ಬೇಕಾದರೂ ಸ್ವೀಕರಿಸಬಹುದು. ಇವರಲ್ಲಿ ಯಾರಾದರೂ ಒಬ್ಬರನ್ನು ಗುರುಗಳಂತೆ, ಮಾರ್ಗದರ್ಶಕರಂತೆ ಪ್ರೀತಿಸಿ ಪೂಜಿಸಬಹುದು. ಅಂತೆಯೇ ಶ್ರೀಕೃಷ್ಣನ ಮಹಿಮೆ ಇರುವುದು ಅವನು ನಮ್ಮ ಪುರಾತನ ತತ್ತ್ವಗಳ ಅತಿ ಪ್ರಖ್ಯಾತ ಬೋಧಕ ಮತ್ತು ವೇದಾಂತದ ಮೇಲೆ ಭರತಖಂಡದಲ್ಲೇ ಸರ್ವೋತ್ಕೃಷ್ಟ ವ್ಯಾಖ್ಯಾನಕಾರ ಎನ್ನುವುದರ ಮೇಲೆ.

ಪ್ರಪಂಚದ ದೃಷ್ಟಿ ವೇದಾಂತದ ಕಡೆಗೆ ತಿರುಗಲು ಬಲವಾದ ಕಾರಣವಿದೆ. ವೇದಾಂತಕ್ಕೆ ಎಲ್ಲಾ ಧರ್ಮಶಾಸ್ತ್ರಗಳಿಗಿಂತ ಹೆಚ್ಚಾಗಿ ಬಾಹ್ಯ ಪ್ರಕೃತಿಯ ವೈಜ್ಞಾನಿಕ ನಿಯಮಾವಳಿಗಳೊಂದಿಗೆ ಸಾಮರಸ್ಯವಿರುವುದು. ಯಾರು ವಿಚಾರ ಮತಿಗಳೋ ಅವರೆಲ್ಲರಿಗೂ ವೇದಾಂತ ಹಲವು ಸಹಸ್ರ ವರುಷಗಳ ಹಿಂದೆ ಯಾವ ಸಿದ್ಧಾಂತವನ್ನು ಸಾರಿತೋ ಅದನ್ನೇ ಈಗ ಆಧುನಿಕ ವಿಜ್ಞಾನ ಸಾರುತ್ತಿರುವುವು. ಆಧುನಿಕ ವಿಜ್ಞಾನ ವೈಜ್ಞಾನಿಕ ಪರಿಭಾಷೆಯ ಮೂಲಕ ಈ ಸಿದ್ಧಾಂತವನ್ನು ವಿವರಿಸುವುದು. ಭರತಖಂಡದಲ್ಲಿರುವವರೆಲ್ಲ ಒಂದೇ ಧರ್ಮದವರಲ್ಲ. ಸಾಹಿತಿಕವಾಗಿ ವ್ಯತ್ಯಾಸವಿಲ್ಲದಿದ್ದರೂ ಧಾರ್ಮಿಕ ದೃಷ್ಟಿಯಿಂದ ಎಲ್ಲರೂ ಒಂದೇ ಎಂದು ಹೇಳಲು ಸಾಧ್ಯವಿಲ್ಲ. ಇಲ್ಲಿ ಹಲವು ಬಗೆಯ ಧರ್ಮಗಳು, ಭಾವನೆಗಳು, ಆಚಾರ ವ್ಯವಹಾರಗಳೆಲ್ಲವೂ ಒಟ್ಟುಗೂಡಿರುವುದು. ಹಲವು ಪಂಗಡದವರೆಲ್ಲರೂ ಒಪ್ಪಿಕೊಳ್ಳಬಹುದಾದ ಒಂದು ಭಾವನೆಯೇ ವೇದದಲ್ಲಿರುವ ನಂಬಿಕೆ. ವೇದಾಂತದ ಕರ್ಮಕಾಂಡದಲ್ಲಿ ಹಲವು ಯಾಗ ಯಜ್ಞಗಳು ಬರುವುವು. ಅವುಗಳ ಬಹುಭಾಗ ಈಗ ಬಳಕೆಯಲ್ಲಿ ಇಲ್ಲ. ಉಪದೇಶಗಳನ್ನು ಒಳಗೊಂಡಿರುವುದೇ ಜ್ಞಾನಕಾಂಡ. ಇದನ್ನೇ ಉಪನಿಷತ್ತು ವೇದಾಂತ ಎಂದು ಕರೆಯುವುದು.

ವೇದಾಂತವೆಂಬ ಪದದಲ್ಲಿ ಭರತಖಂಡದ ಭಿನ್ನ ಭಿನ್ನ ಮತಗಳೆಲ್ಲ ಸೇರಿರುವುದು. ವೇದಾಂತವು ವೇದದ ಒಂದು ಭಾಗವಾದುದರಿಂದ ಅದು ಎಲ್ಲರೂ ಒಪ್ಪುವಂತೆ ನಮ್ಮಲ್ಲಿರುವ ಅತಿ ಪುರಾತನ ಗ್ರಂಥ, "ಉಪನಿಷತ್ತಿನಲ್ಲಿ ಮುಂದೆ

ಬರುವ ಹಲವು ತತ್ತ್ವ ಸಂಪ್ರದಾಯಗಳು ಆಗಲೇ ಬೀಜ ಸ್ಥಿತಿಯಲ್ಲಿದೆ. ಪುರಾಣಗಳಲ್ಲಿ ಮತ್ತು ಇತರ ಸ್ಮೃತಿಗಳಲ್ಲಿ ಯಾವ ಭಾವಗಳೂ ಬಂದವೋ ಅವೆಲ್ಲ ಅಂಕುರಾವಸ್ಥೆಯಲ್ಲಿ ಉಪನಿಷತ್ತಿನಲ್ಲಿವೆ." (ಸ್ವಾ ವಿ. ಕೃತಿಶ್ರೇಣಿ, ಸಂಪುಟ–೫, ಪುಟ–೧೨೧) ಉಪನಿಷತ್ತಿನಲ್ಲಿರುವುದು ಪ್ರೇಮ ಮತ್ತು ಜ್ಞಾನಮಯ ಧರ್ಮ.

ನಮ್ಮಲ್ಲಿ ಹಾಗೂ ನಮ್ಮ ಸಮಾಜದಲ್ಲಿ ಎಷ್ಟೋ ವಿರೋಧ ಆಚಾರಗಳಿವೆ. ಇವಕ್ಕೆ ಹಿಂದೂಶಾಸ್ತ್ರದಲ್ಲಿ ಯಾವ ಪ್ರಮಾಣವೂ ಇಲ್ಲ. ಹಲವು ಆಚಾರಗಳಿಗೆ ವೇದಸ್ಮೃತಿ ಪುರಾಣ ಯಾವುದರಲ್ಲಿಯೂ ಪ್ರಮಾಣವಿಲ್ಲ. ಅವು ಕೇವಲ ಲೋಕಾಚಾರವಾಗಿವೆ. ಆದರೆ ಪ್ರತಿಯೊಬ್ಬ ತಿಳಿಯದವನು ಕೂಡ ಯಾವುದೇ ಒಂದು ಲೋಕಾಚಾರ ನಷ್ಟವಾದರೆ ತಾನು ಹಿಂದುತ್ವವನ್ನೇ ಕಳೆದುಕೊಳ್ಳುವೆನು ಎಂದು ಭಾವಿಸುವವನು. "ಶಾಸ್ತ್ರದಲ್ಲಿ ತಾನು ಮಾಡುತ್ತಿರುವುದಕ್ಕೆ ಆಧಾರವೇ ಇಲ್ಲ. ಅದನ್ನು ಬಿಡುವುದರ ಮೂಲಕ ಯಾವುದೇ ತೊಂದರೆ ಇಲ್ಲ". (ಸ್ವಾವಿ. ಕೃತಿಶ್ರೇಣಿ, ಸಂ.–೫, ಪು.–೧೨೨). ಅದನ್ನು ಬಿಡುವುದರಿಂದ ಉತ್ತಮನಾಗಬಹುದೆಂಬುದನ್ನು ಯೋಚಿಸಲಾರ. ಮೂಲದಲ್ಲಿ ವೇದ ಗ್ರಂಥಗಳು ಲುಪ್ತವಾಗಿ ಎಲ್ಲೋ ಸ್ವಲ್ಪ ಮಾತ್ರ ಉಳಿದಿರುವುದು. ನಮ್ಮ ಶ್ರುತಿಗಳನ್ನು ಅಧ್ಯಯನ ಮಾಡುವ ಮತ್ತು ಅವನ್ನು ವಿವರಿಸುವ ಹಲವು ತರದ ವಿಧಾನಗಳ ಮಧ್ಯದಲ್ಲಿ ಅವುಗಳ ಅಂತರಾಳದಲ್ಲಿರುವ ಏಕಮತವನ್ನು ಕಂಡುಹಿಡಿಯುವುದು ಬಹಳ ಕಷ್ಟ. ಹಲವು ಪಂಗಡಗಳ ಅಂತರಾಳದಲ್ಲಿ ಒಂದು ಸಾಮಾನ್ಯ ಭಾವನೆ ಇರವುದು. ಅಲ್ಲಿ ಒಂದು ಸಾಮರಸ್ಯವಿರಬೇಕು. ಯಾವುದೋ ಒಂದು ಸಾಮಾನ್ಯ ಯೋಜನೆಯ ಮೇಲೆ ಈ ಸಣ್ಣ ಪುಟ್ಟ ಯೋಜನೆಯನ್ನು ಕಟ್ಟಿರುವರು. ಈ ರೀತಿಯ ಧರ್ಮದ ಹಿಂದೆ ಸಾಮಾನ್ಯ ತಳಹದಿ ಇರಬೇಕೆಂಬುದರ ಅರಿವಾಗುವುದು. ಇಲ್ಲದೆ ಇದ್ದರೆ ಅದಕ್ಕೆ ಇಷ್ಟು ದಿನ ನಿಲ್ಲಲು ಸಾಧ್ಯವಾಗುತ್ತಿರಲಿಲ್ಲ. "ಶಾಸ್ತ್ರ ಅತಿ ಸುಂದರವಾಗಿದೆ. ಅವು ಅತಿ ಅದ್ಭುತವಾಗಿವೆ. ಅವುಗಳಲ್ಲಿ ಪರಸ್ಪರ ವಿರೋಧವಿಲ್ಲ. ಅವುಗಳಲ್ಲಿ ಸಾಮರಸ್ಯವಿದೆ. ಒಂದು ಭಾವನೆ ಮತ್ತೊಂದು ಭಾವನೆಗೆ ಒಯ್ಯುವುದು. ನನಗೆ ತೋರಿದ ಮತ್ತೊಂದು ಭಾವನೆಯೇ ಉಪನಿಷತ್ತುಗಳಲ್ಲಿ ಉಪಾಸನೆ ದ್ವೈತಭಾವದಿಂದ ಪ್ರಾರಂಭವಾಗಿ ಪರಮ ಅದ್ವೈತ ಭಾವನೆಯಲ್ಲಿ ಕೊನೆಗಾಣುವುದು" (ಸ್ವಾ ವಿ. ಕೃತಿಶ್ರೇಣಿ, ಸಂ.–೫, ಪು.–೧೨೪) ಎಂಬ ಸಾಮರಸ್ಯದ ಏಕತೆಯನ್ನು ವಿವೇಕಾನಂದರು ಕಂಡುಕೊಂಡರು. ಇವೆರಡು ಒಂದಕ್ಕೊಂದು ಪೂರಕ. ಉಪನಿಷತ್ತಿನ ಮೂಲವನ್ನು ಪೀಡಿಸುವುದು ತಿಳಿಗೇಡಿತನ. ಉಪನಿಷತ್ತಿನ ಭಾಷೆ ಅಪೂರ್ವವಾದುದು, ಮಾನವ ಜಾತಿಗೆ ಮುಕ್ತಿಪಥ. ದರ್ಶನ ಎಲ್ಲಕ್ಕಿಂತ ಹೆಚ್ಚಾಗಿ

ಅತೀಂದ್ರಿಯ ಸತ್ಯವನ್ನು ವಿವರಿಸುವುದು. "ಉಪನಿಷತ್ತು ಶಕ್ತಿಯ ಮಹಾಗಣಿ. ಪ್ರಪಂಚವನ್ನೆಲ್ಲ ಜಾಗೃತಗೊಳಿಸುವಷ್ಟು ಶಕ್ತಿ ಅಲ್ಲಿದೆ. ಪ್ರಪಂಚಕ್ಕೆ ಅದರ ಮೂಲಕ ಜೀವದಾನ ಮಾಡಬಹುದು, ಶಕ್ತಿಯನ್ನು ನೀಡಬಹುದು, ಸ್ಫೂರ್ತಿಯನ್ನು ನೀಡಬಹುದು" (ಸ್ವಾ. ವಿ. ಕೃತಿಶ್ರೇಣಿ, ಸಂ.–೫, ಪು.–೧೨೯) ದೈಹಿಕ, ಮಾನಸಿಕ, ಆಧ್ಯಾತ್ಮಿಕ ಸ್ವಾತಂತ್ರ್ಯವೇ ಉಪನಿಷತ್ತಿನ ಮೂಲಮಂತ್ರ. ಪ್ರತಿಯೊಬ್ಬರಲ್ಲೂ ಆತ್ಮಶ್ರದ್ಧೆ ಬರಲಿ. ವೀರರಂತೆ, ಧೀರರಂತೆ ನಿಂತು, ಪ್ರಚಂಡ ಬುದ್ಧಿಶಕ್ತಿಯಿಂದ ಪ್ರಪಂಚದಲ್ಲಿ ದೇವರಂತೆ ಚಲಿಸುವಂತಾಗಬೇಕು. ಇದಕ್ಕೆ ಶಕ್ತಿ ಮತ್ತು ಶ್ರದ್ಧೆಯು ಉಪನಿಷತ್ತಿನಿಂದ ದೊರೆಯುವುದು.

ಉಪನಿಷತ್ತುಗಳು ಪ್ರಾಚೀನ ಕಾಲದಲ್ಲಿ ಸಂನ್ಯಾಸಿಗಳಿಗೆ ಮಾತ್ರ ಸೀಮಿತವಾಗಿದ್ದವು. ಶಂಕರಾಚಾರ್ಯರು ಕೊಂಚ ದಯೆ ತಾಳಿ ಗೃಹಸ್ಥರು ಉಪನಿಷತ್ತನ್ನು ಓದಬಹುದು, ಅದರಿಂದ ಯಾವುದೇ ರೀತಿಯ ಅಪಾಯವಿಲ್ಲವೆಂದು ಸಾರಿದರು. "ವೇದಗಳ ಮೇಲೆ ಅಧಿಕಾರಯುತ ಭಾಷ್ಯವನ್ನು, ಆ ವೇದವನ್ನು ಪ್ರಚೋದಿಸಿದ ಶ್ರೀಕೃಷ್ಣನೇ ಗೀತೆಯಲ್ಲಿ ಮಾಡಿರುವನು. ಪ್ರಪಂಚದ ಎಲ್ಲಾ ಕಾರ್ಯಕ್ಷೇತ್ರಗಳಲ್ಲಿರುವ ಸರ್ವರಿಗೂ ಅದು ಅನ್ವಯಿಸುವುದು. ವೇದಾಂತದ ಈ ಭಾವನೆ ಹೊರಗೆ ಬರಬೇಕು" (ಸ್ವಾ. ವಿ. ಕೃತಿಶ್ರೇಣಿ, ಸಂ.–೫, ಪು.–೧೩೬) ಎಲ್ಲಾ ವರ್ಗದ ಜನರಿಗೂ ಮೇಲುಕೀಳು ಭೇದವಿಲ್ಲದೆ, ಪ್ರಾಯದ ಹಂಗಿಲ್ಲದೆ ವೇದಾತವು ನೆರವಾಗುವುವು. ಬದುಕನ್ನು ಸರಿದಾರಿಯಲ್ಲಿ ರೂಪಿಸಲು ಸಹಾಯ ಮಾಡುವುವು. ಧರ್ಮ ಅನಂತವಾಗಿದೆ. ಯಾರೂ ಇದರ ಚೌಕಟ್ಟನ್ನು ಮೀರಿ ಹೋಗಲು ಸಾಧ್ಯವಿಲ್ಲ. ನಿಃಸ್ವಾರ್ಥದಿಂದ ಕೆಲಸವನ್ನು ಕೈಗೊಂಡರೆ ಉತ್ತಮ ಫಲ ದೊರೆಯುವುದು.

೨.೩.೪. ಅನ್ಯಧರ್ಮ ಸಹಿಷ್ಣುತೆ

ಅನ್ಯಧರ್ಮ ಸಹಿಷ್ಣುತೆ ಎಂಬ ಮಹಾ ಸತ್ಯಕ್ಕಾಗಿ ಪ್ರಪಂಚ ಕಾಯುತ್ತಿದೆ. ಇದು ನಮ್ಮ ಸಂಸ್ಕೃತಿಯ ಶ್ರೇಯಸ್ಸಿನ ಪ್ರತಿರೂಪ. ಯಾವ ನಾಗರಿಕತೆಯೂ ಅನ್ಯಧರ್ಮ ಸಹಿಷ್ಣುತೆ ಇಲ್ಲದೆ ಬಾಳಲಾರದು. ಎಲ್ಲಿಯೂ ಮತಭ್ರಾಂತಿ ರಕ್ತಪಾತ ಹಿಂಸೆ ನಿಲ್ಲದೆ ಅಭಿವೃದ್ಧಿಯಾಗಲಾರದು. ನಾವು ಮತ್ತೊಬ್ಬರನ್ನು ಅವರ ನಾಗರಿಕತೆಯನ್ನು ಉದಾರ ಭಾವದಿಂದ ಮತ್ತು ಗೌರವದಿಂದ ಕಾಣಬೇಕು. ಈ ಉದಾರ ಭಾವ ಬಂದಾಗ ನಾವು ಅನ್ಯ ಧರ್ಮದ ನಂಬಿಕೆಗಳನ್ನು ಗೌರವಿಸುವೆವು.

ಒಬ್ಬರ ಧರ್ಮಸಿದ್ಧಾಂತ ಇನ್ನೊಬ್ಬರ ನಂಬಿಕೆ ಸಿದ್ಧಾಂತಕ್ಕಿಂತ ಭಿನ್ನವಾಗಿರುವುವು. ಹಾಗಿದ್ದರೂ ಒಬ್ಬರು ಇನ್ನೊಬ್ಬರಿಗೆ ಸಹಾಯ ಹಸ್ತ ನೀಡುತ್ತ ಪ್ರೀತಿ ವಿಶ್ವಾಸದಿಂದಿರಬೇಕು. ಈ ರೀತಿಯ ಪ್ರೀತಿ ವಿಶ್ವಾಸಗಳು ಯೋಗ್ಯವಾಗಿ ಬಾಳಲು ಸಾಧ್ಯ, ಹೊರತು ದ್ವೇಷವಲ್ಲ. ಕೇವಲ ಮೃಗೀಯ ಬಲ ದರ್ಶನದಿಂದ ಒಟ್ಟಾಗಿ ಬಾಳಲು ಸಾಧ್ಯವಿಲ್ಲ. ಅನ್ಯ ಧರ್ಮವನ್ನು ಒಪ್ಪಿಕೊಂಡು ಬಾಳುವುದರಿಂದ ಶಾಂತಿ ನೆಮ್ಮದಿಯನ್ನು ಕಾಯ್ದುಕೊಳ್ಳಲು ಸಾಧ್ಯ.

ಸನಾತನ ಮಹಾತತ್ತ್ವದಂತೆ ಇಡಿಯ ಸೃಷ್ಟಿಯ ಆಧ್ಯಾತ್ಮಿಕ ಏಕತ್ವ ಒಂದೇ. ಪಾಶ್ಚಾತ್ಯ ವೈಜ್ಞಾನಿಕ ಅನ್ವೇಷಣೆ ಸ್ಥೂಲವಸ್ತುವಿನ ಮೂಲಕ ಪ್ರಪಂಚವೆಲ್ಲಾ ಒಂದೇ ಅಭಿನ್ನ ಎಂಬುದನ್ನು ಪ್ರದರ್ಶಿಸುತ್ತಿರುವುವು. ಅನಂತ ವಸ್ತು ಮಹೋದಧಿಯಲ್ಲಿ, ನಾನು ನೀವು ಎಲ್ಲರೂ, ಬರಿಯ ಅಲೆಗಳೆಂಬುದನ್ನು ವಿಜ್ಞಾನ ಸಾರಿದೆ. ಇದರಂತೆಯೇ ಹಿಂದೂ ಮಾನಸಿಕ ಶಾಸ್ತ್ರ ಹಲವು ಶತಮಾನಗಳ ಹಿಂದೆಯೇ ಸಮಷ್ಠಿ ಎಂಬ ವಸ್ತು ಮಹಾಸಾಗರದಲ್ಲಿ ಜಡ ಮತ್ತು ಚೇತನಗಳೆರಡು ಅಲೆಗಳೆಂದು ಸಾರಿತು. ವೇದಾಂತವು ಪ್ರಕೃತಿಯ ಏಕತ್ವದ ಭಾವನೆಯ ಹಿಂದೆ ಇರುವುದೊಂದೇ ಆತ್ಮವೆಂದು ಸಾರಿದೆ. ಎಲ್ಲಾ ಒಂದೇ ಅಸ್ತಿತ್ವವಾಗಿರುವುದು. ಪ್ರಪಂಚದ ಮೂಲದಲ್ಲಿ ಒಂದು ಏಕತ್ವವಿದೆ ಎಂಬ ಮಹಾಭಾವನೆ ಈ ದೇಶದಲ್ಲಿಯೂ ಹಲವರ ಅಂಜಿಕೆಗೆ ಕಾರಣವಾಗಿದೆ. ಈಗಲೂ ಇದರ ಅನುಯಾಯಿಗಳಿಗಿಂತ ಇದನ್ನು ವಿರೋಧಿಸುವವರೇ ಹೆಚ್ಚು. ಆದರೆ ಇಂದು ಪ್ರಪಂಚಕ್ಕೆ ಈ ಜೀವನ ಸಂಜೀವಿನಿಯ ಅಗತ್ಯವಿರುವುದು ಭರತ ಖಂಡದ ಮೂಕ ಜನಕೋಟಿಯ ಉದ್ಧಾರಕ್ಕೆ ಇದು ಮಹತ್ವವಾಗಿದೆ. ಏಕತ್ವದ ಮಹಾಭಾವನೆಯನ್ನು ಶ್ರೇಯಸ್ಕರವಾಗಿ ಅನುಷ್ಠಾನಕ್ಕೆ ತರುವುದರಿಂದ ಮಾತೃಭೂಮಿಯನ್ನು ಮೇಲೆತ್ತಬಹುದು. ನಾವು ನೀವು ನಿಜವಾಗಿ ಒಬ್ಬರೇ, ಇದೇ ಭಾರತೀಯ ತತ್ತ್ವ ಸಿದ್ಧಾಂತ, ಈ ಏಕತ್ವವೇ ಎಲ್ಲಾ ಅಧ್ಯಾತ್ಮಕ್ಕೆ ಮತ್ತು ನೀತಿಗೆ ಯುಕ್ತಿಯ ತಳಹದಿಯನ್ನು ಕೊಡಬಲ್ಲುದು.

೨.೩.೫. ದುರ್ಬಲರ ತುಳಿತ

ನಮ್ಮಲ್ಲಿ ಶ್ರೀಮಂತ ಕುಲೀನ ವಂಶಸ್ಥರು ಜನಸಾಮಾನ್ಯರನ್ನು ತುಳಿಯಲು ಪ್ರಾರಂಭಿಸಿದರು. ಅಸಹಾಯಕರು ನಿರಾಶರಾಗಿ ಈ ಕೋಟಲೆಯಲ್ಲಿ ತಾವು ಮನುಷ್ಯರೆಂಬುದನ್ನು ಮರೆತರು. ಹಲವರು ಶತಮಾನಗಳಿಂದ ಈ ವರ್ಗ

ಶ್ರಮಜೀವಿಗಳಾಗಿರುವರು. ಈ ತುಳಿತದಿಂದಾಗಿ ಅವರು ಹುಟ್ಟು ಗುಲಾಮರಂತೆ ತಮ್ಮ ಕೆಲಸವೇ ಜೀತಮಾಡುವುದು ಎಂಬ ದೃಢನಂಬಿಕೆಗೆ ಬಲಿಯಾಗಿದ್ದರು. ಇವತ್ತು ಈ ರೀತಿ ತುಳಿತಕ್ಕೊಳಗಾದ ದಲಿತರನ್ನು ಮೇಲೆತ್ತುವ ಕೆಲಸವಾಗಬೇಕು. ಪಾಶ್ಚಾತ್ಯರಿಂದ ಬಂದ ಅನುವಂಶಿಕತೆ ಮುಂತಾದ ನಿರರ್ಥಕ ಸಿದ್ಧಾಂತಗಳ ಸಹಾಯದಿಂದ ರಾಕ್ಷಸೀಯ ಸಿದ್ಧಾಂತಗಳನ್ನು ತಯಾರು ಮಾಡಿ ದುರ್ಬಲರನ್ನು ದೌರ್ಜನ್ಯಕ್ಕೆ ಒಳಗು ಮಾಡುವುದನ್ನು ಕಾಣುತ್ತಿರುವೆವು. ಅನುವಂಶಿಕವಾಗಿ ಬಂದ ಗುಣಗಳ ಪ್ರಕಾರ ಬ್ರಾಹ್ಮಣನಿಗೆ ಹೊಲೆಯನಿಗಿಂತ ಹೆಚ್ಚು ವಿದ್ಯಾಭ್ಯಾಸಕ್ಕೆ ಯೋಗ್ಯತೆ ಇರುವುದು. ಆದರೆ ಹೊಲೆಯನ ವಿದ್ಯಾಭ್ಯಾಸಕ್ಕೆ ಅವಕಾಶವಿಲ್ಲ. ಅದಕ್ಕಾಗಿ ಹೊಲೆಯನಿಗೆ ವಿದ್ಯಾಭ್ಯಾಸ ಕೊಡಲು ಹೆಚ್ಚು ಹಣ ಖರ್ಚು ಮಾಡಬೇಕು. ಬ್ರಾಹ್ಮಣನಿಗೆ ಇದರ ಅಗತ್ಯವಿಲ್ಲ. ದುರ್ಬಲರಿಗೆ, ಅಸಹಾಯಕರಿಗೆ ನಮ್ಮೆಲ್ಲರ ದಾನದ ಅಗತ್ಯವಿದೆ. ಬ್ರಾಹ್ಮಣ ಹೆಚ್ಚು ಬುದ್ಧಿವಂತನಾಗಿದ್ದರೆ ಹೆಚ್ಚಿನ ಸಹಾಯವಿಲ್ಲದೆ ಬುದ್ಧಿವಂತನಾಗಬಲ್ಲ. ಉಳಿದವರು ಬುದ್ಧಿವಂತರಾಗಿಲ್ಲದೆ ಇದ್ದರೆ ಅವರಿಗೆ ಶಿಕ್ಷಣ ಹಾಗೂ ಯೋಗ್ಯ ಗುರುಗಳನ್ನು ಮೀಸಲಿಡುವುದು ಅಗತ್ಯ. ಇದು ದುರ್ಬಲರ ಅಭಿವೃದ್ಧಿಗೆ ಯೋಗ್ಯವಾದ ದಾರಿ.

ಭರತ ಖಂಡದಲ್ಲಿ ದಬ್ಬಾಳಿಕೆಗೆ ತುತ್ತಾದ ಈ ನಿರ್ಭಾಗ್ಯರು ತಮ್ಮ ನಿಜಸ್ವರೂಪವನ್ನು ತಿಳಿದುಕೊಂಡು ಅದರಿಂದ ಮುಕ್ತರಾಗಲು ಪ್ರಯತ್ನಿಸಬೇಕು. ಪ್ರತಿಯೊಬ್ಬ ಸ್ತ್ರೀ ಪುರುಷ ಮತ್ತು ಮಗು ಜಾತಿ–ಕುಲ ಗೋತ್ರಗಳ ಭೇದವಿಲ್ಲದೆ, ದುರ್ಬಲರು ಬಲಾಢ್ಯರು ಎಂಬ ಭೇದಭಾವವಿಲ್ಲದೆ, ಪ್ರತಿಯೊಬ್ಬರಲ್ಲಿಯೂ ಅನಂತಾತ್ಮನಿರುವನು ಎಂಬುದರ ಅರಿವು ಮೂಡಬೇಕು. ಪ್ರತಿಯೊಬ್ಬರಿಗೂ "ಏಳಿ ಜಾಗೃತರಾಗಿ, ಗುರಿಸೇರುವವರೆಗೂ ನಿಲ್ಲಬೇಡಿ" ಎಂದು ಬೋಧಿಸಿದರು. ಅಲ್ಲದೆ "ಏಳಿ, ಜಾಗೃತರಾಗಿ ದುರ್ಬಲತೆಯ ಪರವಶತೆಯಿಂದ, ಯಾರೂ ದುರ್ಬಲರಲ್ಲ. ಆತ್ಮ ಸರ್ವಶಕ್ತ ಸರ್ವಜ್ಞ, ಏಳಿ, ಯಾರಿಗೂ ಮಣಿಯಬೇಡಿ. ನಿಮ್ಮಲ್ಲಿರುವ ಬ್ರಹ್ಮವನ್ನು ವ್ಯಕ್ತಗೊಳಿಸಿ, ಅದನ್ನು ಅಲ್ಲಗಳೆಯಬೇಡಿ" ಎಂದು ಕರೆ ನೀಡುವರು. (ಸ್ವಾವಿ. ಕೃತಿಶ್ರೇಣಿ ಸಂ.–೫, ಪು.–೮೪) ಅಜ್ಞಾನದಿಂದ ಹೊರಬಂದು ಆತ್ಮನ ವಿಷಯವನ್ನು ಅರಿಯಬೇಕು. ನಿದ್ರೆಯಿಂದ ಎದ್ದು ಜಾಗೃತರಾಗಬೇಕು. ಆಗ ಶಕ್ತಿ ಬರುವುದು, ಮಹಿಮೆ ಬರುವುದು, ಶ್ರೇಯಸ್ಸು ಬರುವುದು, ಪವಿತ್ರತೆ ಬರುವುದು. ಶ್ರೀಕೃಷ್ಣನ ಬೋಧನೆಯಂತೆ "ಯಾರು ದೇವರನ್ನು ಎಲ್ಲಾ ಕಡೆಗಳಲ್ಲೂ ಒಂದೇ ಸಮನಾಗಿ ನೋಡುತ್ತಿರುವರೋ ಅವರು ಆತ್ಮನಿಂದ ಆತ್ಮನನ್ನು ನಾಶ ಮಾಡದೆ ಪರಮಗತಿಯನ್ನು ಹೊಂದುವರು". (ಸ್ವಾವಿ. ಕೃತಿಶ್ರೇಣಿ, ಸಂಪುಟ–೫, ಪು–೮೪).

ಈ ಮೂಲಕ ಎಲ್ಲರೊಳಗಿರುವ ಅನಂತಾತ್ಮ ಒಂದೇ ಇರುವಾಗ ಮಾನವನೊಳಗೆ ಬೇಧಭಾವವೇಕೆನ್ನುವರು.

೨.೩.೬. ಸಮಾನತೆಯ ತತ್ತ್ವ

ನಮ್ಮ ದೇಶದಲ್ಲಿ ಹಲವು ಶತಮಾನಗಳಿಂದ ಜಟಿಲವಾದ ಸಮಸ್ಯೆ ಜಾತಿ ಮತ್ತು ಸಮಾಜ ಸುಧಾರಣೆಗೆ ಸಂಬಂಧಪಟ್ಟದ್ದು. ಅನ್ಯ ಜಾತಿಯವರನ್ನು ದ್ವೇಷಿಸುವ ಬದಲು ಪ್ರೀತಿ, ಸರ್ವವ್ಯಾಪಿತ್ವ ಮತ್ತು ಸಮಾನತೆ ವೇದಾಂತದ ತಳಹದಿ. ಮೊದಲನೆಯದಾಗಿ ಇತಿಹಾಸ ಕಾಲದಿಂದಲೂ ಬಂದಿರುವ ಪ್ರತಿಯೊಂದು ಜಾತಿಯ ಗುಣವನ್ನು ಕಾಪಾಡಿಕೊಳ್ಳುವುದು. ನಾವು ಅನ್ಯರಿಂದ ಎಷ್ಟೋ ಉತ್ತಮವಾದ ವಸ್ತುಗಳನ್ನು ವಿಷಯಗಳನ್ನು ತೆಗೆದುಕೊಳ್ಳಬೇಕಾಗಿದೆ. ಹಾಗೂ ಹೊಸ ವಿಷಯಗಳನ್ನು ಕಲಿಯಬೇಕಾಗಿದೆ. ನಮ್ಮ ದೇಶವನ್ನು ಇತರ ದೇಶ ಹಾಗೂ ಜನಾಂಗದೊಂದಿಗೆ ಹೋಲಿಸಿದಾಗ ನಾವು ಹೆಚ್ಚು ಧಾರ್ಮಿಕರು ಹಾಗೂ ಹೆಚ್ಚು ದೈವ ಭಕ್ತರೆಂದು ಅರಿವಾಗುತ್ತದೆ. ನಮ್ಮ ಸಮಾಜ ಸಂಸ್ಥೆ ಮಾನವಕೋಟಿಯ ಕಲ್ಯಾಣಕ್ಕೆ ಅನುಕೂಲವಾಗಿದೆ. ಮಾನವ ಕಲ್ಯಾಣಕ್ಕೆ ಪೂರ್ವಿಕರು ತೋರಿದ ಅತಿ ಶ್ರೇಷ್ಠವಾದ ಮಾರ್ಗವನ್ನು ಅನುಸರಿಸಬೇಕು. ಅದೇನೆಂದರೆ ಮನುಷ್ಯನ ನಡುವೆ ಸಮಾನತೆಯ ತತ್ತ್ವದ ಪ್ರತಿಪಾದನೆ ಹಾಗೂ ಅವನು ಸ್ವಭಾವತಃ ಪರಿಶುದ್ಧನಾಗಿರಬೇಕೆಂಬ ವೇದಾಂತದ ಸಿದ್ಧಾಂತಗಳನ್ನು ಅನುಷ್ಠಾನಕ್ಕೆ ತರುವುದು. ಹಿಂದಿನ ಸ್ಮೃತಿಕಾರರು ಜಾತಿಯನ್ನು ವಿರೋಧಿಸಿದರು. ಹಾಗಂತ ಶಿಸ್ತಿನ ಚೌಕಟ್ಟನ್ನು ಮೀರಲಿಲ್ಲ. ನಮ್ಮ ಪೂರ್ವಿಕರ ಆದರ್ಶ ವ್ಯಕ್ತಿಯೇ ಬ್ರಾಹ್ಮಣ. ನಮ್ಮ ಶಾಸ್ತ್ರಗಳಲ್ಲೆಲ್ಲಾ ಈ ಆದರ್ಶವು ಪ್ರಮುಖವಾಗಿದೆ. ತ್ಯಾಗಿಯಾದ ಮತ್ತು ಅಧ್ಯಾತ್ಮ ಸಂಪನ್ನನಾದ ಬ್ರಾಹ್ಮಣನೇ ನಿಜವಾದ ಆದರ್ಶ. ಆದರ್ಶ ಬ್ರಾಹ್ಮಣನಲ್ಲಿ ಸಾಂಸಾರಿಕತೆ ಸಂಪೂರ್ಣ ಮಾಯವಾಗಿ ಜ್ಞಾನ ತುಂಬಿ ತುಳುಕಾಡುವುದು. ಇದೇ ಹಿಂದೂ ಜನಾಂಗದ ಆದರ್ಶ. ಯಾರು ತಮ್ಮ ಸ್ವಾರ್ಥವನ್ನು ನಾಶಮಾಡಿ, ಧರ್ಮ ಮತ್ತು ಪ್ರೇಮ ಸಂಪಾದನೆ ಮತ್ತು ಪ್ರಚಾರ ಇವುಗಳಿಗಾಗಿ ಮಾತ್ರ ಬಾಳುತ್ತಾರೋ ಅವರೇ ಬ್ರಾಹ್ಮಣರು. ಇಂತಹ ಅಧ್ಯಾತ್ಮ ಸಂಪನ್ನರಾದ ಸ್ತ್ರೀ ಪುರುಷರಿಂದ ಕೂಡಿದ ಬ್ರಾಹ್ಮಣ ಜನಾಂಗವು ಎಲ್ಲಾ ನಿಯಮಗಳನ್ನು ಮೀರಿ ನಿಲ್ಲುವುದರಲ್ಲಿ ಆಶ್ಚರ್ಯವಿಲ್ಲ. ಇವರೇ ಸತ್ಪುರುಷರು, ಮಹಾವ್ಯಕ್ತಿಗಳು, ಭಗವಂತನ ಮಕ್ಕಳೆನಿಸಿಕೊಳ್ಳುವರು.

ವರ್ಣಸಮಸ್ಯೆ ಪರಿಹಾರವನ್ನು ಕೂಡಾ ನಮ್ಮ ಪೂರ್ವಿಕರು ಕಂಡುಕೊಂಡಿರುವರು. ವೇದಾಂತ ತತ್ತ್ವದ ಸಿದ್ಧಾಂತಗಳನ್ನು ಪರಿಪಾಲಿಸುವುದರಿಂದ ಅದು ಸಾಧ್ಯ. ಆದರ್ಶ ಬ್ರಾಹ್ಮಣರಾಗಿ ಅಧ್ಯಾತ್ಮ ಸಂಪನ್ನರಾದರೆ ಮಾತ್ರ ಇದು ಸಾಧ್ಯ. ನಮ್ಮ ಪೂರ್ವಿಕರು ಈ ಮಾತೃ ಭೂಮಿಯಲ್ಲಿರುವ ಎಲ್ಲರಿಗೂ ಒಂದು ನಿಯಮವನ್ನು ಪರಿಪಾಲಿಸಬೇಕೆಂದು ಹೇಳಿದರು. ಅವರ ಆಜ್ಞೆ ಎಲ್ಲರಿಗೂ ಅನ್ವಯಿಸುವುದು. ಪರಮೋತ್ಕೃಷ್ಟನಿಂದ ಹಿಡಿದು ಅತಿ ನೀಚ ಚಂಡಾಲನವರೆಗೆ ಪ್ರತಿಯೊಬ್ಬರೂ ಆದರ್ಶ ಬ್ರಾಹ್ಮಣನಾಗಲು ಯತ್ನಿಸಬೇಕು. ಈ ವೇದಾಂತ ನಿಯಮವನ್ನು ಪ್ರಪಂಚದಲ್ಲೆಲ್ಲಾ ಅನುಷ್ಠಾನಕ್ಕೆ ತರಲು ಸಾಧ್ಯ. ಶಾಪ ಮತ್ತು ನಿಂದೆಯಿಂದ ಏನನ್ನೂ ಸಾಧಿಸಲು ಸಾಧ್ಯವಿಲ್ಲ. ಸಹಾನುಭೂತಿಯಿಂದ ಮತ್ತು ಪ್ರೀತಿಯಿಂದ ಮಾತ್ರ ಒಳ್ಳೆಯ ಸಮಾಜ ನಿರ್ಮಾಣ ಸಾಧ್ಯ.

ನಮ್ಮ ಸಮಾಜದಲ್ಲಿರುವ ಅತಿ ಮೂಢವಾಗಿರುವ ವಿಚಾರ ಹೀನವಾಗಿರುವ ಆಚಾರ ವ್ಯವಹಾರಗಳಿಂದ ದೂರವಿರುವುದು ಒಳಿತು. ಬೇರೆ ಯಾವ ದೇಶದಲ್ಲಿರುವ ಆದರ್ಶಗಳು ಇಲ್ಲಿಗಿಂತ ಉತ್ತಮವಾಗಿಲ್ಲ. ಎಲ್ಲಾ ದೇಶಗಳಲ್ಲಿಯೂ ಜಾತಿ ವ್ಯವಸ್ಥೆ ಇದೆ. ಆದರೆ ಎಲ್ಲಿಯೂ ಇಲ್ಲಿರುವಂತಹ ಯೋಜನೆಯಾಗಲಿ, ಆದರ್ಶಗಳಾಗಲಿ ಇಲ್ಲ. ಜಾತಿ ಅವಶ್ಯಕವಾದರೆ ಪವಿತ್ರತೆ, ಸಂಸ್ಕೃತಿ, ತ್ಯಾಗ ಇವುಗಳ ಮೇಲೆ ನಿಂತ ಜಾತಿ ಕೇವಲ ಹಣದ ಮೇಲೆ ನಿಂತ ಜಾತಿಗಿಂತ ಮೇಲು. ಮನುಷ್ಯ ನಿರ್ಮಾಣ ಮಾಡಿರುವ ಈ ಜಾತಿ ಪದ್ಧತಿ ನಾಶವಾಗಬೇಕು. ಎಲ್ಲರೂ ಒಳ್ಳೆಯ ಮನಸ್ಸಿನಿಂದ ಹೃದಯದಿಂದ ಶ್ರೀಮಂತರಾದಾಗ ಮಾತ್ರ ಈ ಜಾತಿ ಪದ್ಧತಿಯನ್ನು ನಿರ್ಮೂಲನ ಮಾಡಲು ಸಾಧ್ಯ. ವಿವೇಕಾನಂದರು ತಮ್ಮ ಗುರುಗಳಾದ ರಾಮಕೃಷ್ಣ ಪರಮಹಂಸರ ಶ್ರೇಷ್ಠತೆಯನ್ನು ವಿವರಿಸುತ್ತಾರೆ. ಪರಮಹಂಸರಿಗೆ ಚಂಡಾಲನ ಮನೆ ಗುಡಿಸಲು ಅನುಮತಿ ಕೊಡುವುದಿಲ್ಲ. ಆಗ ಈ ಬ್ರಾಹ್ಮಣ ಸಂನ್ಯಾಸಿ ಆತನ ಮನೆಗೆ ಅರ್ಧರಾತ್ರಿಯಲ್ಲಿ ಹೋಗಿ, ಅವನ ಕಕ್ಕಸನ್ನು ಗುಡಿಸಿ, ತಮ್ಮ ಕೇಶರಾಶಯಿಂದ ಆ ಸ್ಥಳವನ್ನು ಒರೆಸಿದರು. ಹೀಗೆ ಹಲವು ದಿನಗಳ ತನಕ ಈ ರೀತಿ ಮಾಡಿದ್ದರಂತೆ. ಹೀಗೆ ದೀನರಲ್ಲಿ ದೀನರಾಗಬೇಕೆಂಬುದೇ ಪರಮಹಂಸರ ಇಚ್ಛೆಯಾಗಿರುವುದು. ಅಂತಹ ಮಹಾತ್ಮರೇ ನನ್ನ ಗುರುಗಳೆಂದು ವಿವೇಕಾನಂದರು ಹೇಳಿಕೊಳ್ಳುವರು. ಈ ರೀತಿಯಿಂದ ಸರ್ವರಲ್ಲಿ ಸಮಾನತೆಯನ್ನು ಕಾಣುವುದು ಎಲ್ಲ ಕಾಲಕ್ಕೂ ಮುಖ್ಯವಾದ ವಿಷಯ. "ನಮ್ಮ ಸುಧಾರಕರು ಚಂಡಾಲನನ್ನು ಕೂಡ ಸೇವಿಸುವಂತಹ ಜೀವನವನ್ನು ವ್ಯಕ್ತಗೊಳಿಸಲಿ ಆಗ ನಾನು ಅವರ ಪದತಳದಲ್ಲಿ ಕುಳಿತು ಕಲಿತುಕೊಳ್ಳುತ್ತೇನೆ ಅದಕ್ಕೆ ಮುಂಚೆ ಇಲ್ಲ. ಎಳ್ಳಿನಷ್ಟು ಅನುಷ್ಠಾನ,

ಹೊರೆಯಷ್ಟು ಮಾತಿಗಿಂತ ಮೇಲು" (ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ ಸಂ.–೫, ಪು.–೧೦೦) ನಮ್ಮಲ್ಲಿ ಏಕತೆ ಜಾಗೃತವಾಗಬೇಕು. ಮೇಲುಕೀಳೆಂಬ ಬೇಧವಿರಬಾರದು. ಮಾತಿನಲ್ಲಿ ಆಡಿಕೊಳ್ಳುವುದಕ್ಕಿಂತ ವಾಸ್ತವದಲ್ಲಿ ರೂಢಿಗೊಳಿಸುವುದು ಮುಖ್ಯ. ಮತಭ್ರಾಂತರಾದ ಸುಧಾಕರರು ಎಲ್ಲೂ ತಮ್ಮ ಗುರಿಯನ್ನು ಸಾಧಿಸಲಾರರು. ಮತಭ್ರಾಂತಿ ಹೋಗಿ ಸಮಾಜ ಸುಧಾರಣೆಯಾಗಬೇಕಾದರೆ ಮೊದಲು ಜನರಲ್ಲಿ ವಿದ್ಯೆಯನ್ನು ಹರಡಬೇಕು. ವಿದ್ಯೆಯ ಮೂಲಕ ವೈಚಾರಿಕತೆ ಹುಟ್ಟಲು ಸಾಧ್ಯ.

೨.೩.೭. ವಿಶ್ವದ ಅಖಂಡತ್ವ

ನಮ್ಮ ದೇಶದ ಹೊರಗು ಸೋದರ ಮಾನವನನ್ನೇ ಕಾಣುವೆವು. ಅವರಲ್ಲೂ ಅನುಕಂಪ ತುಂಬಿದ ಹೃದಯವಿದೆ. ಅವರು ಇಲ್ಲಿಗೆ ಬಂದಾಗ ನಮ್ಮಲ್ಲೂ ಇದೇ ಭಾವನೆಯನ್ನು ಕಾಣುವೆವು. ಆದರೆ ನಮ್ಮ ನಡುವೆ ಇರುವ ದುಃಖಕ್ಕೆ ಅಜ್ಞಾನವೇ ಕಾರಣವೆಂದು ಉಪನಿಷತ್ತು ಸಾರುವುದು. ಇದು ಸಾಮಾಜಿಕ, ಧಾರ್ಮಿಕ ಕ್ಷೇತ್ರಕ್ಕೆ ಹೋಲಿಸಿದರೆ ಎಲ್ಲ ಕಡೆಗಳಲ್ಲೂ ಸತ್ಯ. ಒಬ್ಬರು ಮತ್ತೊಬ್ಬರನ್ನು ದ್ವೇಷಿಸುವಂತೆ ಮಾಡುವುದು ಅಜ್ಞಾನ. ಅಜ್ಞಾನದಿಂದ ಮತ್ತೊಬ್ಬರನ್ನು ಅರಿಯಲು ಸಾಧ್ಯವಿಲ್ಲ. ಜ್ಞಾನ ಇಬ್ಬರ ನಡುವೆ ಪರಿಚಯ ಬೆಳೆಸಿ ಪ್ರೀತಿಯನ್ನು ಹುಟ್ಟುಹಾಕುವುದು. ಆಗ ಅಖಂಡತ್ವ ತಾನಾಗಿ ಬರುವುದನ್ನು ಕಾಣುವೆವು. ಇಪ್ಪತ್ತು ವರ್ಷದ ಮೊದಲಿನ ದೇಶದ ಸಮಸ್ಯೆಗಳು ಇಂದು ಮಹತ್ತರವಾಗಿರುವುವು. ಅದನ್ನು ಇಡಿಯ ವಿಶ್ವದ ದೃಷ್ಟಿಯಿಂದ ಮಾತ್ರ ಪರಿಹರಿಸಬಹುದು. ವಿಶ್ವಸಂಸ್ಥೆ, ವಿಶ್ವ ಯೋಜನೆ, ವಿಶ್ವ ಕಾನೂನು ಇವು ಈ ಕಾಲಕ್ಕೆ ಅವಶ್ಯಕವಾಗಿದೆ. ಇವು ನಮ್ಮ ಅಖಂಡತ್ವವನ್ನು ತೋರುವುವು. ನಮ್ಮ ವಿಜ್ಞಾನವು ಜಡತ್ವದ ಹಿನ್ನೆಲೆಯಲ್ಲಿರುವ ವಿಶಾಲಭಾವನೆಯನ್ನು ಕಂಡುಹಿಡಿಯುತ್ತಿರುವುದು. "ಪ್ರಪಂಚವೆಲ್ಲ ಒಂದು ರಾಶಿ, ಜಡ ವಸ್ತುವಿನ ಒಂದು ಮಹಾಸಾಗರ ದ್ರವ್ಯ" (ಸ್ವಾವಿ. ಕೃತಿಶ್ರೇಣಿ, ಸಂ.–೮, ಪುಟ–೧೩೨) ಎನ್ನುವುದು ಮಾನಸಿಕ ದೃಷ್ಟಿಯಿಂದ ಹುಟ್ಟಿಕೊಂಡ ಅಲೋಚನೆಯ ಮಹಾಸಾಗರ. ಆಧ್ಯಾತ್ಮಿಕ ದೃಷ್ಟಿಯಿಂದ ಅದು ಅಚಲವಾದುದು, ಬದಲಾಗುವುದಿಲ್ಲ. ಇದು ಏಕವಾಗಿ ಬದಲಾಗದೆ ಅಖಂಡವಾಗಿ ಒಂದೇ ಸಮನಾಗಿರುವುದು.

೨.೩.೮. ಜಾತಿ ಪ್ರಕೃತಿ ನಿರ್ಮಿತಿ

ಪ್ರತಿಯೊಬ್ಬನು ಮಾಡುವ ವೃತ್ತಿ ನಿಯಮದ ಮೂಲಕ ಜಾತಿ ಹುಟ್ಟುವುದು. ಪ್ರತಿಯೊಬ್ಬನಲ್ಲಿ ಆತ್ಮ, ಒಂದೇ ಅಲ್ಲಿ ಬೇಧವಿಲ್ಲ. "ಬೆಸ್ತ ತಾನು ಆತ್ಮನೆಂದು ತಿಳಿದರೆ ಆತ ಒಳ್ಳೆಯ ಬೆಸ್ತನಾಗುವನು. ವಿದ್ಯಾರ್ಥಿ ತಾನು ಆತ್ಮನೆಂದು ತಿಳಿದರೆ ಒಳ್ಳೆಯ ವಿದ್ಯಾರ್ಥಿಯಾಗುವನು. ವಕೀಲನು ತಾನು ಆತ್ಮನೆಂದು ತಿಳಿದರೆ ಆತ ಒಳ್ಳೆಯ ವಕೀಲನಾಗುವನು. ಇದರ ಪರಿಣಾಮವಾಗಿ ಜಾತಿ ಹೋಗುವುವು. ಜಾತಿ ಪ್ರಕೃತಿ ನಿರ್ಮಿತ" (ಸ್ವಾ. ವಿ. ಕೃತಿಶ್ರೇಣಿ, ಸಂ.–೫, ಪು.–೧೨೬) ಅವನವನ ವೃತ್ತಿಧರ್ಮಕ್ಕೆ ಅನುಗುಣವಾಗಿ ಜಾತಿ ಹುಟ್ಟಿಕೊಳ್ಳುವುದು. ಮೂಲದಲ್ಲಿ ಜಾತಿ ಕಂಡುಕೊಂಡದ್ದು ವೃತ್ತಿ ಸಂಬಂಧಿಯಾಗಿ. ಇವತ್ತು ಕೋಮುಸೌಹಾರ್ದವನ್ನು ಕಲಕುವ ಹಂತಕ್ಕೆ ಬಂದು ನಿಂತಿದೆ. ಸಮಾಜದಲ್ಲಿ ಒಬ್ಬನು ತನ್ನ ಕರ್ತವ್ಯವನ್ನು ಮಾಡುವನು. ಮತ್ತೊಬ್ಬನು ಆತನ ಕರ್ತವ್ಯವನ್ನು ನೆರವೇರಿಸುವನು. ಒಬ್ಬಾತ ರಾಜ್ಯವಾಳಬಹುದು. ಪಾದರಕ್ಷೆಯನ್ನು ರಿಪೇರಿ ಮಾಡುವವನು ನಿಷ್ಠೆಯಿಂದ ತನ್ನ ಕೆಲಸಕ್ಕೆ ನ್ಯಾಯ ಒದಗಿಸುವನು. ಇಲ್ಲಿ ತಾ ಮೇಲು ಆತ ಕೀಳೆಂಬ ಭೇದ ಹುಟ್ಟಬಾರದು. ಯಾರಿಗೂ ಯಾರೊಬ್ಬರನ್ನು ಕೀಳಾಗಿ ಕಾಣಲು ಅಧಿಕಾರವಿಲ್ಲ. ಅವರವರ ಮಟ್ಟಕ್ಕೆ ಅವರವರ ಉದ್ಯೋಗ ಶ್ರೇಷ್ಠ. ಎಲ್ಲರೊಳಗಿರುವ ಪರಮಾತ್ಮ ಒಬ್ಬನೇ ಆದುದರಿಂದ ಈ ವೈರುಧ್ಯ ಮಾಯವಾಗಬೇಕು.

ಒಳಗಿನ ಏಕತೆಯನ್ನು ಕಂಡುಕೊಳ್ಳುವಲ್ಲಿ ಜಾತಿ ಒಳ್ಳೆಯದು. ನಮ್ಮ ಜೀವನದ ಸಮಸ್ಯೆಯನ್ನು ಬಗೆಹರಿಸುವ ಮಾರ್ಗ ಇದೊಂದೇ. ಮನುಷ್ಯರು ಜಾತಿ ವಿಭಾಗದಿಂದ ಪಾರಾಗಲು ಸಾಧ್ಯವಿಲ್ಲ. ಜಾತಿ ಇರುವಲ್ಲಿ ವಿಶೇಷ ಹಕ್ಕುಗಳು ಇರಬೇಕೆಂದಲ್ಲ. ಅವನ್ನು ಮೊದಲು ನಿರ್ನಾಮಗೊಳಿಸಬೇಕು. "ಬೆಸ್ತನಿಗೆ ವೇದಾಂತ ಬೋಧಿಸಿದರೆ, ಅವನು ನಿನ್ನಂತೆಯೇ ನಾನು, ನಾನು ಬೆಸ್ತ, ನೀನು ತತ್ತ್ವಜ್ಞಾನಿ ಆದರೆ ನಿನ್ನಲ್ಲಿರುವಂತೆಯೇ ನನ್ನಲ್ಲಿಯೂ ದೇವರು ಇರುವನು" ಎನ್ನುವನು. (ಸ್ವಾ ವಿ. ಕೃತಿಶ್ರೇಣಿ ಸಂಪುಟ–೫, ಪು.–೧೩೭) ನಮಗೆ ತಿಳುವಳಿಕೆ ಹುಟ್ಟಬೇಕಾಗಿರುವುದು ಅಲ್ಲಿ. ಎಲ್ಲರಿಗೂ ಸಮಾನ ಅವಕಾಶ ಹೊರತು ಯಾರಿಗೂ ಪ್ರತ್ಯೇಕ ಹಕ್ಕುಗಳಿಲ್ಲ. ಇದು ಜಾತಿಯ ಕುರಿತಾಗಿ ಉಪನಿಷತ್ತುಗಳು ಕಂಡುಕೊಂಡ ಸತ್ಯ. ಆದರೆ ಇವತ್ತು ಜಾತಿ ಸಮಸ್ಯೆ ವರ್ಗಸಂಘರ್ಷದ ಸಮಸ್ಯೆಯಾಗಿ ಪರಿವರ್ತನೆಗೊಂಡಿರುವುದು.

ಉಚ್ಚವರ್ಗದವರನ್ನು ಕೆಳಗೆ ಎಳೆಯುವುದಲ್ಲ, ಕೆಳಗಿನವರನ್ನು ಮೇಲಕ್ಕೆ ತರುವುದೇ ಇದಕ್ಕೆ ಪರಿಹಾರ. ಆದರ್ಶದ ತುತ್ತತುದಿ ಬ್ರಾಹ್ಮಣ. ಅದರ ಪ್ರಾರಂಭ ಚಂಡಾಲನಾಗಿರುವನು. ಚಂಡಾಲನನ್ನು ಬ್ರಾಹ್ಮಣನ ಎತ್ತರಕ್ಕೆ ಏರಿಸುವುದೇ ಮುಖ್ಯಗುರಿಯಾಗಬೇಕು. ಹೀಗೆ ಕ್ರಮೇಣ ಅವರಿಗೆ ಹೆಚ್ಚು ಹೆಚ್ಚು ಹಕ್ಕು ಬಾಧ್ಯತೆಗಳು ಬರುವುದು. ಕೆಲವು ಶಾಸ್ತ್ರಗಳು ಈ ರೀತಿ ಹೇಳುವುದು– "ಶೂದ್ರ ವೇದವನ್ನು ಕೇಳಿದರೆ ಅವನ ಕಿವಿಗೆ ಕಾದ ಸೀಸವನ್ನು ಹಾಕಿರಿ. ಅವನು ಒಂದು ಶ್ಲೋಕವನ್ನು ಉಚ್ಚರಿಸಿದರೆ ನಾಲಗೆಯನ್ನು ಕತ್ತರಿಸಿ. ಬ್ರಾಹ್ಮಣನನ್ನು 'ಎಲೈ ಬ್ರಾಹ್ಮಣನೇ' ಎಂದರೆ ಅವನ ನಾಲಗೆಯನ್ನು ಕತ್ತರಿಸಿ". ಇದೊಂದು ನಿಸ್ಸಂದೇಹವಾಗಿ ಅನಾಗರಿಕ ರಾಕ್ಷಸೀ ಕೃತ್ಯ. (ಸ್ವಾ. ವಿ. ಕೃತಿಶ್ರೇಣಿ, ಸಂಪುಟ–೫, ಪುಟ–೧೯೩). ಹೆಚ್ಚು ಕಡಿಮೆ ಇಂತಹ ಅಸುರೀ ವ್ಯಕ್ತಿಗಳು ಎಲ್ಲಾ ಕಾಲದಲ್ಲಿಯೂ ಇದ್ದೇ ಇರುವರು. ಕ್ರಮೇಣ ಅವರ ಉಗ್ರತೆಯ ಪ್ರಮಾಣ ಸ್ವಲ್ಪ ಕಡಿಮೆಯಾಗಿ "ಶೂದ್ರರಿಗೆ ತೊಂದರೆ ಕೊಡಬೇಡಿ. ಆದರೆ ಉತ್ತಮ ವಿಷಯಗಳನ್ನು ಅವರಿಗೆ ಬೋಧಿಸಬೇಡಿ" ಎನ್ನುವರು. ಕ್ರಮೇಣ ಇತರ ಸ್ಮೃತಿಗಳಲ್ಲಿ ಯಾವುದು ಇಂದು ಹೆಚ್ಚು ಬಳಕೆಯಲ್ಲಿರುವುದೋ ಅದರಲ್ಲಿ, "ಶೂದ್ರರು ಬ್ರಾಹ್ಮಣರ ಆಚಾರ ವ್ಯವಹಾರವನ್ನು ಅನುಕರಿಸಿದರೆ ಒಳ್ಳೆಯದು, ಅದನ್ನು ಪ್ರೋತ್ಸಾಹಿಸಬೇಕು" ಎನ್ನುವರು. (ಸ್ವಾ. ವಿ. ಕೃತಿಶ್ರೇಣಿ, ಸಂಪುಟ–೫, ಪುಟ–೧೯೩) ಹೀಗೆ ಆಗಿನ ಕಾಲದಲ್ಲಿ ಭಿನ್ನ ಸಮಾಜಗಳು ಶೂದ್ರರನ್ನು ಕಂಡ ಬಗೆಯನ್ನು ಗಮನಿಸಬಹುದು. ಅಂತು ಭರತಖಂಡದಲ್ಲಿ ಇತರರ ಮುಕ್ತಿಗೆ ಕೆಲಸ ಮಾಡುವುದು ಬ್ರಾಹ್ಮಣರ ಕರ್ತವ್ಯ. ಅಧ್ಯಾತ್ಮ ಶಕ್ತಿಯನ್ನು ನೀಡಿದರೆ ಆತ ಬ್ರಾಹ್ಮಣ ಅದನ್ನು ಮಾಡದೆ ಹಣ ಸಂಪಾದನೆಗೆ ಹೊರಟರೆ ಆತ ಬ್ರಾಹ್ಮಣನಲ್ಲ. ಬ್ರಾಹ್ಮಣರಿಗೆ ಇಷ್ಟೊಂದು ಗೌರವವನ್ನು ಮತ್ತು ಹಕ್ಕನ್ನು ಕೊಡುವುದಕ್ಕೆ ಕಾರಣ ಅವರು 'ಧರ್ಮಕೋಶ'ವಾಗಿರುವ ಕಾರಣ. ಅವರು ಈ ಕೋಶವನ್ನು ತೆರೆದು ಅದರಲ್ಲಿರುವ ಅನರ್ಘ್ಯರತ್ನಗಳನ್ನು ಪ್ರಪಂಚಕ್ಕೆ ಕೊಡಬೇಕು. ಜೀವನದ ಪರಮ ಗುರಿಯನ್ನು ಸೇರುವುದಕ್ಕೆ ಇತರರಿಗಿಂತ ಮುಂಚೆ ಸರ್ವತ್ಯಾಗ ಮಾಡಿದವರು ಇನ್ನೊಬ್ಬರಿಲ್ಲ. ಬ್ರಾಹ್ಮಣರಂತೆ ಇತರರು ಅಧ್ಯಾತ್ಮ ಬಲವನ್ನು ವರ್ಧಿಸಿಕೊಳ್ಳಬೇಕು. ಸಾಂಸ್ಕೃತಿಕ ನಿಧಿಗೆ ರಕ್ಷಕರಾದ ಬ್ರಾಹ್ಮಣರು ಅದನ್ನು ಪರಿಶುದ್ಧ ಮನಸ್ಸಿನಿಂದ ಏಕರೀತಿಯಲ್ಲಿ ದುರುಪಯೋಗವಾಗದಂತೆ ದಾನ ಮಾಡಬೇಕು. ಭವ್ಯ ಭರತಖಂಡವನ್ನು ನಾವು ಸೃಷ್ಟಿಸಬೇಕಾದರೆ, ಅದರ ರಹಸ್ಯವೆಲ್ಲ, ಸಂಘಟನೆಯಲ್ಲಿ, ಶಕ್ತಿ ಸಂಗ್ರಹದಲ್ಲಿ ಮತ್ತು ಇಚ್ಛಾಶಕ್ತಿಯನ್ನು ಏಕತ್ರ ಮಾಡುವುದರಲ್ಲಿದೆ. ಒಮ್ಮತವೇ ಸಮಾಜದ ಶಕ್ತಿ ರಹಸ್ಯ. ಅದಕ್ಕಾಗಿ ಈ ರೀತಿಯ ಪಕ್ಷಭೇದವನ್ನು ಜಾತಿಭೇದವನ್ನು ಮರೆತು ಏಕಚಿತ್ತದಿಂದ

ಎಲ್ಲರೊಳಗಿರುವ ಪರಮಾತ್ಮನನ್ನು ಗೌರವಿಸುವುದು ಒಳಿತು. ಆಗ ಸಂಘರ್ಷ ನಡೆಯದೆ ಸಂಘಟನೆ ನಡೆಯುವುದು. ಇವತ್ತಿನ ಸಮಾಜಕ್ಕೆ ಪರಿಶುದ್ಧ ಮನಸ್ಥಿತಿ ಹಾಗೂ ಎಲ್ಲರೂ ಒಂದೇ ಎನ್ನುವ ಭಾವೈಕ್ಯ ಅಗತ್ಯವಾಗಿದೆ.

೨.೩.೯. ಮೂಢನಂಬಿಕೆ ಮೃತ್ಯು ಸಂಕೇತ

ಭಾರತದ ದಾನಗಳಲ್ಲಿ ಶ್ರೇಷ್ಠವಾದದ್ದು ಧರ್ಮ, ದಾರ್ಶನಿಕ ಜ್ಞಾನ ಮತ್ತು ಅಧ್ಯಾತ್ಮ ವಿದ್ಯೆ. ಧಾರ್ಮಿಕ ಪ್ರಚಾರಕ್ಕೆ ಜ್ಞಾನ ಮತ್ತು ದಾರ್ಶನಿಕ ತತ್ತ್ವಗಳ ಪ್ರಚಾರಕ್ಕೆ ಹಿಂಸೆಯ ಮಾರ್ಗದ ಅಗತ್ಯವಿಲ್ಲ. ಇದು ಶಾಂತಿ ಮತ್ತು ಪ್ರೇಮದ ವಿಹಂಗಮದ ಮೇಲೆ ಸಾಗುವುದು. ನಮ್ಮ ಧರ್ಮ ಅನ್ಯಧರ್ಮಕ್ಕಿಂತ ಹೆಚ್ಚು ಸತ್ಯ. ಯಾಕೆಂದರೆ, ಅದು ಹೋರಾಟದ ಮೂಲಕ ಮತ್ತೊಬ್ಬರನ್ನು ಗೆಲ್ಲಲಿಲ್ಲ, ರಕ್ತಪಾತ ಹರಿಸಲಿಲ್ಲ, ಯಾವಾಗಲೂ ಬಾಯಿಯಿಂದ ಆಶೀರ್ವಾದ, ಪ್ರೀತಿ, ಶಾಂತಿ, ಸಹಾನುಭೂತಿಯ ವಾಣಿಗಳೇ ಬರುತ್ತಿರುವುವು. ಭರತಖಂಡದ ಆಧ್ಯಾತ್ಮಿಕ ಜ್ಞಾನವು ಅಜ್ಞಾತವಾಗಿ, ಮೌನವಾಗಿ ಆದರೂ ಮಹಾಶಕ್ತಿಯಿಂದ ಪ್ರಪಂಚದ ಮೇಲೆ ಅದ್ಭುತ ಪರಿಣಾಮವನ್ನು ಉಂಟುಮಾಡಿದೆ. ನಮ್ಮಲ್ಲಿರುವ ಮೂಢನಂಬಿಕೆಗಳನ್ನು ಕಿತ್ತೊಗೆಯಬೇಕು. ಇದು ಜನಾಂಗದ ಅಧೋಗತಿಗೆ ಕಾರಣ. "ಯಾವ ಮಿದುಳು ಉದಾತ್ತ ಉಚ್ಚ ಭಾವನೆಯನ್ನೇ ಆಲೋಚಿಸಲಾರದೋ, ತನ್ನ ಸ್ವಾತಂತ್ರ್ಯವನ್ನೆಲ್ಲ ಕಳೆದುಕೊಂಡಿದೆಯೋ, ಶಕ್ತಿಯನ್ನೆಲ್ಲಾ ಕಳೆದುಕೊಂಡಿದೆಯೋ, ಧರ್ಮದ ಹೆಸರಿನಲ್ಲಿರುವ ಕೆಲಸಕ್ಕೆ ಬಾರದ ಮೂಢನಂಬಿಕೆಗಳನ್ನೆಲ್ಲಾ ಸ್ವೀಕರಿಸಿ ವಿಷರೂಪಕ್ಕೆ ಬರುತ್ತಿದೆಯೋ, ಅಂತಹ ಮಿದುಳು ಉಳ್ಳವರ ಹತ್ತಿರ ಬಹಳ ಜಾಗರೂಕರಾಗಿರಬೇಕು" (ಸ್ವಾ ವಿ. ಕೃತಿಶ್ರೇಣಿ, ಸಂಪುಟ-೫, ಪುಟ-೧೭೪) ಭರತಖಂಡದಲ್ಲಿ ಈ ರೀತಿ ಅಪಾಯಗಳು ಬಹಳಷ್ಟಿವೆ. ನಮ್ಮಲ್ಲಿ ಶುದ್ಧ ಜಡವಾದ ಮೂಢನಂಬಿಕೆಗಳಿವೆ ಇವುಗಳಿಂದ ಪಾರಾಗಬೇಕು. ಪಾಶ್ಚಾತ್ಯ ಜ್ಞಾನದಿಂದಾಗಿ ಭಾರತೀಯ ಭಾವನೆಯೆಲ್ಲ ಕೆಲಸಬಾರದುದೆಂಬ ತಪ್ಪು ಕಲ್ಪನೆ ಹುಟ್ಟಿಕೊಂಡಿದೆ. ಮೂಢನಂಬಿಕೆಯ ಮೂಲಕ ವ್ಯಕ್ತಿಯ ಅವನತಿ ಪ್ರಾರಂಭವಾಗುವುದು. ರಹಸ್ಯಾಚರಣೆ ಮತ್ತು ಮೂಢನಂಬಿಕೆ ಯಾವಾಗಲೂ ದುರ್ಬಲತೆಯ ಚಿಹ್ನೆ, ಅವನತಿ ಮತ್ತು ಮೃತ್ಯುಚಿಹ್ನೆ. ನಮಗೆ ಇವತ್ತು ಬೇಕಾಗಿರುವುದು "ರಕ್ತದಲ್ಲಿ ಪುಷ್ಟಿ, ನರಗಳಲ್ಲಿ ಶಕ್ತಿ, ಕಬ್ಬಿಣದಂತಹ ಮಾಂಸಖಂಡಗಳು, ಉಕ್ಕಿನಂತಹ ನರಗಳು, ಕೆಲಸಬಾರದ ಜೊಳ್ಳುಭಾವನೆಗಳಲ್ಲ, ಇವುಗಳನ್ನು ನಿರಾಕರಿಸಿ, ಎಲ್ಲಾ ರಹಸ್ಯಗಳನ್ನು

ನಿರಾಕರಿಸಿ ಧರ್ಮದಲ್ಲಿ ರಹಸ್ಯವಿಲ್ಲ". (ಸ್ವಾ. ವಿ. ಕೃತಿಶ್ರೇಣಿ, ಸಂಪುಟ–೫, ಪುಟ–೧೨೪) ನಮ್ಮಲ್ಲಿ ಮುಂದಾಲೋಚನೆಗಳಿವೆ, ಅದ್ಭುತಭಾವನೆಗಳಿವೆ ಹೊರತಾಗಿ ಧಾರ್ಮಿಕ ರಹಸ್ಯವೆಂಬುವುದಿಲ್ಲ.

ಮೂಢನಂಬಿಕೆಯನ್ನು ಹಿಂಬಾಲಿಸುವುದಕ್ಕಿಂತ ಶುದ್ಧ ನಾಸ್ತಿಕರಾಗುವುದು ಒಳ್ಳೆಯದೆನ್ನುತ್ತಾರೆ. ಯಾಕೆಂದರೆ ನಾಸ್ತಿಕತೆಯಲ್ಲಾದರೂ ಸ್ವಲ್ಪ ಶಕ್ತಿ ಇದೆ. ಆದರೆ ಮೂಢನಂಬಿಕೆಯಲ್ಲಿ ಅವನತಿ ಮತ್ತು ಮರಣ ಮಾತ್ರವಿರುವುದು. ಬಲಾಢ್ಯರು ಇಂತಹ ಮೂಢನಂಬಿಕೆಯ ಹಿಂದೆ ಬಲಿಬೀಳಬಾರದು. ಕೆಲಸಕ್ಕೆ ಬಾರದ ಕುಲಗೆಟ್ಟ ಆಚಾರಗಳನ್ನೆಲ್ಲಾ ವಿವರಿಸುವುದಕ್ಕೆ ಉಪಕಥೆಗಳನ್ನು ಕಲ್ಪಿಸುವುದು. ಇದು ಮಾನವಕೋಟಿಗೆ ನಾಚಿಕೆಗೇಡು. ಧರ್ಮದ ಮುಖ್ಯ ತತ್ತ್ವಗಳೆಲ್ಲವು ಸುರಕ್ಷಿತವಾಗಿರುವುವು. ಆದರೆ ಕೆಲಸಕ್ಕೆ ಬಾರದ ಈ ನಂಬಿಕೆಗಳನ್ನು ಎಷ್ಟು ಬೇಗ ಹೊಡೆದು ಹಾಕುತ್ತೇವೆಯೋ ಅಷ್ಟು ಒಳ್ಳೆಯದು. ಮೌಢ್ಯತೆಯ ನಿವಾರಣೆಯ ಮೂಲಕ ಆಧ್ಯಾತ್ಮಿಕ ನಿಯಮಗಳು ಪ್ರಕಾಶಿಸಲು ಸಾಧ್ಯ. ಯಾವ ಸತ್ಯ ಕೇವಲ ಮಾತಿನ ತಳಹದಿಯ ಮೇಲೆ ನಿಂತಿತ್ತೋ ಅದು ಮಾಯವಾಗುವುದು. ಆದರೆ ಧರ್ಮದ ಸತ್ಯ ವ್ಯಕ್ತಿಯ ಮೇಲೆ ನಿಂತಿಲ್ಲ. ಶ್ರೀಕೃಷ್ಣನ ಮಹಿಮೆ ಅವನ ಹೆಸರಿನ ಮೇಲೆ ನಿಂತಿಲ್ಲ. ಅವನೊಬ್ಬ ಪ್ರಖ್ಯಾತ ವೇದಾಂತ ಪ್ರಚಾರಕ ಎನ್ನುವುದರ ಮೇಲೆ ನಿಂತಿದೆ. ಭರತಖಂಡದಲ್ಲಿ ಜನಾಂಗ, ಭಾಷೆ, ಸಮಾಜ, ದೇಶ ಇವುಗಳಿಗೆ ಸಂಬಂಧಪಟ್ಟ ಜಟಿಲ ಸಮಸ್ಯೆಗಳೆಲ್ಲಾ ಧಾರ್ಮಿಕ ಸಂಘಟನಾ ಶಕ್ತಿಯ ಎದುರಿಗೆ ಮಾಯವಾಗುವುದು.

ಅಧ್ಯಾಯ – ೩– ಕುವೆಂಪು ಗದ್ಯ ಸಾಹಿತ್ಯದ ತಾತ್ತ್ವಿಕತೆ

೩.೧. ಕುವೆಂಪು ಬರೆದಿರುವ ಸ್ವಾಮಿ ವಿವೇಕಾನಂದ – ಜೀವನ ಚರಿತ್ರೆಯಲ್ಲಿರುವ ವೈಚಾರಿಕ ಸ್ವರೂಪ

ಪ್ರವೇಶ

ಹಿಂದೂ ಸಮಾಜವು ಇಂದು ಅಧ್ಯಾತ್ಮ ಚೇತನವನ್ನು ಕಾಣಲು ಸಾಧ್ಯವಾದರೆ ಅದು ಸ್ವಾಮಿ ವಿವೇಕಾನಂದರಿಂದ. "ಯಾರ ಹೃದಯ ಗ್ರಂಥ ತೆರೆದಿದೆಯೋ ಅವರಿಗೆ ಬೇರೆ ಗ್ರಂಥಗಳು ಬೇಕಾಗಿಲ್ಲ. ನಮ್ಮಲ್ಲಿ ಆಸೆಯನ್ನು ಪ್ರಚೋದಿಸುವುದು ಮಾತ್ರವೆ ಅವುಗಳ ಗುರಿಯಾಗಿದೆ. ಅವೆಲ್ಲ ಬೇರೆಯವರ ಅನುಭವ ಮಾತ್ರ" (ಸ್ವಾ. ವಿ. ಕೃತಿಶ್ರೇಣಿ, ಸಂಪುಟ–೯, ಪುಟ–೨೧೯) ಎಂದು ಹೃದಯ ಧ್ವನಿಗೆ ಮಹತ್ವ ಕೊಟ್ಟ ಅಧ್ಯಾತ್ಮ ಚಿಂತಕ ಸ್ವಾಮಿ ವಿವೇಕಾನಂದರು. "ನೀನು ವಿಶ್ವಾತ್ಮನೊಂದಿಗೆ ಒಂದು, ಇರುವ ಪ್ರತಿಯೊಬ್ಬರೂ ನಿನ್ನ ಆತ್ಮವೆ, ಇರುವ ಪ್ರತಿಯೊಂದು ದೇಹವೂ ನಿನ್ನ ದೇಹ, ಇತರರನ್ನು ಹಿಂಸಿಸಿದರೆ ನಿನ್ನನ್ನು ನೀನೆ ಹಿಂಸಿಸಿಕೊಳ್ಳುವೆ, ಇತರರನ್ನು ಪ್ರೀತಿಸಿದರೆ ನಿನ್ನನ್ನು ನೀನೇ ಪ್ರೀತಿಸುವೆ" (ಸ್ವಾ. ವಿ. ಕೃತಿಶ್ರೇಣಿ, ಸಂಪುಟ–೯, ಪುಟ–೧೫೯) ಎಂದವರು ಸ್ವಾಮಿ ವಿವೇಕಾನಂದರು. ಸ್ವಧರ್ಮದ ಶ್ರೇಷ್ಠತೆಯನ್ನು ಪ್ರಕಾಶ ಪಡಿಸಲು ಉತ್ಸಾಹಿಯಾದರು. ಅಲ್ಲದೆ ಸ್ವಸಮಾಜದ ದೋಷ ದೌರ್ಬಲ್ಯಗಳನ್ನು ತೋರಿಸಿಕೊಡುವುದಕ್ಕೂ ಅವರು ಮುಂದಾದರು.

ಇಂತಹ ಮಹಾನ್ ವ್ಯಕ್ತಿತ್ವದಿಂದ ಪ್ರಭಾವಿತರಾದವರು ಕುವೆಂಪು. ಬಾಲ್ಯದಲ್ಲಿ ವಿವೇಕಾನಂದರ ಆದರ್ಶಗಳನ್ನು ಹೃದ್ಗತ ಮಾಡಿ ಆ ಮೌಲ್ಯಗಳನ್ನು ತನ್ನ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಬಳಸಿಕೊಂಡರು. ಆ ಮೂಲಕ ಜನರ ಸಮೀಪಕ್ಕೆ ವಿವೇಕಾನಂದರ ವೈಚಾರಿಕತೆಯನ್ನು ಮುಟ್ಟಿಸುವ ಮಹಾ ಉದ್ದೇಶ ಕುವೆಂಪು ಅವರದ್ದು. ಕುವೆಂಪುರವರ ಮೇಲೆ ಬಹಳ ಗಾಢವಾಗಿ ಪ್ರಭಾವ ಬೀರಿದ ಕೆಲವು ಮೌಲ್ಯಗಳ ಪರಿಶೀಲನೆ ಮಾಡುವ ಪ್ರಯತ್ನ ಇದಾಗಿದೆ.

೩.೧.೧. ಗೊಡ್ಡು ಸಂಪ್ರದಾಯದ ಖಂಡನೆ

ಹಿಂದೂ ಸಮಾಜದ ಪುನರುತ್ಥಾನವು ನಡೆಯಬೇಕು. ಅದಕ್ಕಾಗಿ ನಮ್ಮಲ್ಲಿರುವ ಗೊಡ್ಡು ಸಂಪ್ರದಾಯಗಳ ನಾಶವಾಗಬೇಕು. ವೇದಮಾರ್ಗಿಗಳೆಂದು ಹೇಳಿಕೊಳ್ಳುವವರ ಜೀವನವು ಪಾಚಿ ಬೆಳೆದ ಹಳ್ಳದ ನೀರಿನಂತಿದೆ. ಹಿಂದೂ ಸಮಾಜದ ಮೇಲೆ ಸಾವಿರಾರು ವರ್ಷಗಳ ವ್ಯಾಘಾತ ಚೇಷ್ಟಿತಗಳಿಂದ ಎಷ್ಟೋ ಗಂತಿಗಳೂ ಗೂನುಗಳೂ ಆತಂಕಕಾರಿ ಆಘಾತಗಳು ಕಾಣಿಸಿಕೊಂಡಿವೆ. ಸಂಪ್ರದಾಯ ಜನ ಇದನ್ನು ಪುರಾತನ ಸಂಪತ್ತೆಂದು ಭ್ರಮಿಸಿ, ಆದರಿಸಿ ಒಪ್ಪಿಕೊಂಡಿರುವರು. ಹಿಂದೂ ಸಮಾಜವು ಸಂಪ್ರದಾಯಗಳನ್ನು ಪ್ರಶ್ನಿಸುವುದೇ ತಪ್ಪು ಎನ್ನುವ ಅಜ್ಞಾನವನ್ನು ಬೆಳೆಸಿಕೊಂಡಿರುವುದು. ಜನರಲ್ಲಿ ಜ್ಞಾನದ ವರ್ಧನೆಯಾಗಬೇಕು. "ಗೊಡ್ಡು ಪದ್ಧತಿಗಳನ್ನೇ ಧರ್ಮವೆಂದು ಭ್ರಮಿಸಿ, ಅದರಂತೆ ಆಚರಿಸಿ, ನಿನ್ನನ್ನು ಪರಕೀಯರಿಗೆ ಮಾರಿದರು, ದಾಸಿಯನ್ನಾಗಿ ಮಾಡಿದರು, ಅನಾಥೆಯನ್ನಾಗಿ ಮಾಡಿದರು, (ಸ್ವಾಮಿ ವಿವೇಕಾನಂದ ಪುಟ–೧೦) ಎನ್ನುವಲ್ಲಿ ವಿವೇಕಾನಂದರು ಭಾರತಾಂಬೆಯ ದರಿದ್ರ ಪರಿಸ್ಥಿತಿಯನ್ನು ಬಹಳ ಶೋಚನೀಯವಾಗಿ ಗಮನಿಸಿರುವರು.

ಪುರೋಹಿತ ವರ್ಗ ತಮ್ಮ ಲಾಭಕ್ಕಾಗಿ ಹುಟ್ಟು ಹಾಕಿದ ಅನೇಕ ಕಟ್ಟುಪಾಡುಗಳನ್ನು ಕೂಡ ಅಷ್ಟೇ ನಿಷ್ಠುರವಾಗಿ ಅಲ್ಲಗಳೆಯುವರು. "ಪುರೋಹಿತರ ದೌರಾತ್ಮ್ಯದಿಂದ, ಜಾತಿಭೇದಗಳ ಕ್ರೌರ್ಯದಿಂದ, ಮೇಲೆದ್ದವರ ಅಹಂಕಾರದಿಂದ, ಕೆಳಗೆ ಬಿದ್ದವರ ಹೇಡಿತನದಿಂದ, ಪಂಡಿತರ ಸ್ವಾರ್ಥಬುದ್ಧಿಯಿಂದ, ಪಾಮರರ ಮೂರ್ಖತನದಿಂದ, ನಿನ್ನ ಸುಂದರ ಸುರ ಮಂದಿರವು ರುದ್ರಶ್ಮಶಾನವಾಯಿತೆ" (ಸ್ವಾಮಿ ವಿವೇಕಾನಂದ ಪುಟ ಸಂ.೧೦) ಎಂದು ಸನಾತನ ಸಂಸ್ಕೃತಿಯೊಳಗಡೆ ಅಸಹಾಯಕ ಮುಗ್ಧ ಜನರನ್ನು ಬಲವುಳ್ಳ ವರ್ಗ ತಮ್ಮ ಲಾಭಕ್ಕಾಗಿ, ಸ್ವಾರ್ಥಕ್ಕಾಗಿ, ಹೊಟ್ಟೆ ತುಂಬಿಸಿಕೊಳ್ಳಲು ಬಳಸಿಕೊಳ್ಳುವುದನ್ನು ಖಂಡಿಸುವರು.

ಕುವೆಂಪು ತಮ್ಮ ಕಾವ್ಯದಲ್ಲಿ ನೇರವಾಗಿ ಈ ವ್ಯವಸ್ಥೆಯ ವಿರುದ್ಧ ಧ್ವನಿಗೂಡಿಸಿರುವುದನ್ನು ಕಾಣುವೆವು.

"ಹೋಗುತಿದೆ ಹಳೆಕಾಲ, ಹೊಸಕಾಲ ಬರುತಲಿದೆ
ಬರುತಲಿದೆ ಹೊಸದೃಷ್ಟಿ ಹೊಸ ಬಯಕೆಗಳಲಿ
ಹೋಗುತಿದೆ ಹಳೆಯ ಬಾಳು, ಹೊಸಬಾಳು ಬರುತಲಿದೆ"

ಇಲ್ಲಿ ಹಳೆಕಾಲ ಹಳೆಯ ಬಾಳು ಎಂದರೆ ಗೊಡ್ಡು ಸಂಪ್ರದಾಯ ಅಲ್ಲದೆ ಜನರ ಜೀವನ ಮೌಲ್ಯಕ್ಕೆ ವಿರೋಧವಾದ ಆಚರಣೆಗಳೆಂದು ಪರಿಗಣಿಸಬೇಕು. ನವೋದಯ ಕಾಲಘಟ್ಟದಲ್ಲಿ ಕುವೆಂಪು ಅವರನ್ನು ಬಿಟ್ಟರೆ ಉಳಿದೆಲ್ಲ ಮುಂಚೂಣಿಯ ಮುಖ್ಯ ಸೃಜನಶೀಲ ಲೇಖಕರು ಬ್ರಾಹ್ಮಣರೇ. ಸೃಜನೇತರ ಸಾಹಿತ್ಯ ಪ್ರಕಾರಗಳಲ್ಲಿಯೂ ಅವರೇ ಪ್ರಧಾನ ಲೇಖಕರಾಗಿದ್ದರು. ಅಕ್ಷರ ಸಂಸ್ಕೃತಿಗೆ ಸೇರದೆ ಇರುವಂಥ ಒಂದು ಜನಸಮುದಾಯದ ಧ್ವನಿಯಾಗಿ ಕುವೆಂಪು ಬಂದರು. ಬ್ರಾಹ್ಮಣರೇತರ ವರ್ಗವು ವಿದ್ಯಾಭ್ಯಾಸವನ್ನು ಪಡೆಯುವುದರ ಜೊತೆಜೊತೆಗೆ ಗೊಡ್ಡು ಸಂಪ್ರದಾಯಗಳನ್ನು ಪ್ರಶ್ನಿಸಲು ಪ್ರಾರಂಭಿಸಿತು. ಮೇಲ್ವರ್ಗ ಹೇಳಿದ್ದೇ ವೇದಾಂತವೆಂದು ನಂಬುವ ಜನವರ್ಗವನ್ನು ಚಿಂತನೆಯ ಕಡೆಗೆ ಕರೆದೊಯ್ಯುವ ಕೆಲಸವನ್ನು ಕಾವ್ಯದ ಮೂಲಕ ಮುಟ್ಟಿಸುವ ಎದೆಗಾರಿಕೆಯನ್ನು ಕುವೆಂಪು ಕೈಗೊಂಡರು. ಮೇಲ್ವರ್ಗ ಆಗಿನ ಕಾಲದಲ್ಲಿ ಅವರ ಅನುಕೂಲತೆಗೆ ಹುಟ್ಟು ಹಾಕಿದ ಸಂಪ್ರದಾಯಗಳನ್ನು ಜನರಿಗೆ ಇವತ್ತಿಗೂ ಬಿಡಲು ಸಾಧ್ಯವಾಗುತ್ತಿಲ್ಲ. ಅದೇ ಪಾಚಿ ಪರಂಪರೆಯಲ್ಲಿ ನರಳುವುದನ್ನು ಕಾಣುತ್ತಿರುವೆವು. ಸಂಪ್ರದಾಯಗಳನ್ನು ಬಿಡುವುದರ ಮೂಲಕ ಎಲ್ಲಿ ಭಾರಿ ದುರಂತವಾಗುವುದೋ ಎಂಬ ಭಯ ವಾತಾವರಣದಲ್ಲಿ ಒದ್ದಾಡುವುದನ್ನು ಕಾಣುತ್ತೇವೆ. ಇವತ್ತಿಗೂ ನಮ್ಮೊಳಗೆ ಗೊತ್ತಿದ್ದೋ ಗೊತ್ತಿಲ್ಲದೆಯೋ ಅರ್ಥರಹಿತ ಸಂಪ್ರದಾಯಗಳು ಆವರಿಸಿಕೊಂಡಿರುವುದು.

೩.೧.೨. ಸರ್ವೋದ್ಧಾರವೇ ಸಮಾಜದ ಉಸಿರು

ಭಾರತದೇಶದಲ್ಲಿ ಬಡತನದಿಂದ ಒಪ್ಪತ್ತಿನ ಊಟಕ್ಕೆ ಗತಿಯಿಲ್ಲದೆ ಬಳಲುವವರು ಸಾಕಷ್ಟು ಮಂದಿ ಇರುವರು. ಇವರಿಗೆ ಧರ್ಮೋಪದೇಶ ಎಳ್ಳಷ್ಟು ಅರ್ಥವಾಗುವುದಿಲ್ಲ. ನಮ್ಮಲ್ಲಿ ಆಧ್ಯಾತ್ಮಿಕ ಸಂಪತ್ತು ಅಜೀರ್ಣವಾಗುವಷ್ಟಿದೆ. ಹಸಿವೆಯಿಂದ ಸಾಯುವ ಜನ ಧರ್ಮಧರ್ಮವೆಂದು ಹೇಳುವ ಬದಲು ಅನ್ನ ಅನ್ನವೆಂದು ಒಣಗಿದ ಗಂಟಲಿಂದ ಕಿರುಚುತ್ತಿರುವರು. "ಹಸಿವೆಯಿಂದ ಬಳಲಿ ಸಾಯುತ್ತಿರುವ ಜನಾಂಗಕ್ಕೆ ಧರ್ಮೋಪದೇಶ ಮಾಡುವುದು ಒಂದು ಮಹಾ ನೀಚಕಾರ್ಯ. ಹಸಿದವನಿಗೆ ವೇದಾಂತ ಬೋಧಿಸುವುದು ಒಂದು ಅಧರ್ಮದ ಪಾಪ. ಇಂಡಿಯಾ ದೇಶದಲ್ಲಿ ಯಾವನಾದರೂ ಧನಾರ್ಜನೆಗಾಗಿ ಧರ್ಮಬೋಧೆ ಮಾಡಿದನೆಂದರೆ ಅವನನ್ನು ಮುಖ ಮೇಲೆ ಉಗುಳಿ ಸಮಾಜದಿಂದ ಹೊರಗೆ ಕತ್ತು ಹಿಡಿದು ನೂಕುತ್ತಾರೆ." (ಸ್ವಾಮಿ ವಿವೇಕಾನಂದ ಪುಟ ಸಂ. ೧೩೧) ಸಮಾಜದ

ಕೊನೆಯಿಲ್ಲದ ಸಮಸ್ಯೆಯಾದ ಬಡತನದ ನಿವಾರಣೆಗಾಗಿ ಶ್ರಮಿಸಬೇಕೆಂದು ಕರೆ ನೀಡುತ್ತಾರೆ. ಧರ್ಮ ಅರ್ಥವಾಗಬೇಕಾದರೆ ಹೊಟ್ಟೆ ಬಟ್ಟೆಯ ಸಮಸ್ಯೆ ನೀಗಬೇಕು. ಹಸಿದ ಹೊಟ್ಟೆ ಹೆಬ್ಬುಲಿಯ ಬಾಯಿಯಾಗಿರುವುದು. ಅದಕ್ಕೆ ಪಾಪ ಪುಣ್ಯಗಳ ಪರಿವೇ ಇಲ್ಲ. ಲಾಭ ನಷ್ಟಗಳ ಅರಿವಿಲ್ಲ. ಮನುಷ್ಯ ಪ್ರಾಣಿ ಸದೃಶವಾಗಿ ವರ್ತಿಸುತ್ತಿರುವನು. ಹೊಟ್ಟೆ ತಣಿಯಲು ಬುದ್ಧಿಕೆಲಸ ಮಾಡುವುದು. ಬುದ್ಧಿಗೆ ಕೆಲಸ ದೊರೆಯಲು ಧರ್ಮಕರ್ಮಗಳ ಜ್ಞಾನೋದಯವಾಗುವುದು. ಹಾಗಾಗಿ ಬಡತನ ಸಮಸ್ಯೆ ಬಹಳ ಗಾಢವಾದ ಸಮಸ್ಯೆಯೆಂದು ವಿವೇಕಾನಂದರು ಪರಿಗಣಿಸುತ್ತಾರೆ. ಬಡತನದ ನಿವಾರಣೆಯನ್ನು ಕಾಣಲು ಮನುಷ್ಯ ಜ್ಞಾನ ವೃದ್ಧಿಯ ಕಡೆಗೆ ಸಾಗಬೇಕು. ನಮ್ಮ ಜ್ಞಾನದಲ್ಲಿ ಹೊಸತನ ಮೂಡಬೇಕಾದರೆ ನಾವು ಹೊಸರೀತಿಯ ಶಿಕ್ಷಣವನ್ನು ಅನುಸರಿಸಬೇಕು. ಅದಕ್ಕಾಗಿ ನಮ್ಮಲ್ಲಿರುವ ಆಧ್ಯಾತ್ಮಿಕ ಸಂಪತ್ತನ್ನು ಪಾಶ್ಚಾತ್ಯರಿಗೆ ಪರಿಚಯಿಸಬೇಕು. ಆ ಮೂಲಕ ಅವರಲ್ಲಿರುವ ಆಧುನಿಕ ಜ್ಞಾನ ಸಂಪತ್ತನ್ನು ನಾವು ಸ್ವೀಕರಿಸಬೇಕೆಂದು ವಿವೇಕಾನಂದರು ಅಭಿಪ್ರಾಯ ಪಡುವರು.

ವಿವೇಕಾನಂದರು ಹಿಂದೂ ಸಮಾಜದ ಜನತೆಗೆ ಈ ರೀತಿಯಾಗಿ ಕರೆ ನೀಡುವರು. "ಭಯಂಕರ ದಾರಿದ್ರ್ಯದಿಂದ ಪುರೋಹಿತರ ದೌರಾತ್ಮ್ಯದಿಂದ ಅಧೋಗತಿಗಿಳಿದಿರುವ ಭರತಖಂಡದ ಲಕ್ಷೋಪಲಕ್ಷ ಜೀವಿಗಳ ಮೇಲ್ಮೆಗಾಗಿ ನಾವೆಲ್ಲರೂ ಪ್ರಾರ್ಥಿಸೋಣ" ಈ ಬೇಡಿಕೆಯ ಹಿಂದೆ ನಮ್ಮಲ್ಲಿರುವ ಎಲ್ಲ ರೀತಿ ಬಡತನದ ಪರಿಚಯವಾಗುವುದು. ದೀನರಾಗಿ ಅವರೆಲ್ಲರ ಏಳಿಗೆಯೇ ಹಿಂದೂ ಸಮಾಜದ ಏಳಿಗೆಯೆಂದು ಪರಿಗಣಿಸುತ್ತಾರೆ. ಮುಂದುವರಿಸಿ "ನಾನು ತತ್ವವೇತ್ತವನಲ್ಲ; ಧರ್ಮ ಗುರುವಲ್ಲ; ಮಹಿರ್ಷಿಯಲ್ಲ; ದರಿದ್ರರಿಗಾಗಿ ಮರುಗುವ ನಾನೊಬ್ಬ ದರಿದ್ರ" ದಾರಿದ್ರ್ಯದಲ್ಲಿ ಮೌಢ್ಯತೆಗಳಲ್ಲಿ ಮುಳುಗಿ ನರಳುತ್ತಿರುವ ವ್ಯವಸ್ಥೆಯ ಬಗ್ಗೆ ಮರುಕ ಪಡುವುದರ ಜೊತೆಗೆ ಅದರಿಂದ ಬಿಡುಗಡೆ ಪಡೆಯಬೇಕೆಂದು ಯುವ ಪೀಳಿಗೆಯನ್ನು ಕೆಚ್ಚೆದೆಯಿಂದ ಮುಂದೆ ಬರುವಂತೆ ಪ್ರೇರೇಪಿಸುವರು. "ದರಿದ್ರಗಣವು ನಿಮ್ಮ ದೇವರಾಗಲಿ. ಅವರಿಗಾಗಿ ಮರುಗಿ, ಅವರಿಗಾಗಿ ಕೆಲಸ ಮಾಡಿ, ಅವರಿಗಾಗಿ ಪ್ರಾರ್ಥಿಸಿ, ಬಡವರಿಗಾಗಿ ಎದೆ ಕರಗಿ ಮನಮರುಗುವವನೆ ಮಹಾತ್ಮ; ಮರುಗದವನು ದುರಾತ್ಮ" (ಸ್ವಾಮಿ ವಿವೇಕಾನಂದ ಪುಟ ಸಂ. ೧೪೨) ಎಂದಿದ್ದಾರೆ. ಬಡವರ ಬಗ್ಗೆ ಕಾಳಜಿ ವಹಿಸಿ ಅವನನ್ನು ಎತ್ತರಕ್ಕೆ ತರುವ ಕಡೆ ಮನುಷ್ಯನ ಪ್ರಯತ್ನವಿರಬೇಕು ಎಂದು ಕರೆ ನೀಡುತ್ತಾರೆ. ಮಾನವನು ಬಡತನದಿಂದ, ಅಜ್ಞಾನದಿಂದ ಹೊರಗೆ ಬರಬೇಕು, ಇಲ್ಲದಿದ್ದರೆ ನಾವು ಬಲಿಪಶುಗಳಾಗುವೆವು. ಉಳ್ಳವರು ನಮ್ಮ ಬಡತನ, ಅಜ್ಞಾನವನ್ನು ದುರುಪಯೋಗ

ಮಾಡುವರು. ಸಂಕಷ್ಟ ಕಂಡಲ್ಲಿ ಮರುಗದಿರುವ ಜ್ಞಾನಿ ಅವನು ಜ್ಞಾನಿಯಲ್ಲವೆಂದು ಅವನಷ್ಟು ಅಜ್ಞಾನಿ, ಹೇಡಿ ಇನ್ನೊಬ್ಬನಿಲ್ಲ.
ಕುವೆಂಪು

"ಗುಡಿ ಚರ್ಚು ಮಸಜೀದಿಗಳ ಬಿಟ್ಟು ಹೊರಬನ್ನಿ.
ಬಡತನದ ಬುಡಮುಟ್ಟ ಕೀಳಬನ್ನಿ,
ಮೌಢ್ಯತೆಯ ಮಾರಿಯನು ಹೊರದೂಡಲೈತನ್ನಿ,
ವಿಜ್ಞಾನ ದೀವಿಗೆಯ ಹಿಡಿಯಬನ್ನಿ"

ಎನ್ನುವಲ್ಲಿ ದೇವರು ಬಡತನ, ಮೌಢ್ಯತೆ, ಅಜ್ಞಾನವನ್ನು ಪ್ರಶ್ನಿಸುವರು. ದೇವರು ಮಂದಿರಗಳಿಗೆ ಮಾತ್ರ ಸೀಮಿತವಾಗಬಾರದು. ಸರ್ವರೊಳಗೆ ದೇವರನ್ನು ಕಾಣಬೇಕು. ದೇವರ ಸ್ವರೂಪ ಜಾತಿಮತದ ಎಲ್ಲೆ ಮೀರಿ ಸರ್ವಾಂತರಯಾಮಿಯಾದದ್ದು ಎನ್ನುವಲ್ಲಿ ಏಕತೆಯ ಸತ್ವವನ್ನು ಕಾಣುವೆವು. ಏಕತೆಯ ದೃಷ್ಟಿ ಬಡತನದ ಸಮಸ್ಯೆಯನ್ನು ನಿವಾರಿಸಲು ಸಹಾಯವಾಗುವುದು. ಇಂದು ಎಲ್ಲ ಜಾತಿಗಳಲ್ಲೂ ಪುರೋಹಿತರು, ಮಠಾಧಿಪತಿಗಳು, ಜಗದ್ಗುರುಗಳು ಹುಟ್ಟಿಕೊಳ್ಳುತ್ತಿರುವುದು ದುರ್ದೈವದ ಸಂಗತಿ. ಈ ಮತ, ಮಠಗಳ ಜಾಡ್ಯ ಮೌಢ್ಯಗಳು ತೊಲಗದೆ ಸಮಾಜದ ಉದ್ಧಾರ ಸಾಧ್ಯವಿಲ್ಲ. ಅಧ್ಯಾತ್ಮವನ್ನು ಮತದ ಮತ್ತು ಜಾತಿಯ ಮಟ್ಟಕ್ಕಿಳಿಸುವ ಈ ಪುರೋಹಿತ ಶಾಹಿಯ ಪ್ರಭಾವ ಮುಷ್ಟಿಯಿಂದ ಸಮಾಜ ಪಾರಾಗಬೇಕು. ವೈಜ್ಞಾನಿಕ ದೃಷ್ಟಿಯನ್ನು ತಳೆಯುವುದರಿಂದ ಈ ಬಿಡುಗಡೆ ಸಾಧ್ಯವಾಗುವುದು. ಕುವೆಂಪು ಅವರ ಪ್ರಕಾರ, ನಿಜವಾದ ಅಧ್ಯಾತ್ಮ ಮತ್ತು ವಿಜ್ಞಾನ ಪರಸ್ಪರ ವಿರೋಧಿಗಳಲ್ಲ. ಎಲ್ಲರೂ ಜಾತಿ, ಮತಗಳ ಇಕ್ಕಟ್ಟಿನಿಂದ ಹೊರಬಿದ್ದು, ವಿಶ್ವಮಾನವರಾಗಬೇಕು. ಅಧ್ಯಾತ್ಮದ ನೆಲೆಗೇರಬೇಕು, ನಿರಂಕುಶಮತಿಗಳಾಗಿಯೂ 'ಆತ್ಮಶ್ರೀ'ಯನ್ನು ಉಳಿಸಿಕೊಳ್ಳಬೇಕು. ರಾಷ್ಟ್ರ ಜೀವನದಲ್ಲಿ ಸರ್ವೋದಯ ಸಿದ್ಧಿಸಬೇಕು. ಇದು ಕುವೆಂಪು ಸಾಹಿತ್ಯದ ಆಶಯ. ಕುವೆಂಪು ಅವರ ಧೋರಣೆ ಸಾಮಾಜಿಕವಾದುದು, ಮಾನವೀಯವಾದುದು. ಅವರ ಸಾಹಿತ್ಯದಲ್ಲಿ ಜೀವಪರವೂ ಜೀವನಪರವೂ ಆದ ನಿಲುವುಗಳು ಸರ್ವತ್ರ ವ್ಯಕ್ತವಾಗುವುದು. ವಿವೇಕಾನಂದರಂತೆ ಕುವೆಂಪುರವರಿಗೆ ಮತಿ ಮತ್ತು ಮನುಷ್ಯತ್ವ ಬೇರೆ ಬೇರೆಯಲ್ಲ. ಸರ್ವೋದಯ, "ಸರ್ವರಿಂ ಸರ್ವರಾ ಉದ್ಧಾರ" ಅದಕ್ಕೆ ಸಂಪೂರ್ಣವಾಗಿ ಸ್ಪಂದಿಸಿದವರು ಕುವೆಂಪು. ಸಮಾಜವಾದ, ಸಮತಾವಾದಗಳನ್ನು ಅವರಂತೆ ಪುರಸ್ಕರಿಸಿದ ಲೇಖಕರು ವಿರಳ. ಇವೆಲ್ಲದಕ್ಕೆ

ಯುಗನಿರ್ಮಾಪಕರಾದ ಶ್ರೀ ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದರ ಪ್ರಭಾವವೇ ಹೆಚ್ಚಿನ ಪ್ರಮಾಣದಲ್ಲಿ ಕಾರಣವೆನ್ನಬಹುದು. 'ಹೊಸ ಬಾಳಿನ ಗೀತೆ' ಕವನದಲ್ಲಿ 'ಸರ್ವರಿಗೆ ಸಮಬಾಳು ಸರ್ವರಿಗೆ ಸಮಪಾಲು' ಎಂಬ ಏಕತೆಯ ಚಿಂತನೆಯನ್ನು ವ್ಯಕ್ತಪಡಿಸಿದ್ದಾರೆ. 'ಶ್ರೀ ಸಾಮಾನ್ಯನ ದೀಕ್ಷಾಗೀತೆ' ಮಹತ್ವದ ಕವನ. ಯುಗಧರ್ಮ ಅದರಲ್ಲಿ ಘನೀಭವಿಸಿದೆ.

ಕೊನೆಗಂಡಿತೊ ಓರ್ರೋರ್ವರ ಗರ್ವದ ಕಾಲ,
ಇದು ಸರ್ವರ ಕಾಲ!
"ಸರ್ವೋದಯ" ! ಸರ್ವೋದಯ"

ಜನಸಾಮಾನ್ಯರ ಏಳಿಗೆಗೆ ಕುವೆಂಪು ಮಹತ್ವ ನೀಡುವರು. 'ಸಾಮಾನ್ಯತಾಶ್ರೀ' ಅವರ ಸಾಹಿತ್ಯದಲ್ಲಿ ಸ್ಥಾಯಿಯಾಗಿ ಕಂಡುಬರುವುದು. ಸರ್ವೋದಯ ಮಂತ್ರದ ಅಂಗವಾಗಿ ಸಾಮಾನ್ಯತಾ ಮಂತ್ರವನ್ನು ಅವರು ಉಚ್ಚಸ್ವರದಿಂದ ಉಚ್ಚರಿಸುವರು.

"ಶ್ರೀ ಸಾಮಾನ್ಯವೆ ಭಗವಾನ್ ಮಾನ್ಯಂ,
'ಶ್ರೀ ಸಾಮಾನ್ಯ'ವೆ ಭಗವದ್ ಧನ್ಯಂ!
ಸಾಮಾನ್ಯತೆ ಭಗವಂತನ ರೀತಿ,
ಸಾಮಾನ್ಯವೆ ದಿಟ ಭಗವತ್ ಪ್ರೀತಿ!"

ಅಹಂ ತೊರೆದು 'ಶ್ರೀ ಸಾಮಾನ್ಯ'ನಾಗಿ ಬಾಳುವುದೇ ಭಗವಂತನ ರೀತಿ ನೀತಿ ಹಾಗೂ ಪ್ರೀತಿದಾಯಕವೆಂದಿರುವರು.

ಸಮಾಜದ ಪ್ರಮುಖ ಸಮಸ್ಯೆಗಳಲ್ಲಿ ಈ ಸಮಸ್ಯೆಯು ಒಂದಾಗಿರುವುದು. ಸರಕಾರ ಯಾವ ರೀತಿಯ ಕಾರ್ಯಕ್ರಮವನ್ನು ಹಮ್ಮಿಕೊಂಡರೂ ಬಡವರು ಇವತ್ತಿಗೂ ಬಡತನದಲ್ಲಿ ಹಿಂದುಳಿದ ವರ್ಗಕ್ಕೆ ಸೇರಿರುವರು. ಪ್ರಮುಖವಾಗಿ ಸರ್ವರ ಉದ್ಧಾರವಾಗಬೇಕು, ನಂತರ ಏಕ ರೀತಿಯ ವಿದ್ಯಾಭ್ಯಾಸದ ಮೂಲಕ ಜ್ಞಾನವರ್ಧಿಯಾಗಿ ಸಮಸ್ಯೆಯನ್ನು ಬಗೆಹರಿಸಬಹುದು. ಬಲವುಳ್ಳ ವರ್ಗ ಮೊದಲು ಮಾನವೀಯತೆಯನ್ನು ಮೆರೆಯಬೇಕು. ಮಾನವೀಯತೆಯ ಮೂಲಕ ಪ್ರೀತಿಯ ಸ್ಪರ್ಶದ ಜೊತೆಗೆ ಮತಿಯ ಬಲವನ್ನು ಗಳಿಸಲು ಸಾಧ್ಯ.

೩.೧.೩. ಮಾನವ ಜಾತಿಗೆ ಗೌರವ

ಜಾತಿಪದ್ಧತಿ ಬಲವಾಗಿದ್ದ ಕಾಲಘಟ್ಟದಲ್ಲಿ ಕಾಣಿಸಿಕೊಂಡವರು ವಿವೇಕಾನಂದರು. ಪಂಚಮರು ಎದುರು ಬರುವಂತಿಲ್ಲ. ವಿವೇಕಾನಂದರು ಒಮ್ಮೆ ಕ್ಷುದ್ರಗ್ರಾಮದ ಬಳಿ ಬಂದರು. ಬಾಯಾರಿ ನೀರು ಕೇಳಲು ಆತ ತಾನು ಪಂಚಮನೆಂದನು. ಇದನ್ನು ಕೇಳಿದ ವಿವೇಕಾನಂದರು ಸ್ವಲ್ಪ ಮುಂದೆ ನಡೆದಿದ್ದರು. ಮುಂದೆ ತನ್ನ ತಪ್ಪಿನ ಅರಿವಾಯಿತು. "ಜ್ಞಾನಿಯಾಗಿದ್ದರೂ ಭೇದಬುದ್ಧಿಯನ್ನು ತೋರಿದೆನಲ್ಲಾ ಎಂದು ಮರುಗಿ ಹಿಂತಿರುಗಿ ಬಂದು ಪಂಚಮನಿಂದ ನೀರನ್ನು ಕುಡಿ"ದರು (ಸ್ವಾಮಿ ವಿವೇಕಾನಂದ ಪುಟ. ಸಂ. ೯೬) ಆ ಮೂಲಕ ಮನುಷ್ಯ ಜಾತಿಯನ್ನು ಗೌರವಿಸಬೇಕು. ನಾವೇ ಹುಟ್ಟು ಹಾಕಿದ ಜಾತಿ ಭೇದವನ್ನು ಮೊದಲು ಅಳಿಸಬೇಕು. ಈ ರೀತಿಯ ವ್ಯವಸ್ಥೆ ಹುಟ್ಟು ಹಾಕಿದ ಚೌಕಟ್ಟನ್ನು ಮುರಿದು ಮನುಷ್ಯತ್ವಕ್ಕೆ ಬೆಲೆ ಕೊಡಬೇಕೆಂದು ತೀರ್ಮಾನಿಸಿದರು. ಮುಂದೆ ವಿವೇಕಾನಂದರು ತಿರುಕರೊಡನೆ ತಿರುಕನಾಗುತ್ತಾರೆ. ಶ್ರೀಮಂತರೊಡನೆ ಅವರ ಗೌರವ ಮರ್ಯಾದೆಗೆ ಪಾತ್ರರಾಗುತ್ತಾರೆ. ಮುಂದೆ ಎಲ್ಲರೊಡನೆ ಅವರವರ ಯೋಗ್ಯತೆಗೆ ತಕ್ಕಂತೆ ಬೆರೆಯುತ್ತಾರೆ. ಹೀಗೆ ಭಾರತದ ಉದ್ದಗಲಕ್ಕೂ ಸಂಚಾರಿಸುತ್ತಾರೆ ಸ್ವಾಮಿ ವಿವೇಕಾನಂದರು.

ಮೌಲ್ವಿಯೊಬ್ಬ ವಿವೇಕಾನಂದರ ಧಾರ್ಮಿಕ ವ್ಯಕ್ತಿತ್ವಕ್ಕೆ ಮಾರು ಹೋಗುತ್ತಾನೆ. ನಂತರ ವಿವೇಕಾನಂದರನ್ನು ಮನೆಗೆ ಅತಿಥಿಯಾಗಿ ಆಹ್ವಾನಿಸುತ್ತಾನೆ. ಮನೆಯಲ್ಲಿ ಅತಿಥ್ಯ ಸ್ವೀಕರಿಸುತ್ತಾರೋ ಇಲ್ಲವೋ ಎಂಬ ಸಂಶಯ ಅದಕ್ಕಾಗಿ ಬ್ರಾಹ್ಮಣರನ್ನು ಕರೆಸಿ ಉಪಚರಿಸಲು ನಿರ್ಧರಿಸುತ್ತಾನೆ. ಆಗ ಸ್ವಾಮಿಜಿ "ನಿಮ್ಮಂತವರ ಮನೆಯಲ್ಲಿ ನಾನು ಉಣಬಲ್ಲೆ" ಎಂದು ಹೇಳುವುದರ ಮೂಲಕ ಆ ಕಾಲದಲ್ಲಿ ಇದ್ದ ವ್ಯವಸ್ಥೆಯ ಬಿಗಿಯನ್ನು ಸಡಿಲಗೊಳಿಸಲು ಪ್ರಯತ್ನಿಸಿದರು. ಮುಂದೆ ಸ್ವಾಮೀಜಿ ಬಡಜನಗಳ ಗುಡಿಸಲಿನಲ್ಲಿ ತಂಗುತ್ತಿದ್ದರು. ಸಾಮಾನ್ಯ ಬೈರಾಗಿಯಂತೆ ಇರುತ್ತಿದ್ದರು. ಇವರು ಐಶ್ವರ್ಯದಲ್ಲಿ ಓಲಾಡುವ ರಾಜಕುಮಾರರಿಂದ ಹಿಡಿದು ದಾರಿದ್ರ್ಯದಲ್ಲಿ ಒದ್ದಾಡುವ ಶ್ರಮಜೀವಿಗಳವರೆಗೆ ಬೆರೆತರು. ಅಲ್ಲದೆ ಅವರುಗಳ ಜೀವನಾವಸ್ಥೆಯಲ್ಲಿರುವ ವೈರುಧ್ಯವನ್ನು ಅನುಭವದಿಂದ ಪಡೆದರು. ಇತರ ಸ್ವಾಮಿಜಿಗಳಂತೆ ಕೇವಲ ಮಠಮಂದಿರಕ್ಕೆ ಸೀಮಿತವಾಗಿರಲಿಲ್ಲ. ನಿರಂತರ ಸಂಚಾರಿಯಾಗಿ ಲೋಕವರಿಯಲು ಪ್ರಯತ್ನಿಸಿದರು. ಬೆಳಗಾವಿಯ ದಿನಪತ್ರಿಕೆಯಲ್ಲಿ ಹೊಟ್ಟೆಗಿಲ್ಲದೆ ಸತ್ತನೆಂಬ ಸುದ್ಧಿಯನ್ನು ಓದಿ ಸ್ವಾಮೀಜಿ ದಿಗ್ಭ್ರಾಂತರಾದರು. "ಅಯ್ಯೋ ನನ್ನ ದೇಶವೆ!

ಅಯ್ಯೋ ನನ್ನ ದೇಶವೇ ಎಂದು ನರಳಿದರಂತೆ" (ಸ್ವಾಮಿ ವಿವೇಕಾನಂದ ಪುಟ-೧೧೨). ಮಾನವ ಈ ರೀತಿಯಿಂದ ಅಸಹಾಯಕನಾಗಿ ಸಾಯುವುದು ಅವರಿಗೆ ದುರಂತವಾಗಿ ಕಂಡಿತು. ಬಡತನವನ್ನು ಕಂಡವರು ವಿವೇಕಾನಂದರು. ಆದರಿಂದ ಬಡವನ ಹಸಿವಿನ ತೀವ್ರತೆಯ ಆಳ ಅರಿವಾಗಲು ಸಾಧ್ಯವಾಯಿತು. ಮಾನವ ಜಾತಿ ಇಂತಹ ಕಾರಣಗಳಿಗೆ ಸಾಯುವುದರ ಬಗ್ಗೆ ತೀವ್ರ ಕಾಳಜಿಯುಂಟಾಗುವುದು.

ಅಂತೆಯೇ 'ಮನುಷ್ಯ ಜಾತಿ ತಾನೊಂದೆ ವಲಂ' ಇದು ರಾಷ್ಟಕವಿ ಕುವೆಂಪು ಅವರು ಪಂಚ ಮಂತ್ರಗಳೊಡನೆ ಕೊಟ್ಟಿರುವ ಸಪ್ತ ಸೂತ್ರಗಳಲ್ಲೊಂದು ತನ್ನ ಬದುಕಿನ ಅತಿ ಮುಖ್ಯವಾದ ಗುರಿ ವಿಶ್ವಮಾನವ ಸಂದೇಶವೆಂದರು. "ವಿಶ್ವಮಾನವತೆ ಆಧ್ಯಾತ್ಮಿಕತೆಯ ವೈಯಕ್ತೀಕರಣ" ಮತವಾದರೊ ಆಧ್ಯಾತ್ಮಕ್ಕೆ ವಿರುದ್ಧವಾದುದು. "ಜಾತಿ ಮತಗಳು ಅವಿದ್ಯೆಯ ಕೊನೆಯ ಕೋಟೆ". ಅದನ್ನೊಡೆಯದೆ ಲೋಕಕ್ಕೆ ಉದ್ಧಾರವಿಲ್ಲ. ಕುವೆಂಪು ತಮ್ಮ 'ಅನಿಕೇತನ' ಕವನವನ್ನು 'ವಿಶ್ವ ಮಾನವ ಗೀತೆ' ಎಂದು ಕರೆದಿದ್ದಾರೆ. ಅವರ ಮಾತುಕತೆಗೆಲ್ಲ ವಿಶ್ವ ಮಾನವ ಸಂದೇಶವೇ ಕೇಂದ್ರ ಬಿಂದು. ಒಮ್ಮೆ ಮೈಸೂರಿನಲ್ಲಿ ಅಬಲಾಶ್ರಮ ಸ್ಥಾಪನೆಯಾಗುವುದರ ಬಗ್ಗೆ ಹಿರಿಯರೊಬ್ಬರು ಪ್ರಸ್ತಾಪಿಸಿದರು. ಆಗ ಕುವೆಂಪು ಈ ರೀತಿ ಪ್ರತಿಕ್ರಿಯಿಸಿದರು "ಅದು ಎಲ್ಲರಿಗೂ ಆಶ್ರಯವಾಗಬೇಕು, ಯಾವುದೋ ಒಂದು ಜಾತಿಗಲ್ಲ" ಎನ್ನುವಲ್ಲಿ ಮಾನವ ಜಾತಿಗೆ ಪ್ರಾಧಾನ್ಯತೆ ನೀಡಬೇಕೆಂಬ ಎಚ್ಚರಿಕೆ ಇದೆ. ಕುವೆಂಪು ಯಾವ ಅದ್ಭುತ ಪವಾಡಗಳಿಗೆ ಮಹತ್ವವನ್ನು ಕೊಟ್ಟವರಲ್ಲ. ಅವರು ತಮ್ಮ ಸಂದರ್ಶನದಲ್ಲಿ ತಾನು "ವಿಶ್ವ ಮಾನವ ಮಟ್ಟದಲ್ಲಿ ಪ್ರಭಾವಿತನಾದೆ ಎಂದೆನ್ನುತ್ತಾರೆ. ಎಂದರೆ ಮಾನವ ಮೌಲ್ಯಗಳಿಗೆ ಗೌರವ ಸಲ್ಲಿಸುತ್ತಾರೆಯೇ ಹೊರತು ಯಾವುದೇ ರೀತಿಯ ಆಶ್ಚರ್ಯಗಳಿಗಲ್ಲ. ಅವರ ಕೃತಿ ಸಮಸ್ತದಲ್ಲೂ ವಿಶ್ವ ಪ್ರಜ್ಞೆಯ ದಟ್ಟವಾದ ಮಿಡಿತ ಅನುಭವಕ್ಕೆ ಬರುತ್ತದೆ. ಪ್ರತಿಯೊಬ್ಬರೂ ವಿಶ್ವ ಪ್ರಜೆಯಾಗಬೇಕು. ವಿಶ್ವ ಪ್ರಜ್ಞೆಯನ್ನು ತಳೆಯಬೇಕು ಎಂಬುದು ಕುವೆಂಪು ಸಾಹಿತ್ಯದ ಆಶಯ. ಒಟ್ಟಿನಲ್ಲಿ ಮನುಷ್ಯನ ಮೌಲ್ಯಗಳನ್ನು ಗೌರವಿಸುವ ಅದನ್ನು ಅನುಷ್ಠಾನಗೊಳಿಸುವಲ್ಲಿ ಕಾಳಜಿ ವಹಿಸುವುದು ಮುಖ್ಯವಾಗಿದೆ. ಇದು ಮನುಷ್ಯನೊಳಗಿನ ಮಹತ್ವವನ್ನು ಸಾರುತ್ತದೆ. ಇದು ಇವತ್ತಿಗೂ ಸತ್ಯ. ಎಲ್ಲ ಕಾಲಕ್ಕೂ ಸತ್ಯ. ಮಾನವೀಯ ಮೌಲ್ಯಗಳನ್ನು ಗೌರವಿಸಬೇಕೆ ಹೊರತು ಜಾತಿಯನ್ನಲ್ಲ, ಮತ ಪಂಥವನ್ನಲ್ಲ.

೩.೧.೪. ನಿರಂಕುಶಮತಿ

ಹತ್ತೊಂಬತ್ತನೆಯ ಶತಮಾನವನ್ನು ವಿಜ್ಞಾನಯುಗವೆಂದೂ, ಸ್ವಾತಂತ್ರ್ಯಸಾಧನೆಯ ಯುಗವೆಂದೂ ಕರೆಯಬಹುದು. ಅದು ಮಹಾ ವ್ಯಕ್ತಿಗಳ ವಿಶಿಷ್ಟ ಮಹದಾಲೋಚನೆಗಳ ಕಾಲ. ಧೀರ ಸಂಶೋಧಕರು, ಸಾಧಕರು ಪ್ರಚಂಡವಾದ ಪ್ರಯೋಗಗಳನ್ನು ಸಾಧನೆಗಳನ್ನು ಹೂಡಿದ ಕಾಲ. ಚಕ್ರವರ್ತಿಗಳ, ಆಡಳಿತವರ್ಗಗಳ ನಿರಂಕುಶ ಪ್ರಭುತ್ವದಿಂದ ಬಿಡುಗಡೆ ಹೊಂದಿದ ಅವಧಿ. ಅಂಧಶ್ರದ್ಧೆ ಮತ್ತು ಸಂಪ್ರದಾಯಗಳ ಮೋಹ ಬಂಧನದಿಂದ ಮುಕ್ತವಾಗಲು ಪ್ರಯತ್ನಿಸಿದ ಕಾಲಘಟ್ಟ. ವ್ಯಕ್ತಿ ತನ್ನ ಮಾನಸಿಕ ದುರ್ಬಲತೆ ಮತ್ತು ಪಕ್ಷಪಾತಗಳ ವಜ್ರಪಂಜರದಿಂದ ಮುಕ್ತನಾಗಿ 'ನಿರಂಕುಶಮತಿ'ಯಾಗಲು ಪ್ರಯತ್ನಿಸಿದ ಕಾಲವಾಗಿದ್ದವು.

ವೈಜ್ಞಾನಿಕವಾದ ಆಧುನಿಕ ಶಾಸ್ತ್ರಗಳೆಲ್ಲ 'ಮತಿ'ಯ ಆಧಾರದ ಮೇಲೆ ನಿಂತಿವೆ. ಪ್ರತಿಯೊಂದಕ್ಕೂ ಕಾರಣ ಹುಡುಕಿ ವಿಚಾರ ಮಾಡಿ ಚಿಂತನೆಗೆ ಒಡ್ಡುವುದೇ ಬುದ್ಧಿಯ ಲಕ್ಷಣ. ಸತ್ಯ ತೀರ್ಮಾನದ ವಿಷಯದಲ್ಲಿ ಮತಿ ಯಾವುದೇ ರಾಜಿಗೊಳಗಾಗುವುದಿಲ್ಲ. 'ಮತಿ'ಯ ಸ್ವಭಾವವೇ ಶೋಧನೆ. 'ಮತಿ'ಯು ಅತ್ಯಂತ ಪುರಾತನವಾದುದನ್ನು ಅತ್ಯಂತ ಸತ್ಯವೆಂದು ನಂಬುವುದಿಲ್ಲ. ಹಳೆಯದಾಗಲಿ, ಹೊಸದಾಗಲಿ ವಿಚಾರಪೂರ್ವಕವಾಗಿದ್ದರೆ ಮತಿ ಒಪ್ಪಿಕೊಳ್ಳುತ್ತದೆ. ಯಾವ ದೇಶದಿಂದಲೆ ಬರಲಿ, ಯಾವ ನೆಪದಿಂದಲೆ ಬರಲಿ, ಯಾವ ಒತ್ತಡದಿಂದಲೆ ಬರಲಿ ಬುದ್ಧಿಯು ಯಾವುದೇ ರೀತಿಯ ಸಿದ್ಧವಿಚಾರದ ಸೆರೆಗೆ ಸಿಲುಕದೇ 'ನಿರಂಕುಶಮತಿ' ಅಥವಾ 'ಸ್ವತಂತ್ರಮತಿ'ಯಾಗಿರುತ್ತದೆ. ಮಾನವ ಸಂಸ್ಕೃತಿಯ ಪ್ರಗತಿಗೆ ಅದೊಂದು ತೇಜಸ್ವಿಯಾದ ತೇಜ. ವಿವೇಕಾನಂದರು ಹೊಸ ಹೊಸ ದರ್ಶನ ಶಾಸ್ತ್ರಗಳನ್ನು ಓದಿದಂತೆಲ್ಲ ಅವರಲ್ಲಿದ್ದ ಹಳೆಯ ಕುರುಡು ನಂಬಿಕೆಗಳು ಅಡಿಮೇಲಾದವು. ಪಾಶ್ಚಾತ್ಯ ವಿಜ್ಞಾನ ತತ್ತ್ವಶಾಸ್ತ್ರಗಳ ಪ್ರಭಾವದಿಂದ ಅವರ ಹೃದಯದಲ್ಲಿ ಸಂಶಯಗಳ ತುಮುಲಯುದ್ಧ ಆರಂಭವಾದುವು. ಎಲ್ಲ ಚಿಂತಕರ ವಿಚಾರಗಳನ್ನು ಚಿಂತನೆಯ ಒರೆಗಲ್ಲಿಗೆ ಹಚ್ಚಿ ಅದರಲ್ಲಿರುವ ಸತ್ಯವನ್ನು ನಿರಂಕುಶಮತಿಯಿಂದ ಸ್ವೀಕರಿಸಬೇಕೆಂದು ಕರೆ ನೀಡಿದರು. ವ್ಯಕ್ತಿ ಯಾವುದೇ ಧರ್ಮಕ್ಕಾಗಲಿ, ಯಾವುದೇ ತತ್ತ್ವಕ್ಕಾಗಲೀ ಬದ್ಧರಾಗಬೇಕಿಲ್ಲ. ಅದಕ್ಕಿಂತ ಮುಖ್ಯವಾಗಿ ಮಾನವ ಜನ್ಮಕ್ಕೆ ಯಾವುದೇ ರೀತಿಯಿಂದ ಕುಂದುಂಟಾಗದಂತೆ ಸತ್ಯವನ್ನು ನಿರಂಕುಶಮತಿಯಿಂದ ಒಪ್ಪಿಕೊಳ್ಳಬೇಕೆಂದು ಕರೆ ನೀಡಿದ್ದಾರೆ.

ಕುವೆಂಪು ವಿದ್ಯಾರ್ಥಿಗಳಿಗೆ 'ನಿರಂಕುಶಮತಿಗಳಾಗಿ' ಎಂದು ಕರೆ ನೀಡಿದರು. ಈ ಕರೆ ಇಂದಿಗೂ ಮುಂದೆಯೂ ಎಲ್ಲರಿಗೂ ಅನ್ವಯಿಸುವ ಮಾತು. ಕುವೆಂಪು ಅವರ ವೈಚಾರಿಕತೆಯ ಆಳವು ಈ ಮೂಲಕ ಅರಿವಾಗಲು ಸಾಧ್ಯ. ಮಾತ್ರವಲ್ಲದೆ ನಮ್ಮ ಸಮಾಜಕ್ಕೆ ಹಿಂದಿನಿಂದಲೂ ಅಂಟಿಕೊಂಡು ಬಂದಿರುವ ನಾನಾ ರೋಗ ರುಜಿನಗಳ ಬೇರಿಗೆರೆದ ಬೆನ್ನೀರಾಗಿದೆ. ಸಂಯಮ ಪೂರ್ಣವಾದ ಬುದ್ಧಿ ಸ್ವಾತಂತ್ರ್ಯವೇ ನಿರಂಕುಶ ಮತಿಯಾಗಿದೆ. ಎಲ್ಲ ವಿಚಾರಗಳನ್ನು ಸ್ವೀಕರಿಸುವಾಗ ಬುದ್ಧಿಯ ಒರೆಗಲ್ಲಿಗೆ ತಿಕ್ಕಿ ನೋಡಬೇಕು. ಅದರಲ್ಲಿ ಸ್ವೀಕರಿಸಬೇಕಾದ ಮೌಲ್ಯಗಳನ್ನು ಕಟ್ಟಿಕೊಳ್ಳಬೇಕು. "ಮತಿಯನ್ನು ತಿರಸ್ಕರಿಸಿದರೆ ಈಶ್ವರನ ಜ್ಯೋತಿಯನ್ನು ತಿರಸ್ಕರಿಸಿದಂತಾಗುತ್ತದೆ." (ನಿರಂಕುಶಮತಿಗಳಾಗಿ ಪುಟ ೪) ಮತಿಯ ಮೂಲಕ ದೇವರು, ಧರ್ಮ ಉಳಿಯುತ್ತವೆ. ಉಳಿದಂತೆ ಮೂಢನಂಬಿಕೆ, ಗೊಡ್ಡು ಸಂಪ್ರದಾಯಗಳು, ಬರಡು ಕಂದಾಚಾರಗಳು, ಜಡ್ಡುಕ್ರಿಯೆಗಳು ಹಾರಿಹೋಗುತ್ತವೆ. ಬುದ್ಧಿಶಕ್ತಿ ಮತ್ತು ವಿಜ್ಞಾನದ ಮೂಲಕ ಎಲ್ಲಾ ಸಂದರ್ಭಗಳನ್ನು ಸೂಕ್ಷ್ಮವಾಗಿ ಗಮನಿಸುವುದು ಅಗತ್ಯವಾಗಿದೆ. ಇದನ್ನು ಬಿಟ್ಟು ವಿಜ್ಞಾನವನ್ನು ಕೇವಲ ಪ್ರಯೋಗಾಲಯಗಳಿಗೆ ಸೀಮಿತಗೊಳಿಸುವುದಲ್ಲ. ವಿಜ್ಞಾನವನ್ನು ಬೋಧಿಸುವವರು ಗೊಡ್ಡು ಸಂಪ್ರದಾಯಗಳಿಗೆ ಮುಗಿ ಬೀಳುತ್ತಿರುವರು. ಅವೆಲ್ಲ ಜ್ಞಾನ ನೀರ ಮೇಲಿನ ಹೋಮದಂತೆ ವ್ಯರ್ಥವಾದದ್ದು. ಕುವೆಂಪು ಬದುಕಿಗೆ ಧರ್ಮ, ಕಲೆ ಮತ್ತು ವಿಜ್ಞಾನ ಅಗತ್ಯವೆಂದಿದ್ದಾರೆ. ಇವುಗಳಲ್ಲಿ ವಿಜ್ಞಾನವು ಶಿವನ ಮೂರನೆಯ ಕಣ್ಣಿನಂತೆ ಅಗತ್ಯವಿದ್ದಾಗ ಬಳಸಲು. ಕುವೆಂಪು ಅವರದು ಶುಷ್ಕ ವೈಜ್ಞಾನಿಕ ದೃಷ್ಟಿಯಲ್ಲ. ಅದು ಅಧ್ಯಾತ್ಮದೊಡನೆ ಮಿಳಿತವಾದದ್ದು. ಹಾಗಾಗಿ ಅದನ್ನು ದಾರ್ಶನಿಕ – ವೈಜ್ಞಾನಿಕ ದೃಷ್ಟಿ ಎಂದು ಕರೆಯುವರು. ಕುವೆಂಪು ಹೇಳುವಂತೆ "ಇನ್ನು ಮುಂದೆಯಾದರೂ ನೀವು ಅಧ್ಯಾತ್ಮವನ್ನು ಉಳಿಸಿಕೊಂಡು ಮತ ಮತ್ತು ಅದರಿಂದ ಜನ್ಯವಾದ ಮತ ಭ್ರಾಂತಿ ಮತ್ತು ಮತ ಮೌಢ್ಯಗಳನ್ನು ನಿರಾಕರಿಸದಿದ್ದರೆ ನಿಜವಾದ ಪ್ರಜಾಸತ್ತೆಯಾಗಲಿ, ಸಮಾಜವಾದವಾಗಲಿ ಸಮಾನತಾಭಾವ ಸ್ಥಾಪನೆಯಾಗಲಿ ಎಂದೆಂದಿಗೂ ಸಾಧ್ಯವಾಗುವುದಿಲ್ಲ." (ವಿಚಾರಕ್ರಾಂತಿಗೆ ಆಹ್ವಾನ, ಪುಟ–೭)

ಇವರಿಬ್ಬರ ಈ ವೈಚಾರಿಕತೆ ವ್ಯಕ್ತಿ ವ್ಯಕ್ತಿಯಲ್ಲಿ ರೂಢಿಯಾಗಬೇಕಾದುದು. ನಿರಂಕುಶಮತಿಯಾಗಿ ಚಿಂತನೆ ಮಾಡುವುದರಿಂದ ವ್ಯಕ್ತಿ ಯಾವುದೇ ವ್ಯವಸ್ಥೆ, ಪಂಥಕ್ಕೆ, ವಿಚಾರಕ್ಕೆ ಬಂಧರಾಗಬೇಕಿಲ್ಲ. ಸ್ವಂತಿಕೆಯಿಂದ ಮತಿಯ ಬಲದಿಂದ ತೀರ್ಮಾನ ಕೈಗೊಳ್ಳಲು ಸಾಧ್ಯ. ಇದು ಬದುಕನ್ನು ಅರ್ಥಪೂರ್ಣವಾಗಿ,

ವಿಚಾರಬಂಧವಾಗಿ ರೂಪಿಸಲು ಸಹಾಯ ಮಾಡುತ್ತದೆ. ಮೊದಲನೆಯದಾಗಿ ವ್ಯಕ್ತಿ ಸ್ವತಂತ್ರಮತಿಯುಳ್ಳವನಾಗಬೇಕು. ಪ್ರತಿಯೊಂದನ್ನು ಪರೀಕ್ಷಿಸಿ ಹುರುಳಿದ್ದರೆ ಮಾತ್ರ ಸ್ವೀಕರಿಸಬೇಕೆಂದು ಕುವೆಂಪು ಕರೆ ನೀಡುವರು. ಇದೇ ನಿರಂಕುಶಮತಿ.

೩.೧.೫. ಯತ್ರ ಜೀವಃ ತತ್ರ ಶಿವಃ

ಪ್ರತಿಯೊಂದು ಜೀವಿಯ ಒಳಗೂ ಒಂದು ಜೀವಾತ್ಮವಿದೆ. ನಮ್ಮಲ್ಲಿರುವ ಒಳ್ಳೆಯತನದ ಮೂಲಕ ನಾವು ಇನ್ನೊಬ್ಬರಲ್ಲಿರುವ ಪರಮಾತ್ಮನನ್ನು ಕಾಣಬೇಕು. ಇತರರ ಕಷ್ಟಕ್ಕಾಗುವ ಗುಣ ನಮ್ಮೊಳಗಿರುವ ಪರಮಾತ್ಮನ ಅಂಶ, ಇದನ್ನು ವಿವೇಕಾನಂದರು ಈ ರೀತಿ ಕಂಡುಕೊಳ್ಳುವರು. ನಮ್ಮ ಅಕ್ಕಪಕ್ಕದಲ್ಲಿರುವ ದರಿದ್ರರೂ, ಅನಾಥರೂ, ದುಃಖಗಳಿಗೆ ಸಹಾಯ ಮಾಡುವುದು. ತುತ್ತಿಲ್ಲದವರಿಗೆ ತುತ್ತು ನೀಡುವುದು, ವಸ್ತ್ರದಾನ ಮಾಡುವುದು, ರೋಗಿಗಳ ಆರೈಕೆ ಮಾಡುವುದು, ಅಗತ್ಯವಿದ್ದಲ್ಲಿ ವಿದ್ಯಾದಾನ ಮಾಡುವುದು. ಈ ಎಲ್ಲ ಕೆಲಸಗಳನ್ನು ಒಂದಲ್ಲ ಒಂದು ರೀತಿಯಿಂದ ಮಾಡಲು ಸಾಧ್ಯವಾದರೆ ಅದರಿಂದ ಶಾಂತಿಯನ್ನು ಕಾಣಲು ಸಾಧ್ಯ. ಇದುವೇ ಪರಮಾತ್ಮನ ಸೇವೆಯೆಂದಿದ್ದಾರೆ. "ಪತಿತ ನಾರಾಯಣನ ಸೇವೆಯೆ ಪಾವನ ನಾರಾಯಣನ ಸೇವೆ" (ಸ್ವಾಮಿ .ವಿವೇಕಾನಂದ .ಪುಟ ಸಂ. ೧೮೨) ಎನ್ನುವಲ್ಲಿ ಇನ್ನೊಬ್ಬನ ಕಷ್ಟಗಳಿಗೆ ಸ್ಪಂದಿಸುವುದೇ ನಿಜವಾದ ಈಶ್ವರನ ಸೇವೆಯೆಂದಿದ್ದಾರೆ. "ಮಂದಿರ ಮತ್ತು ಪ್ರತಿಮೆಗಳಲ್ಲಿರುವ ಭಗವಂತನ್ನು ಹೊರಗೆಳೆದು 'ಯತ್ರ ಜೀವಃ ತತ್ವ ಶಿವಃ' ಮಂತ್ರದಿಂದ ವಿರಾಟದ ಪೂಜೆಗೆ ಅನುವಾಗಬೇಕು. ಪ್ರಾಚೀನ ಕಾಲದ ಸಂನ್ಯಾಸಿಗಳಂತೆ ಗಿರಿಗುಹೆ ಕುಟೀರಗಳಲ್ಲಿ ವಾಸ ಮಾಡುತ್ತ, ಕೇವಲ ಆತ್ಮ ಸಾಕ್ಷಾತ್ಕಾರ ಲಂಪಟರಾಗಿ ಮಾತ್ರ ಇರಬಾರದು. ಸಂಸಾರದ ಕರ್ಮಕ್ಷೇತ್ರದಲ್ಲಿ ಎದೆಗೊಟ್ಟು ನಿಂತು ಮಾನವರನ್ನು ಉತ್ತಮ ಕಾರ್ಯಗಳಿಗೆ ಪ್ರೇರೇಪಿಸಬೇಕು. ಕೋಟಿಕೋಟಿ ವ್ಯಕ್ತಿಗಳ ಹೃದಯದ ಅಜ್ಞಾನಾಂಧಕಾರವನ್ನು ದೂರ ಮಾಡಬೇಕು" (ಸ್ವಾಮಿ ವಿವೇಕಾನಂದ ಪುಟ. ಸಂ. ೧೮೫) ದೇವರ ಆರಾಧನೆ ಎನ್ನುವುದು ಕೇವಲ ಮೂರ್ತಿ ಪೂಜೆ ಅಥವಾ ದೇವಸ್ಥಾನ ಸೇವೆಯಲ್ಲ. ಅದು ಸರ್ವ ಮಾನವನ್ನೊಳಗಿರುವ ಆತ್ಮಗೌರವದ ಆರಾಧನೆ. ಕರ್ಮದ ಮೂಲಕ ನಿಯತ್ತು ನಿಷ್ಠೆಯಿಂದ ಶ್ರದ್ಧೆಯಿಂದ ನಡೆಸುವ ಬದುಕೇ ನಿಜವಾದ ಆರಾಧನೆಯಾಗಿರುವುದು. ಪಾಪಿಗಳ ಉದ್ಧಾರವೇ ಪರಮಾತ್ಮನ ಸೇವೆ. ಬಹುಜನರ ಹಿತಕ್ಕಾಗಿ, ಬಹುಜನರ ಸುಖಕ್ಕಾಗಿ, ಇನ್ನೊಬ್ಬರ ಕಷ್ಟಕ್ಕಾಗಿ ಸ್ಪಂದಿಸುವುದೇ ನಿಜವಾದ ಜೀವನ. ನರಳುವ ಲಕ್ಷಾಂತರ ದುಃಖಿಗಳನ್ನು

ಸಂತೈಸಬೇಕು. ದುಃಖದಲ್ಲಿರುವ ತಾಯಂದಿರ ಕಂಬನಿಯನ್ನು ತೊಡೆಯಬೇಕು. ಪತಿತರಾದವರನ್ನು ಮೇಲೆತ್ತಬೇಕು. ಯಾವನು ತನ್ನ ಹೀನ ಜೀವನವನ್ನು ಬಿಟ್ಟು ಉನ್ನತ ಜೀವನವನ್ನು ಹಿಡಿಯಲು ಯತ್ನಿಸುತ್ತಾನೊ ಅಂಥವನಿಗೆ ನಾವು ನೆರವಾಗಬೇಕು. ಇದು ಪ್ರಾಮಾಣಿಕವಾದ ಪರಮಾತ್ಮನ ಸೇವೆಯೆನ್ನುತ್ತಾರೆ ವಿವೇಕಾನಂದರು.

ಕುವೆಂಪು 'ಶ್ರೀರಾಮಾಯಣದರ್ಶನಂ' ಮಹಾಕಾವ್ಯದಲ್ಲಿ "ಪಾಪಿಗುದ್ಧಾರಮಿಹುದೌ ಸೃಷ್ಟಿಯ ಮಹದ್‌ವ್ಯೂಹ ರಚನೆಯೊಳ್" ಎಂಬ ಕಾಣ್ಕೆಯನ್ನು ನೀಡಿದ್ದಾರೆ. ಪಾಪಿಗಷ್ಟೇ ಅಲ್ಲ ದೀನದಲಿತರಿಗೂ ಉದ್ಧಾರವುಂಟು. ಪಾಪಿಯಾದ ರಾವಣನ ಉದ್ಧಾರವಾದರೆ, ದಸ್ಯುಸ್ತ್ರೀ ಮಂಥರೆ ದೀನಳಾಗಿ ಉದ್ಧಾರವನ್ನು ಪಡೆಯುತ್ತಾಳೆ. ಕುವೆಂಪು ಯಾವುದೇ ದೇವಸ್ಥಾನಗಳಿಗೆ, ಜಾತಕ ಪಂಚಾಂಗ, ರಾಹುಕಾಲ ಗುಳಿಗಕಾಲ ಈ ರೀತಿ ಸಂಪ್ರದಾಯ ಆಚರಣೆಗಳ ಕಡೆ ಸುಳಿದವರಲ್ಲ. ಇದೆಲ್ಲ ಅವರ ಹೇಳಿಕೆಯಂತೆ ಪುರೋಹಿತವರ್ಗ ತಮ್ಮ ಹೊಟ್ಟೆಪಾಡಿಗೆ ಹುಟ್ಟುಹಾಕಿದ ಕಟ್ಟಳೆಗಳು. ಆ ಮೂಲಕ ಉಳಿದ ವರ್ಗವನ್ನು ಶೋಷಿಸುವ, ಸುಳಿಯುವ ಪರಿ ದೇವಸ್ಥಾನ ಮತ್ತು ಅರ್ಚಕರನ್ನು ಕುರಿತು ಕುವೆಂಪು ತೀಕ್ಷ್ಣವಾಗಿ ಈ ರೀತಿ ವಿಡಂಬಿಸುತ್ತಾರೆ.

ದೇಗುಲ ಸೆರೆಮನೆ
ದೇವರು ಸೆರೆಯಾಳ್
ಕಾವಲು ಪೂಜಾರಿ" ಎಂದಿದ್ದಾರೆ.

ದೇವರು ಎನ್ನುವ ಚಿಂತನೆ ಕೇವಲ ಮಂದಿರದಲ್ಲಿ ಅಥವಾ ಮಸೀದಿಗಳಲ್ಲಿ ಮಾತ್ರವಲ್ಲ ಸರ್ವಾಂತರ್ಯಾಮಿಯಾಗಿ ಎಲ್ಲೆಡೆಯಲ್ಲೂ ಇರುವುವು. ("ಈಶಾವಾಸ್ಯಮಿದಂ ಸರ್ವಂ") ಈ ಸತ್ಯವನ್ನು ಎಲ್ಲರೂ ಮನಗಾಣಬೇಕು. 'ಜಲಗಾರ' ನಾಟಕದಲ್ಲಿ ಶಿವಗುಡಿಯಲ್ಲಿ ಕುಳಿತು, ಅಭಿಷೇಕಗೊಳ್ಳುವ ಸ್ಥಾವರ ಲಿಂಗವಲ್ಲ, ಅವನು ಸರ್ವತ್ರ ಕ್ರಿಯಾಶೀಲನಾಗಿರುವ "ಜಗದ ಜಲಗಾರ" ವೆಂದಿದ್ದಾರೆ. ದೇವಾಲಯದಲ್ಲಿ ದೇವರನ್ನು ಕೂಡಿಹಾಕುವ ಅವಿವೇಕ ಅಂತ್ಯಗೊಳ್ಳಬೇಕು. ಕುವೆಂಪು ಸಾಮಾನ್ಯನನ್ನು 'ಶ್ರೀಸಾಮಾನ್ಯ'ನೆಂದು ಕರೆದಿದ್ದಾರೆ. ಅಲ್ಲದೆ 'ಶ್ರೀಸಾಮಾನ್ಯನೆ ಭಗವದ್ಧನ್ಯ' ವೆಂದರು. ಅವನ ಅನ್ನ ಬಟ್ಟೆಗಳ ಪೂರೈಕೆಗೆ

ಆದ್ಯತೆ ನೀಡಿದರು. ಅವರೊಂದು ಕಡೆ 'ಮೊದಲನೆ ದೇವರು ಈ ಹಣ್ಬುದುಕಿ ನೀಡಜ್ಜಿಗೆ ಭಿಕ್ಷೆ' ಎಂದು ಇನ್ನೊಂದೆಡೆ–

"ಇಂದು ನೆತ್ತರು ಚೆಲ್ಲಿ ಮುಂದೆ ಬಹಮಕ್ಕಳಿಗೆ
ಹೊಟ್ಟೆಗನ್ನವ, ಮೈಗೆ ಬಟ್ಟೆಯನು ನೀಡಿ!!" ಎಂದು ಕರೆಕೊಟ್ಟರು.

ಸ್ವಾಮಿ ವಿವೇಕಾನಂದರು ದರಿದ್ರ 'ನಾರಾಯಣ'ವೆಂದು "ದರಿದ್ರ ದೇವೋ ಭವ" ಎಂದರು. ಎಂದರೆ ಬಡವರು ನಮ್ಮ ದೇವರಾಗಬೇಕು ಎಂಬ ಮಂತ್ರವನ್ನಿತ್ತರು. ಇವರು 'ನಾನೊಬ್ಬ ಸಮಾಜವಾದಿ' ಎಂದು ಹೇಳಿ, "ಜನಸಾಮಾನ್ಯರು ಮತ್ತು ಬಡವರು ಮೇಲೇಳಬೇಕು ಎಂಬ ಸಂಕಲ್ಪವನ್ನು ವ್ಯಕ್ತಪಡಿಸಿ "ಸೇವೆಯೆ ಪೂಜೆ" ಎಂಬ ಸೂತ್ರವನ್ನು ಕೈಗೊಂಡರು. ರಾಮಕೃಷ್ಣರ ಈ ಮಹಾವಾಕ್ಯ "ದೇವರನ್ನು ಅರಸುವುದಾದರೆ, ಮನುಷ್ಯನಲ್ಲಿ ಅರಸು" ಎಂಬುದು ಈ ಚಿಂತನೆಯ ಪ್ರೇರಣೆ.

ಒಟ್ಟಿನಲ್ಲಿ "ಯತ್ರ ಜೀವಃ ತತ್ರ ಶಿವಃ" ಎಂಬ ಮಾತು ಸತ್ಯ. ವ್ಯಕ್ತಿ ವ್ಯಕ್ತಿಯ ನಡುವೆ ಜಗಳ ವೈರುಧ್ಯಗಳು ಹುಟ್ಟಿ ಸಂಬಂಧಗಳು ಕಳಚಿಕೊಳ್ಳುವ ಕಾಲ ನಿರಂತರವಾಗಿರುವುದು. ಇವತ್ತು ವೈರುಧ್ಯಗಳು ವ್ಯಕ್ತಿ ವ್ಯಕ್ತಿಯ ನಡುವೆ ಮಾತ್ರ ಸೀಮಿತವಾಗಿರದೆ ದೇಶದೇಶಗಳ ನಡುವೆಯೂ ಬಿರುಕನ್ನುಂಟು ಮಾಡುತ್ತಿರುವುದು. ಇಂತಹ ಸಂದರ್ಭದಲ್ಲಿ ಮಹಾನ್ ವ್ಯಕ್ತಿಗಳ ಮಹಾನ್ ಚಿಂತನೆಗಳನ್ನು ಪುನಹಃ ಚಿಂತನೆಗೊಳಪಡಿಸುವುದು ಅಗತ್ಯವಾಗಿದೆ.

೩.೧.೬. ವೇದಾಂತ ಜ್ಞಾನದ ವಿಸ್ತಾರ

ವೇದ ಮತ್ತು ತತ್ತ್ವಶಾಸ್ತ್ರಗಳು ಒಂದು ಕಾಲಕ್ಕೆ ಪಂಡಿತರ ಸೊತ್ತಾಗಿದ್ದುವು. ಇದನ್ನು ಪ್ರಪಂಚದ ಮೂಲೆ ಮೂಲೆಯ ಜನರು ಮಾತನಾಡುವ ವಿಷಯವಾಗಬೇಕು. ವೇದಾಂತ ಜ್ಞಾನ ಎಲ್ಲರೊಳಗಿರಬೇಕೆಂದು ವಿವೇಕಾನಂದರು ಬಯಸಿದರು. ಸಂಸ್ಕೃತ ಭಾಷೆಯಲ್ಲಿರುವ ವೇದಾಂತ ಜ್ಞಾನವನ್ನು ಎಲ್ಲರಿಗೂ ಅರ್ಥವಾಗುವಂತೆ ಸರಳ ಭಾಷೆಯಲ್ಲಿ ವಿವರಿಸಬೇಕು. ದೇಶದೆಲ್ಲೆಡೆ ವೇದಾಂತ ಜ್ಞಾನವನ್ನು ಪ್ರಸಾರ ಮಾಡಬೇಕೆಂದು ಸ್ವಾಮಿ ವಿವೇಕಾನಂದರು ನಿರ್ಧರಿಸಿದರು. ಕೇವಲ ಒಂದು ವರ್ಗದ ಸೊತ್ತಾಗಿರುವ ವೇದಾಂತವು ಸರ್ವರ ಸೊತ್ತಾಗಬೇಕು.

ತತ್ತ್ವಜ್ಞಾನವು ಬರಿಯ ವಾದವಿವಾದಗಳನ್ನು ಹುಟ್ಟುಹಾಕದೆ, ಅದರ ಸಹಾಯ ಪ್ರಭಾವಗಳು ಪ್ರತಿಯೊಬ್ಬನ ದಿನಚರ್ಯೆಯಲ್ಲಿಯೂ ಮೈದೋರಬೇಕೆಂದು ಸ್ವಾಮಿಜಿಗಳು ತಮ್ಮ ಶಿಷ್ಯರಿಗೆ ಕರೆ ನೀಡುತ್ತಿದ್ದರು. "ವೇದಾಂತ ಜ್ಞಾನವು ಉಳುವ ರೈತನನ್ನು ಮತ್ತೂ ಚೆನ್ನಾಗಿ ಉಳುವಂತೆ ಮಾಡುವುದು. ವೇದಾಂತಿಯಾದ ಕುಂಬಾರನು ವೇದಾಂತಿಯಲ್ಲದ ಕುಂಬಾರನಿಗಿಂತಲೂ ಚೆನ್ನಾಗಿ ಮಡಕೆ ತಟ್ಟುವನು". (ಸ್ವಾಮಿ ವಿವೇಕಾನಂದ ಪುಟ ಸಂ. ೧೫೮) ವೇದಾಂತ ಜ್ಞಾನವು ವ್ಯಕ್ತಿಯನ್ನು ಪರಿಪೂರ್ಣತೆಯ ಕಡೆಗೆ ಒಯ್ಯುವುದು. ಆದುದರಿಂದ ಈ ಜ್ಞಾನವು ಒಬ್ಬನ ಆಸ್ತಿಯಾಗದೆ ಸರ್ವರ ಆಸ್ತಿಯಾಗಬೇಕು. ಆ ಮೂಲಕ ಎಲ್ಲರೂ ವೇದಾಂತಿಗಳಾಗಬೇಕು.

ವೇದಾಂತ ಎನ್ನುವುದು ವಿಚಾರ ಸಮೂಹ. ವೇದಾಂತಿಯ ಕೆಲಸ ಕಾರ್ಯಗಳಲ್ಲಿ ಅಚ್ಚುಕಟ್ಟುತನವಿರುವುದು. ಇದು ವ್ಯಕ್ತಿಗೆ ಶಿಸ್ತು ಹಾಗೂ ಪ್ರಾಮಾಣಿಕತೆಯನ್ನು ಕಲಿಸಿಕೊಡುವುದು. ಭಾರತೀಯ ಮಣ್ಣಿನ ಮೂಲ ಸಂಪತ್ತುಗಳು ಇವು. ಇದು ಯಾವುದೇ ಜಾತಿ, ಧರ್ಮ, ಪಂಗಡಕ್ಕೆ ಸೀಮಿತವಾಗದೆ ಮನುಷ್ಯ ಜಾತಿಗೆ ಸಂಬಂಧಿಸಿದ್ದಾಗಿದೆ. ಇಂತಹ ಅಮೂಲ್ಯವಾದ ಮೌಲ್ಯಭರಿತವಾದ ಸಂಪತ್ತನ್ನು ವಿಶ್ವವ್ಯಾಪ್ತಿಯಾಗಿ ಪ್ರಚಾರ ಮಾಡಿದವರು ಸ್ವಾಮಿ ವಿವೇಕಾನಂದರು. ನಮ್ಮ ಪೂರ್ವದ ಮಹರ್ಷಿಗಳ ದಾರಿಯಲ್ಲಿ ನಡೆಯುವುದೇ ವೇದಾಂತದ ನೀತಿಯಾಗಿದೆ. ಸರ್ವರಿಗೂ ಶಕ್ತಿ ಮತ್ತು ಪರಿಶುದ್ಧ ಜೀವನವನ್ನು ದಯಪಾಲಿಸಿದವರು ನಮ್ಮ ಪೂರ್ವಿಕರು. ಅವರು ಅನೇಕ ಅದ್ಭುತವಾದ ಆಶ್ಚರ್ಯಪಡಿಸುವಂತಹ ಸಾಧನೆಯ ಕೆಲಸಗಳನ್ನು ಕೈಗೊಂಡಿರುವರು. ಅಂತೆಯೇ, ಇವತ್ತಿನ ಕಾಲಮಾನ ಪರಿಸ್ಥಿತಿಗೆ ತಕ್ಕಂತೆ ನಾವೂ ಕೂಡಾ ಸಾಧಕರಾಗಬೇಕೆಂದು ಕರೆ ನೀಡಿರುವರು ಸ್ವಾಮಿ ವಿವೇಕಾನಂದರು. "ಪ್ರತಿಯೊಂದು ಜನಾಂಗಕ್ಕೂ ಪ್ರತಿಯೊಬ್ಬ ವ್ಯಕ್ತಿಗಿರುವಂತೆ ಒಂದೊಂದು ಜೀವಗುಣವಿರುತ್ತದೆ. ಆ ಕೇಂದ್ರ ಜೀವಗುಣದ ಆಧಾರದ ಮೇಲೆ ಇತರ ಗುಣಗಳನ್ನು ಕಟ್ಟಬೇಕು. ಭರತಖಂಡದ ಜೀವಗುಣವೆಂದರೆ ಧರ್ಮ. ಜೀವಗುಣಗಳನ್ನು ಬಿಟ್ಟು ವರ್ತಿಸಲು ತೊಡಗಿದರೆ ಜನಾಂಗ ಸಾಯಬೇಕಾಗುತ್ತದೆ. (ಸ್ವಾಮಿ ವಿವೇಕಾನಂದ ಪುಟ–೧೭೫) ಭರತ ಖಂಡದಲ್ಲಿ ಧರ್ಮಕ್ರಾಂತಿಯಾಗದೆ ಉಳಿದ ಸುಧಾರಣೆಗಳು ಸಾಧ್ಯವಿಲ್ಲ. ರಾಜಕೀಯ ಸಮತೆಯುಂಟಾಗಬೇಕಾದರೆ ಮೊದಲು ಮಹಾನ್ ಗ್ರಂಥಗಳಲ್ಲಿರುವ ವಿವಿಧ ಪಂಗಡಗಳಲ್ಲಿರುವ, ಮಠಮಾನ್ಯಗಳಲ್ಲಿ ಹುದುಗಿರುವ ವೇದಾಂತದ ಅದ್ಭುತ ಸತ್ಯಗಳನ್ನು ಹೊರತೆಗೆಯಬೇಕು. ಮಾತ್ರವಲ್ಲದೆ ಅವನ್ನು ದೇಶದೆಲ್ಲೆಡೆ ಹರಡಿ

ಆಧ್ಯಾತ್ಮಿಕ ಕ್ರಾಂತಿಯನ್ನೇ ಉಂಟುಮಾಡಬೇಕು. ನಮಗೆ ಅಗತ್ಯವಿರುವುದು ಕೆಚ್ಚೆದೆಯ ವೀರಧರ್ಮ, "ವೀರ ನಿರ್ಮಾಣದ ಧರ್ಮ, ಸತ್ಯಕ್ಕೆ ಅದೇ ಒರೆಗಲ್ಲು – ದೇಹವನ್ನಾಗಲಿ ಮನಸ್ಸನ್ನಾಗಲಿ, ಆತ್ಮವನ್ನಾಗಲಿ ದುರ್ಬಲಗೊಳಿಸುವ ಪ್ರತಿಯೊಂದನ್ನು ವಿಷವೆಂದು ತಿಳಿದು ತಿರಸ್ಕರಿಸಿ". (ಸ್ವಾಮಿ ವಿವೇಕಾನಂದ ಪುಟ–೧೭೬) ಸತ್ಯವು ಅತ್ಯಂತ ಬಲವುಳ್ಳದ್ದು. ನಮ್ಮ ಮಹಾನ್ ಗ್ರಂಥಗಳಲ್ಲಿರುವ ಪರಮ ಸತ್ಯಗಳು ನಮಗೆ ಮಾದರಿಯಾಗಿವೆ. ಇವುಗಳನ್ನು ಅನುಷ್ಠಾನಗೊಳಿಸುವುದರ ಮೂಲಕ ವ್ಯಕ್ತಿ ಎಲ್ಲ ರೀತಿಯ ದಿಗ್ಬಂದನಗಳ ಮೂಲಕ ಮುಕ್ತಿ ಪಡೆಯಲು ಸಾಧ್ಯ. ಅಷ್ಟೇ ಅಲ್ಲದೆ ಭರತಖಂಡವು ಎಲ್ಲಾ ದುಷ್ಟಶಕ್ತಿಯಿಂದ ವಿಮೋಚನೆಗೊಳ್ಳಲು ಸಾಧ್ಯ.

"ನಿಜವಾದ ತತ್ತ್ವಜ್ಞಾನ ಬರಿಯ ಸಿದ್ಧಾಂತಗಳ ಕಂತೆಯಲ್ಲ, ಅದು ಸುವ್ಯವಸ್ಥಿತವಾದ ಅನುಭವಗಳ ಶ್ರೇಣಿ" (ಸ್ವಾಮಿ ವಿವೇಕಾನಂದ ಪುಟ–೧೧೪) ಅಂತೆಯೇ ವೇದಾಂತವು ಸಾಧಕ ಜೀವನದ ವಿಭಿನ್ನಾವಸ್ಥೆಗಳಿಂದ ಅನುಭೂತವಾದ ಸತ್ಯ ಸಮೂಹ. ಇಂತಹ ಆಧ್ಯಾತ್ಮಿಕ ಸಂಪತ್ತನ್ನು ವಿಶ್ವವ್ಯಾಪಿಗೊಳಿಸಿದವರು ಸ್ವಾಮಿ ವಿವೇಕಾನಂದರು. ಭರತಖಂಡದ ಚರಿತ್ರೆಯಲ್ಲಿಯೇ ಹಿಂದೂ ಸಂನ್ಯಾಸಿಯೊಬ್ಬ ಮೊದಲ ಬಾರಿ ಶಾಸ್ತ್ರ ನಿಷಿದ್ಧವಾದ ಕಾಳಜಲವನ್ನು ದಾಟಿರುವುದು. ಸರ್ವಮತಧರ್ಮ ಹಾಗೂ ಭಾವ ಸಂಸ್ಕಾರ ಗ್ರಾಸಿಯಾದ ವೇದಾಂತ ದರ್ಶನವನ್ನು ವಿವೇಕಾನಂದರು ಎದೆ ಮುಟ್ಟುವಂತೆ ಪಾಶ್ಚಾತ್ಯರಿಗೆ ವಿವರಿಸಿದರು.

ವೇದಾಂತವು ಕೇವಲ ಬ್ರಾಹ್ಮಣ ವರ್ಗಕ್ಕೆ ಮಾತ್ರ ಸೀಮಿತವಾಗಿದ್ದ ಕಾಲದಲ್ಲಿ ಶೂದ್ರರಾದ ಕುವೆಂಪು ಸ್ವತಃ ಅದನ್ನು ಹೃದ್ಗತ ಮಾಡಿಕೊಂಡರು. ಈ ಮೂಲಕ ಸಮಾಜದ ಒಳಗಡೆ ಉಪನಿಷತ್ತು ಭಗವದ್ಗೀತೆ ಮೊದಲಾದ ಶಾಸ್ತ್ರ ಗ್ರಂಥಗಳಿಗೆ ಇರುವ ಶಿಸ್ತಿನ ಅರಿವಾಗುವುದು. ಈ ರೀತಿಯ ಭಿನ್ನತೆಯಿಂದ ಕೂಡಿದ ಪಾತ್ರಗಳನ್ನು ಕುವೆಂಪು ಅವರ ಕಾದಂಬರಿಯಲ್ಲಿ ಕಾಣಲು ಸಾಧ್ಯ. "ಕಾನೂರು ಹೆಗ್ಗಡತಿ" ಕಾದಂಬರಿಯಲ್ಲಿ ಹೂವಯ್ಯನ ಪಾತ್ರದ ಮೂಲಕ ಜೋಯಿಸರಿಗೆ ಉದ್ಭವವಾಗುವ ಭೀತಿಯಿಂದ ಅರಿವಾಗುವುದು. ಅದು ಅಲ್ಲದೆ "ಬ್ರಾಹ್ಮಣರಾದ ತಮಗಿಂತಲೂ ಶೂದ್ರನಾದ ಜೋಯಿಸನಿಗೆ ಉಪನಿಷತ್ತು ಭಗವದ್ಗೀತೆ ಮೊದಲಾದವುಗಳ ಪರಿಚಯವೂ ಜ್ಞಾನವೂ ಹೆಚ್ಚಾಗಿದೆ ಎಂಬುದು" ಹೂವಯ್ಯನ ಬಗ್ಗೆ ಜೋಯಿಸರಿಗಿರುವ ಆತಂಕ. ಇಲ್ಲಿ ಬ್ರಾಹ್ಮಣರಲ್ಲದವರಿಗೆ ಇವುಗಳು ನಿಷಿದ್ಧವೆಂಬ ದೃಷ್ಟಿಕೋನವನ್ನು ಕಾಣುವೆವು.

'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ "ಅಜ್ಞರೂ ಮೌಢ್ಯಾಂಧರೂ ಆಗಿದ್ದ ಶೂದ್ರವರ್ಗದ ಸಾಮಾನ್ಯ ಜನರಿಂದ ಪಾದಪೂಜೆ ಮಾಡಿಸಿಕೊಳ್ಳುತ್ತಿದ್ದರು, ಅಡ್ಡ ಪಲ್ಲಕ್ಕಿಸೇವೆ ಸಲ್ಲಿಸಿಕೊಳ್ಳುತ್ತಿದ್ದರು, ದಾನ ದಕ್ಷಿಣೆ, ಸಾಷ್ಟಾಂಗ ನಮಸ್ಕಾರಗಳನ್ನೂ ಸ್ವೀಕರಿಸುತ್ತಿದ್ದರು. ಆಶೀರ್ವಾದ ಮಾಡುತ್ತಿದ್ದರು. ತಮ್ಮ ತಮ್ಮ ಪಂಗಡಕ್ಕೆ ಸೇರಿದ ಬ್ರಾಹ್ಮಣೋತ್ತಮರಿಗೆ, ಭೂಸುರರಿಗೆ, ಸಮಾರಾಧನೆ ಮಾಡಿಸಿ, ಹೊಟ್ಟೆ ತುಂಬಿಸುತ್ತಿದ್ದರು. ಬಹುಶಃ ಶಾಸ್ತ್ರಕ್ಕಾಗಿ, ತಮ್ಮ ವರ್ಗಕ್ಕೆ ಸೇರಿದ ವಿದ್ವಾಂಸರನ್ನು ನೆರಪಿ ಕಾವ್ಯಾರ್ಥ ಏರ್ಪಡಿಸುತ್ತಿದ್ದರೂ ಇರಬಹುದು. ಶೂದ್ರರು ವೇದೋಪನಿಷತ್ತುಗಳನ್ನು ಓದುವುದಿರಲಿ, ಕೇಳಿದರೂ ಅವರ ಕಿವಿಗೆ ಸೀಸ ಕರಗಿಸಿ ಹುಯ್ಯುವ ನರಕ ಶಿಕ್ಷೆಯನ್ನು ವಿಧಿಸಿ, ಅದಕ್ಕೆ ಮನುಧರ್ಮಶಾಸ್ತ್ರವೆಂದು ಹೆಸರಿಟ್ಟವರು ಶೂದ್ರರಿಗೆ ವೇದಾಂತ ಬೋಧನೆ ಮಾಡುವ ಪಾಪಕ್ಕೆ ಏಕೆ ಪಕ್ಕಾಗುತ್ತಾರೆ?" (ಮಲೆಗಳಲ್ಲಿ ಮಧುಮಗಳು ಪುಟ-೨೯). ಇಂಥ ಗಂಭೀರ ವೈಚಾರಿಕತೆಯನ್ನು ಕಾದಂಬರಿಯೊಳಗಡೆ ಕಾಣುವೆವು. ವೇದಾಂತದ ಬಗ್ಗೆ ಇರುವ ಮಡಿವಂತಿಕೆಯ ಖಂಡನೆಯನ್ನು ಗಮನಿಸಬಹುದು.

ವಿವೇಕಾನಂದರ ಚಿಂತನೆಯಂತೆ ವೇದಾಂತವು ಎಲ್ಲರ ಸೊತ್ತಾಗಬೇಕೆಂದು ಕುವೆಂಪು ಅಭಿಪ್ರಾಯ ಪಡುವರು. ಅದನ್ನು ತಮ್ಮ ಕಾದಂಬರಿಯಲ್ಲಿ ಬರುವ ಪಾತ್ರಗಳ ಮೂಲಕ ಸ್ಪಷ್ಟಪಡಿಸುವರು. ಕುವೆಂಪು ಅವರು ಈ ರೀತಿಯ 'ಮತ ವಿರೋಧಿ' ಚಿಂತನೆಯೇ ಹೊರತು ಅವರು 'ಧರ್ಮವಿರೋಧಿ'ಯಾಗಿರಲಿಲ್ಲ. ನಿಜವಾದ ಧರ್ಮಕ್ಕೆ, ಅಧ್ಯಾತ್ಮಕ್ಕೆ ಜಾತಿಮತಗಳ ಬಂಧನವಾಗಲಿ, ಕಾಲದೇಶಗಳ ಮಿತಿಯಿಲ್ಲ. ಪಾಶ್ಚಾತ್ಯರಿಗೆ ಹೋಲಿಸಿದರೆ ಭಾರತದ ಸಾಮಾನ್ಯ ಜನಕ್ಕೂ ದೇವರು, ಧರ್ಮ, ಕರ್ಮ, ವಿಧಿ, ಮುಂತಾದವು ಅರ್ಥವಾಗುವ ಹಾಗೆ ಇತರರಿಗೆ ಅರ್ಥವಾಗುವುದಿಲ್ಲ. ಇವು ಜನತೆಯ ಬಾಳಿನ ಒಂದು ಭಾಗವಾಗಿದೆ. ಬುದ್ಧಿಗತವಲ್ಲದಿದ್ದರೂ ಹೃದ್ಗತ ಮತ್ತು ಅನುಭವಗತವಾಗಿದೆ. ಇದಕ್ಕೆ ಕಾರಣ ನಮ್ಮಲ್ಲಿರುವ ಅಧ್ಯಾತ್ಮ ಪರಂಪರೆ, ಕುವೆಂಪು ಶೂದ್ರರಾದರೂ ಭಾರತೀಯ ಸನಾತನ ಜ್ಞಾನವನ್ನು ಆರ್ಜಿಸಿಕೊಂಡವರು.

ವೇದಾಂತದ ಜನ್ಮಸ್ಥಾನವು ಈ ನಮ್ಮ ಪುಣ್ಯಭೂಮಿಯಾದ ಭಾರತ. ಇಲ್ಲಿ ಜನರು ದೌರ್ಬಲ್ಯ – ದಾಸ್ಯ – ಬೋಧನೆಯಿಂದ ಅನೇಕ ಕಾಲದಿಂದಲೂ ಸಮ್ಮೋಹಿತರಾಗಿರುವರು. ಮುಟ್ಟಿದರೆ ಮೈಲಿಗೆ ಎಂಬ ಕೀಳು ಭಾವನೆ ಇರುವಂತಹ ಈ ಜನವರ್ಗದ ಬಗ್ಗೆ ನಮಗೆ ಸಹಾನುಭೂತಿಯಾಗಲಿ, ಪ್ರೀತಿಯಾಗಲಿ,

ಮರುಗುವ ಹೃದಯವು ಎಲ್ಲಿಯವರೆಗೆ ಬರುವುದಿಲ್ಲವೋ ಅಲ್ಲಿಯವರೆಗೆ ಬುದ್ಧನ ಹೃದಯವು ಶ್ರೀಕೃಷ್ಣನು ಬೋಧಿಸಿದ ಸೇವಾ ಧರ್ಮವೂ ಜಾಗೃತವಾಗುವುದಿಲ್ಲವೆಂದು ವಿವೇಕಾನಂದರು ತಿಳಿಸುವರು. ಅಸಹಾಯಕರಿಗೆ ಮೊದಲು ರೊಟ್ಟಿ ಅನಂತರ ಅಧ್ಯಾತ್ಮ ಅನ್ನವಿಲ್ಲದೆ ಸಾಯುವವರಿಗೆ ಅಧ್ಯಾತ್ಮವನ್ನು ತುರುಕುವುದು ಸರಿಯಲ್ಲ. ನಮ್ಮವರಿಗೆ ಹೊಟ್ಟೆಗಿಲ್ಲದಿದ್ದರೂ ಧರ್ಮವೇನೋ ಅಜೀರ್ಣವಾಗುವಷ್ಟಿದೆ. ಆದರೆ ಸಿದ್ಧಾಂತಗಳು ಹಸಿವನ್ನು ಪರಿಹರಿಸಲಾರವು. "ನಮ್ಮಲ್ಲಿ ಎರಡು ಮಹಾ ಪಾಪಗಳಿವೆ. ಒಂದು ದೌರ್ಬಲ್ಯ, ಮತ್ತೊಂದು ಸಾಧಾರಣ ಜನರಲ್ಲಿ ನಮಗಿರುವ ಜಿಗುಪ್ಸೆ, ಶುಷ್ಕಹೃದಯತೆ". (ಕುವೆಂಪು–ಸಮಗ್ರಗದ್ಯ, ಸಂ.೨, ಪುಟ–೫೧) ಎಲ್ಲಿಯ ತನಕ ನಮ್ಮ ಹೃದಯದಲ್ಲಿ ಕನಿಕರ ಇರುವುದಿಲ್ಲವೋ, ಪ್ರಪಂಚದಲ್ಲಿರುವ ಪ್ರತಿಯೊಬ್ಬನು ಕೂಡಾ ಅನಂತ ಬ್ರಹ್ಮದ ಅಂಶಗಳೆಂದು ಎಲ್ಲಿಯವರೆಗೆ ತಿಳಿಯುವುದಿಲ್ಲವೋ ಅಲ್ಲಿಯವರೆಗೆ ನಮ್ಮ ಸಿದ್ಧಾಂತ, ವೇದಾಂತ ತತ್ವಗಳು ಪ್ರಚಾರಕ್ಕೆ ಬರುವುದಿಲ್ಲವೆಂದಿದ್ದಾರೆ. ಕುವೆಂಪು ಕೂಡಾ 'ಶ್ರೀ ಸಾಮಾನ್ಯ'ರ ಉದ್ಧಾರವೇ ಭಗವಂತನಿಗೆ ಪ್ರೀತಿಯೆಂದಿದ್ದಾರೆ.

'ಶ್ರೀ ಸಾಮಾನ್ಯ ವೆ ಭಗವನ್ ಮಾನ್ಯಂ,
ಶ್ರೀ ಸಾಮಾನ್ಯ ನೆ ಭಗವದ್ ಧನ್ಯಂ,
ಸಾಮಾನ್ಯತೆ ಭಗವಂತನ ರೀತಿ,
ಸಾಮಾನ್ಯವೆ ದಿಟ ಭಗವತ್ ಪ್ರೀತಿ,

ಇನ್ನೊಮ್ಮೆ "ಮೊದಲನೆ ದೇವರು ಈ ಹಣ್ಣುದುಕಿ ನೀಡಜ್ಜಿಗೆ ಭಿಕ್ಷೆ" ಎನ್ನುವಲ್ಲಿ ಬಡತನಕ್ಕೆ ಹಿರಿತನಕ್ಕೆ ಗೌರವ ಮರ್ಯಾದೆಯನ್ನು ನೀಡುವುದು ನಮ್ಮ ಉಸಿರಾಗಬೇಕು. ಮಾತ್ರವಲ್ಲದೆ ಈ ಮಣ್ಣಿನ ಗುಣವಾದ ಇಂತಹ ಚಿಂತನೆಗಳನ್ನು ಸಾರ್ವತ್ರಿಕಗೊಳಿಸಬೇಕು. ಆಗ ಮಾತ್ರ ಬಡವರು ಮತ್ತು ಜನಸಾಮಾನ್ಯರು ಮೇಲೇಳಲು ಸಾಧ್ಯ.

೩.೨. ಕುವೆಂಪು – ಆತ್ಮಚರಿತ್ರೆಯಲ್ಲಿರುವ ತಾತ್ವಿಕತೆ

ಪ್ರವೇಶ

'ನೆನಪಿನ ದೋಣಿಯಲ್ಲಿ' – ಇದು ಕುವೆಂಪು ಅವರ ಆತ್ಮಕಥೆ, ಸ್ಮೃತಿಕೋಶ ಅಲ್ಲದೆ ಕೆಲವೊಂದು ವಿಷಯಗಳಿಗೆ ಸಂಬಂಧಿಸಿದಂತೆ ಒಂದು ಪುಟ್ಟ ವಿಶ್ವಕೋಶವೆನ್ನಬಹುದು. 'ನೆನಪಿನ ದೋಣಿಯಲ್ಲಿ' ಗ್ರಂಥವು ಕಲಾಗೌರವದಿಂದ, ಅಧ್ಯಾತ್ಮಗೌರವದಿಂದ ಕೂಡಿರುವುದು. ಅಂತೆಯೇ, ವಿಶೇಷವಾದ ಚಾರಿತ್ರಿಕ ಮೌಲ್ಯವನ್ನು ಒಳಗೊಂಡಿದೆ. ಶೂದ್ರ ಸಮಾಜದ ಅನುಭವಗಳನ್ನು ಹಿಂದೆಂದೂ ಸಾಧ್ಯವಾಗಿರದಿದ್ದ ಸಮೃದ್ಧ ವೈವಿಧ್ಯದೊಂದಿಗೆ 'ನೆನಪಿನ ದೋಣಿಯಲ್ಲಿ' ಸಾಕ್ಷಾತ್ಕಾರಗೊಳಿಸಿದರು ಕುವೆಂಪು. ಅವರ ವ್ಯಕ್ತಿತ್ವದ ವಿವಿಧ ಮುಖಗಳನ್ನು ಇಲ್ಲಿ ಕಾಣಬಹುದು. ಕುವೆಂಪು ತನ್ನ ಅರವತ್ತೊಂದನೇಯ ವಯಸ್ಸಿನಲ್ಲಿ 'ನೆನಪಿನ ದೋಣಿಯಲ್ಲಿ' ಎಂಬ ಆತ್ಮಕಥನವನ್ನು ಬರೆದರು. ಬದುಕಿನ ಎಲ್ಲಾ ರೀತಿಯ ಶ್ರೇಷ್ಠ ಸಾಧನೆಗೆ ಪ್ರಶಸ್ತಿಗೆ ಆಗಲೇ ಪಾತ್ರರಾಗಿದ್ದರು. ಅವರು ತಮ್ಮ ಜೀವಿತದಲ್ಲಿಯೇ ಸಾಂಸ್ಕೃತಿಕ ಪ್ರತಿಮೆಯಾಗಿ ಕನ್ನಡ ಪರಂಪರೆಯ ಅಪರೂಪದ ವ್ಯಕ್ತಿತ್ವವಾಗಿ ಸ್ವೀಕೃತರಾದವರು. ಇಲ್ಲಿ ಅವರ ಬದುಕಿನ ಆಪ್ತ ವಿವರಗಳು ಓದುಗರ ನಿರೀಕ್ಷೆಗೆ ಎಟಕಲಾರದು. ಇಡೀ ಕೃತಿಯನ್ನು ಕವಿಯ ಪ್ರಜ್ಞೆಯ ವಿಕಸನದ ಒಂದು ಆಧ್ಯಾತ್ಮಿಕ ಚರಿತ್ರೆಯಾಗಿ ನೋಡಬಹುದಾಗಿದೆ. ತನ್ನ ಸ್ವಪ್ರಯತ್ನದಿಂದ, ತನ್ನಲ್ಲಿರುವ ಧೀಮಂತಿಕೆ, ಪ್ರತಿಭೆ ಹಾಗೂ ಅಪೂರ್ವವಾದ ಏಕಾಗ್ರತೆ ಮತ್ತು ಇಚ್ಛಾಶಕ್ತಿಗಳಿಂದ ಕನ್ನಡ ಸಂಸ್ಕೃತಿಯ ಪ್ರಾತಿನಿಧಿಕ ಪ್ರತಿಮೆಯಾದವರು ಕುವೆಂಪು.

ಮತಿ ಎಂಬುದು ಮಾನವನ ಸರ್ವೋತ್ಕೃಷ್ಟವಾದ ಆಯುಧವಾಗಿದೆ. ಇಂತಹ ಮತಿ ಅನೇಕ ಸಂದರ್ಭದಲ್ಲಿ ಸತ್ವರಹಿತವಾಗುವುದು. ಇದಕ್ಕೆ ಕಾರಣ ಮೌಢ್ಯ, ಮತಾಚಾರ, ಸಮಾಜ ಭೀತಿ, ಸ್ವರ್ಗ ನರಕ ಹಾಗೂ ದೇವಾನುದೇವತೆಗಳ ಭಯ. ಅಂದರೆ ಮತಿಗೆ ಅಂಕುಶಗಳು ಅತಿಯಾಗಿ ಹೋಗಿ ಜೀವವೇ ನಿಸ್ತೇಜವಾಗಿದೆ. ಮತಿಯನ್ನು ನಿಸ್ತೇಜಗೈದಿರುವ ಅಂಶಗಳಲ್ಲಿ ಜಾತಿಮತವು ಮೊದಲನೆಯದೆನ್ನಬಹುದು. ಸರ್ವಮತಗಳಿಗಿಂತಲೂ ಶುದ್ಧ ಹೃದಯದ ಮತ್ತು ಸನ್ಮತಿಯ ಮತವೇ ಮಹೋನ್ನತವಾದುದು. ಆ ಗುರು, ಈ ಆಚಾರ್ಯ, ಆ ಧರ್ಮಶಾಸ್ತ್ರ, ಈ ಮನುಸ್ಮೃತಿ ಇವೆಲ್ಲವು ಏನೇ ಹೇಳಿದ್ದರೂ ಅವುಗಳನ್ನು ಅದೇ ರೀತಿಯಲ್ಲಿ ಸ್ವೀಕರಿಸಬೇಕಾಗಿಲ್ಲ. ವಿಮರ್ಶಿಸುವ, ಪರೀಕ್ಷಿಸುವ, ಒರೆಗಲ್ಲಿಗೆ ಹಚ್ಚುವ

ಹಕ್ಕು ನಮ್ಮದಾಗಿರಬೇಕು. ಒಂದು ಕಾಲದಲ್ಲಿ ಶ್ರೇಷ್ಠವೆನಿಸಿದ್ದು ಎಲ್ಲ ಕಾಲಕ್ಕೂ ಶ್ರೇಷ್ಠವಾಗಬೇಕಾಗಿಲ್ಲ. ಕುವೆಂಪು ಅವರಲ್ಲಿ ಈ ಎಲ್ಲ ರೀತಿಯ ಸುಪ್ತವಾಗಿರುವ ಚಿಂತನೆಗಳು ಗರಿಗೆದರಲು ಕಾರಣ ಶ್ರೀರಾಮಕೃಷ್ಣ ಆಶ್ರಮದ ಒಡನಾಟ. ಅಂತೆಯೇ ಸ್ವಾಮಿ ವಿವೇಕಾನಂದರ ವಿಚಾರ ವೈಭವ. ವಿವೇಕಾನಂದರ ಕ್ರಾಂತಿಕಾರಕ ವಿಚಾರಗಳಲ್ಲಿ, ಬುದ್ಧನ ಉದಾರ ಮಾನವತಾವಾದ, ಪುರೋಹಿತಶಾಹಿಯ ಅರ್ಥಹೀನ ಆಚರಣೆಗಳನ್ನು ಮತ್ತು ದೇವರು ಧರ್ಮಗಳ ಹೆಸರಿನಲ್ಲಿ ಅವರು ಮಾಡುತ್ತಿದ್ದ ಶೋಷಣೆಗಳನ್ನು ಕುರಿತು ಪ್ರತಿಭಟನೆ, ಜಾತಿಪದ್ಧತಿಯ ಖಂಡನೆ, ಸಮಾನತೆ ಮತ್ತು ಶ್ರೀರಾಮಕೃಷ್ಣಪರಮಹಂಸರಿಂದ ಪ್ರತಿಪಾದಿತವಾದ ಸರ್ವಧರ್ಮ ಸಮನ್ವಯ ದೃಷ್ಟಿ – ಈ ಎಲ್ಲವೂ ಸಮ್ಮೇಳನಗೊಂಡಿರುವುದು. ಬುದ್ಧ – ವಿವೇಕಾನಂದ – ಶ್ರೀರಾಮಕೃಷ್ಣ ಪರಮಹಂಸರ ಈ ವಿಚಾರಗಳು ಕುವೆಂಪು ಅವರಿಗೆ ಸಮ್ಮತವಾದವು. ಅದನ್ನು ತಮ್ಮ ಕವಿ ಪ್ರಜ್ಞೆಯ ಮೂಲಕ ತಮ್ಮ ಬರವಣಿಗೆಗಳಲ್ಲಿ ಕುವೆಂಪು ಅಭಿವ್ಯಕ್ತಗೊಳಿಸಿದರು.

ಕುವೆಂಪು ಅವರ ವೈಚಾರಿಕತೆಯ ಹಿಂದೆ ಅವರ ಶೂದ್ರ ಜಗತ್ತಿನ ವಾಸ್ತವ ಅನುಭವಗಳು ಮೂಲದ್ರವ್ಯಗಳಾಗಿರುವುವು. ಹಾಗೆಯೇ ಇಂಗ್ಲೀಷ್ ಭಾಷೆಯು ಆ ಕಾಲದಲ್ಲಿ ಶೂದ್ರ ವರ್ಗದ ಬಿಡುಗಡೆಯ ಸಾಧನವಾಯಿದು. ಯಾಕೆಂದರೆ ದೇಶದ ಕೆಳವರ್ಗದ ಬಿಡುಗಡೆಯ ಸಾಧನವೆನ್ನುತ್ತಾರೆ. ಯಾಕೆಂದರೆ 'ಬ್ರಾಹ್ಮಣಾದಿ ಉಚ್ಚವರ್ಗಗಳಿಂದ ಸಾವಿರಾರು ವರ್ಷಗಳ ಕಾಲ ತುಳಿಯಲ್ಪಟ್ಟು, ಶೋಷಿಸಲ್ಪಟ್ಟು, ದಾಸ್ಯವನ್ನು ದೈವದತ್ತವೆಂದೂ ವಿಧಿ ಎಂದೂ ಒಪ್ಪಿಕೊಂಡು ಕಾಲಕಸವಾಗಿ ಬಿದ್ದಿದ್ದ ಶೂದ್ರಾದಿ ವರ್ಗದವರನ್ನು ತಲೆಯೆತ್ತುವಂತೆ ಪ್ರೇರಿಸಿದ್ದು ಇಂಗ್ಲೀಷೇ' (ನೆನಪಿನ ದೋಣಿಯಲ್ಲಿ ಪುಟ ೧೨೫) ಕುವೆಂಪು ಸಾಹಿತ್ಯಿಕವಾಗಿ ಶ್ರೀಮಂತರಾದದ್ದು ಇಂಗ್ಲೀಷ್ ಭಾಷೆಯ ಮೂಲಕ. ಸ್ವಾಮಿ ವಿವೇಕಾನಂದ – ಶ್ರೀರಾಮಕೃಷ್ಣ ಪರಮಹಂಸ – ಅರವಿಂದ – ಟ್ಯಾಗೂರ್ – ಗಾಂಧೀ ಇವರ ತತ್ತ್ವಜ್ಞಾನದ ಪರಿಚಯವಾದದ್ದು ಕೂಡಾ ಇಂಗ್ಲಿಷಿನಲ್ಲಿಯೇ. ಅಲ್ಲದೆ ಶ್ರೀರಾಮಕೃಷ್ಣಾಶ್ರಮದ ಆಶ್ರಯದ ಪರಿಣಾಮವೂ ಅವರ ತಾತ್ತ್ವಿಕ ವೈಚಾರಿಕತೆಯನ್ನು ರೂಪಿಸಿದವು. ಆಶ್ರಮವನ್ನು ಸೇರುವ ಮೊದಲೇ ಕುವೆಂಪು ಮೈಸೂರಿನ ಪಬ್ಲಿಕ್ ಲೈಬ್ರರಿಯಲ್ಲಿ ಸ್ವಾಮಿ ವಿವೇಕಾನಂದರ ಕೃತಿಶ್ರೇಣಿಯ ದರ್ಶನವನ್ನು ಪಡೆದರು. ತರುಣ ಕವಿಚೇತನವು, ವಿವೇಕಾನಂದರ ತಾತ್ತ್ವಿಕ ವೈಶಾಲ್ಯ ಹಾಗೂ ಓಜಸ್ಸಿಗೆ ವಶವಾಯಿತು. ಅಲ್ಲದೆ ವಿವೇಕಾನಂದರನ್ನು ತಮ್ಮ ಮಾರ್ಗದರ್ಶಕರನ್ನಾಗಿ ಸ್ವೀಕರಿಸಿದರು.

೩.೨.೧. ಜಾತಿ ಪದ್ಧತಿಯ ವಿರುದ್ಧ ಧ್ವನಿ

ಮಲೆನಾಡಿನ ಸುತ್ತಮುತ್ತಣ ಜನ ಅಜ್ಞಾನಾವಸ್ಥೆಯಲ್ಲಿರುವಾಗಲೇ, ಮೇಲು ಜಾತಿ ಅನಿಸಿಕೊಂಡವರ ಕಿರುಕುಳವನ್ನು ಅಪಪ್ರಚಾರವನ್ನು ಲೆಕ್ಕಿಸಲಿಲ್ಲ ಕುವೆಂಪು. ಜಾತಿ ಮತಗಳ ಸಾಧಕ ಬಾಧಕಗಳನ್ನು ಗಮನಿಸಿ ತನಗೆ ಹೊಳೆದ ಸತ್ಯವನ್ನು ಸಾಹಿತ್ಯದ ಮೂಲಕ ಅಭಿವ್ಯಕ್ತಿ ಪಡಿಸಿದರು. "ಮತ ನಮಗೊಂದು ದೊಡ್ಡ ಬಂಧನವಾಗಿದೆ, ನಾಡಿನ ಏಳ್ಗೆಯ ಕುತ್ತಿಗೆಗೆ ಉರುಳಾಗಿದೆ......" (ಸ್ವಾಮಿ ವಿವೇಕಾನಂದ, ಕುವೆಂಪು, ಪುಟ–೨) ಹೀಗೆ ಜಾತಿಯ ಹಿನ್ನೆಲೆಯಲ್ಲಿ ನಡೆಯುವ ಕೆಲಸಬಾರದ, ಶ್ರೇಯಸ್ಕರವಲ್ಲದ ಆಚಾರ ವ್ಯವಹಾರಗಳನ್ನು ಖಂಡಿಸುವರು. ಅರವತ್ತು ವರ್ಷಗಳ ಹಿಂದೆಯೇ ಮತದ ಹಾನಿಯನ್ನು, ಅದರಿಂದ ಸಂಭವಿಸುವ ನಷ್ಟವನ್ನು ಕುವೆಂಪು ವರ್ಣಿಸುವರು. ಜಾತಿಯಿಂದ ಮೇಲಿನವರೆನಿಸಿಕೊಂಡು, ವ್ಯವಹಾರದಿಂದ ಕೀಳಾಗಿದ್ದರೂ ಅವರಿಗೆ ದೇವಸ್ಥಾನದ ಒಳಗೆ ಪ್ರವೇಶವಿದೆ. ಅದೇ ಜಾತಿಗೆ ಅಸ್ಪೃಶ್ಯರೆನಿಸಿಕೊಂಡು ನಿಷ್ಠೆಯ ಬದುಕನ್ನು ನಡೆಸುತ್ತಿದ್ದರೆ ಅವರಿಗೆ ದೇವಾಲಜ ಒಳಗೆ ಪ್ರವೇಶವಿಲ್ಲ. ಇದು ಯಾವ ನ್ಯಾಯವೆಂದು ಪ್ರಶ್ನಿಸುವರು. ಇಂತಹ ಯುವಕರಿಗೆ ಎಚ್ಚರಿಕೆಯ ಕರೆಗಂಟೆಯನ್ನು ನೀಡುವರು. "ಗುಡಿಯ ಕಲ್ಲಿನಲ್ಲಿ ದೇವರಿದ್ದಾನೆ – ಎಂಬ ಭ್ರಾಂತಿ ನಿಮಗೇಕೆ?.......... ಗುಡಿಯೊಳಗೆ ಹೋಗಿ ಮತದ ಮೌಢ್ಯಕ್ಕೂ ಪುರೋಹಿತರ ಸುಲಿಗೆಗೂ ಒಳಗಾಗುವುದಕ್ಕಿಂತ ದೂರವಾಗಿದ್ದುಕೊಂಡು ಎದೆಯ ದೇಗುಲದಲ್ಲಿಯೇ ಈಶ್ವರನನ್ನು ಇನ್ನಷ್ಟು ಅತಿಶಯವಾದ ಭಾವಭಕ್ತಿಯಿಂದ ಪೂಜಿಸಬಾರದೇಕೆ?" (ಆತ್ಮಶ್ರೀಗಾಗಿ ನಿರಂಕುಶ ಮತಗಳಾಗಿ ಪುಟ–೮–೯) ಎಂದು ತಿಳುವಳಿಕೆ ನೀಡುವರು.

ಶಂಕರ ಭಟ್ಟರ ಮನೆಯಲ್ಲಿ ಕುವೆಂಪು ಬ್ರಾಹ್ಮಣರು ಕೂರುವ ಜಗಲಿಗೆ ಹೋಗುವಂತಿರಲಿಲ್ಲ. ಒಕ್ಕಲಿಗ ಜಾತಿಯವರಿಗೆ ಕುಳಿತುಕೊಳ್ಳಲು ಪ್ರತ್ಯೇಕ ಜಾಗವಿರುವುದು. ಬ್ರಾಹ್ಮಣ ಮಕ್ಕಳು ಒಕ್ಕಲಿಗರ ಮಕ್ಕಳೊಡನೆ ಸೇರುತ್ತಿರಲಿಲ್ಲ. ಶಂಕರ ಭಟ್ಟರು ಮತ್ತು ದೇವಂಗಿ ರಾಮಣ್ಣ ಗೌಡರು ಅಡಕೆ ವ್ಯಾಪಾರದ ದೆಸೆಯಿಂದ ಸ್ನೇಹಿತರು. ಆ ದಾಕ್ಷಿಣ್ಯಕ್ಕೆ ಒಳಗಾಗಿ ಇವರನ್ನೆಲ್ಲ ಹೋದಾಗ ಊಟಕ್ಕೆ ಒತ್ತಾಯಿಸಿದ್ದರು. ಇವರ ಜೊತೆ ಕಿಲಸ್ತರ (ಕ್ರೈಸ್ತ) ಡಿಸೋಜನು ಇದ್ದ. ಭಟ್ಟರು ಊಟದ ಹೊತ್ತು ಡಿಸೋಜನ ಬಳಿ ಯಾರ ಮಗನೆಂದು ವಿಚಾರಿಸಿದರು. ಆಗಿನ ಕಾಲದಲ್ಲಿ ಕ್ರೈಸ್ತರು ಮುಸ್ಲಿಂಮರು ಹೊಲೆಯರಿಗಿಂತ ಕೀಳು ಎಂಬ ಭಾವನೆ ಇತ್ತು.

ಯಾಕೆಂದರೆ ಅವರು ವಲಸೆ ಬಂದವರು ಎಂಬ ಕಾರಣಕ್ಕಾಗಿ. ಆಗ ದೇವಂಗಿ ವೆಂಕಟಯ್ಯನವರು "ಅವರು ಬಿದರಳ್ಳಿ ಸುಬ್ಬೇ ಗೌಡರ ಮಗ" ಎಂದು ಹೇಳಿ ನಡೆಯುವ ದುರಂತವನ್ನು ತಪ್ಪಿಸಿದರು. (ನೆ.ದೋ. ಪು.೧೦೨-೧೦೩) ಈ ರೀತಿ ಮಡಿವಂತಿಕೆ ಮೂಲಕ ಜಾತಿ ವ್ಯವಸ್ಥೆಯನ್ನು ಬಲಗೊಳಿಸುವ ಸಮಾಜವನ್ನು ದೋಷಿಸುವರು. ಕ್ರಾಂತಿಕಾರಿ ಸಮಾಜ ಚಿಂತನಕಾರರಾಗಿ ಜಾತೀಯತೆಯ ವಿರುದ್ಧ ಸಿಡಿದೆದ್ದ ಬರಹಗಾರ ಕುವೆಂಪು.

ನಮ್ಮ ಸಮಾಜ ಕಲುಷಿತವಾಗಲು ಜಾತಿ ಸಮಸ್ಯೆ ಮೂಲ ಕಾರಣವಾಗಿರುವುವು. ಐತ್ಯಕ್ಕೂ ಮೈತ್ರಿಗೂ ಸಾಧನವಾಗುವ ಚಿರಂತನ ಆಧ್ಯಾತ್ಮವನ್ನು ಈ ಅಜ್ಞಾನದಿಂದ ಕೂಡಿದ ಮತ ಆಕ್ರಮಿಸಿಕೊಂಡಿದೆ. ವರ್ಣ ಜಾತಿ ಪಂಥ ಕೋಮು ಪಂಗಡಗಳೆಂಬ ಬೇಧಭಾವಗಳು ಎಲ್ಲಿಯವರೆಗೆ ಇರುವುದೋ ಅಲ್ಲಿ ತನಕ ಸಮತಾ ಭಾವನೆ ಸಾಧ್ಯವಿಲ್ಲವೆನ್ನುವರು ಕುವೆಂಪು.

"ಗುಡಿ ಚರ್ಚು ಮಸಜೀದಿಗಳ ಬಿಟ್ಟು ಹೊರ ಬನ್ನಿ,
ಬಡತನವ ಬುಡಮುಟ್ಟ ಕೀಳ ಬನ್ನಿ"

ಗುಡಿ ಚರ್ಚು ಮಸೀದಿಗಳು ಹಿಂದೂ ಕ್ರೈಸ್ತ, ಮುಸ್ಲಿಂ ಎಂಬ ಬೇಧವನ್ನುಂಟು ಮಾಡುವುದು. ಅದನ್ನೆಲ್ಲ ಬಿಟ್ಟು ಏಕತಾ ಭಾವನೆಯಿಂದ ಬಡತನದ ವಿರುದ್ಧ ಹೋರಾಟ ಮಾಡಲು ಯುವಕರಿಗೆ ಕರೆ ನೀಡುವರು.

ಕುವೆಂಪು ವಿದ್ಯಾರ್ಥಿಯಾಗಿದ್ದಾಗ ಶೂದ್ರನಾಗಿ ಹುಟ್ಟಿ, ಪಡೆದ ಅನುಭವವನ್ನು 'ನೆನಪಿನ ದೋಣಿಯಲ್ಲಿ' ವಿವರಿಸುವರು. ಸಂಸ್ಕೃತ ಕಲಿಯಲು ಆಸಕ್ತರಾಗಿ ಸಂಸ್ಕೃತ ತರಗತಿಗೆ ಸೇರುವರು. ಆಗ "ಬ್ರಾಹ್ಮಣ ಸಹಪಾಠಿಗಳು 'ನೀನ್ಯಾಕೆ ಬಂದೆಯೋ ನಮ್ಮ ಜೊತೆ? ಶೂದ್ರರಿಗೆ ಯಾಕೋ ಸಂಸ್ಕೃತ? ನೀನೇನು ಮಂತ್ರಗಿಂತ್ರ ಹೇಳಿ ಪೌರೋಹಿತ್ಯ ಮಾಡ್ತಿಯೇನೋ? ಸಂಸ್ಕೃತ ನಿನಗೆ ಉಚ್ಚಾರ ಮಾಡೋಕೆ ಆಗೋದಿಲ್ಲ. ನೀನು ಅದನ್ನು ಕಲ್ತು ಬರೆದು ಪಾಸು ಮಾಡುವುದು ಹೌದೇನೋ?" (ನೆ.ದೋ.ಪು.೬೯) ಎಂದು ಅಣಕಿಸುತ್ತಿದ್ದರು. ಅಂತೆಯೇ ಸಂಸ್ಕೃತ ಗುರುಗಳು ಶೂದ್ರ ಮಕ್ಕಳಿಗೆ ಬಾಯಿ ತಿರುಗುವುದೇ ಇಲ್ಲ, ಇವು ಸಂಸ್ಕೃತ ಕಲಿಯುತ್ತವಂತೆ" (ನೆ.ದೋ.ಪು.೨೦) ಎಂದು ಹೀಯಾಳಿಸಿದರು. 'ಹಾಳು ಸಂಸ್ಕೃತ ಹಾಳಾಗ' ಎಂದು ಈ ಸಂಸ್ಕೃತ ತರಗತಿಗೆ ಹೋಗುವುದನ್ನು ನಿಲ್ಲಿಸಿದರು.

ಹಾನಿಕಾರಕವಾದ ಸಕಲ ಶಾಸ್ತ್ರಪುರಾಣಗಳನ್ನು ಹಾಗೂ ವ್ಯವಸ್ಥೆಗಳನ್ನು ಬಹಿಷ್ಕರಿಸಿಸುವಂತೆ ತರುಣರಿಗೆ ಕರೆ ನೀಡುವರು. ಬದುಕನ್ನು ರೂಪಿಸಲು ಶಾಸ್ತ್ರಗಳು ಯಾವುದೇ ರೀತಿಯ ಉಪಯೋಗವಿಲ್ಲ. ಇಂತಹ ಅನಗತ್ಯ ಚೌಕಟ್ಟಿನ ಒಳಗೆ ಬಂಧಿಗಳಾಗುವುದಕ್ಕಿಂತ ಮುಕ್ತರಾಗುವುದು ಅಗತ್ಯವೆನ್ನುವರು.

ಪವಿತ್ರ ಗ್ರಂಥಗಳ, ಶಾಸ್ತ್ರಗಳ, ಪುರಾಣಗಳೊಳಗಿರುವ ವೈಜ್ಞಾನಿಕ ವೈಚಾರಿಕವಲ್ಲದ ಮೌಢ್ಯಗಳನ್ನು ಕಿತ್ತೊಗೆಯಬೇಕೆನ್ನುವರು. ಮಠಗಳು ಜಾತಿ ವಿನಾಶಕ್ಕೆ ಕಂಕಣಬದ್ಧವಾಗಿಲ್ಲ. ಅವು ವ್ಯವಸ್ಥೆಯನ್ನು ಇನ್ನಷ್ಟು ಜಾತಿ ಮತದಿಂದ ಸಂಕುಚಿತಗೊಳಿಸಿರುವುವು. ಮತಗಳ ವೈಫಲ್ಯಗಳನ್ನು ಗಮನದಲ್ಲಿರಿಸಿಕೊಂಡು ಕುವೆಂಪು ಜಗತ್ತಿಗೆ ವಿಶ್ವ ಮಾನವ ಸಂದೇಶವನ್ನು ಸಾರಿದರು. ನಾಮರೂಪಗಳನ್ನು ದಾಟಿ, ಎಲ್ಲ ಮತಗಳ ಹೊಟ್ಟನ್ನು ತೂರಿ, ಎಲ್ಲ ತತ್ತ್ವಗಳನ್ನು ಮೀರಿ ನಿರ್ದಿಗಂತದ ಕಡೆಗೆ ಏರಿ, ಎಲ್ಲಿಯೂ ನಿಲ್ಲದೆ, ಮನೆಯನ್ನು ಕಟ್ಟದೆ, ಕೊನೆಯನ್ನು ಮುಟ್ಟದೆ, ಅನಂತವಾಗುವಂತೆ ವಿಶ್ವಮಾನವ ಗೀತೆಯಲ್ಲಿ ಕರೆ ನೀಡುವರು. ಮತ ವರ್ಣಾಶ್ರಮ ಜಾತಿ ಪದ್ಧತಿಗಳನ್ನು ನಿರ್ಮೂಲ ಮಾಡಿ, ಮನುಷ್ಯ ಜಾತಿ ತಾನೊಂದೆ ವಲಂ' ಎಂಬ ತತ್ತ್ವವನ್ನು ಸ್ವೀಕರಿಸಬೇಕೆನ್ನುವರು. ಮನುಷ್ಯ ಸರ್ವಬಂಧನಗಳಿಂದ ಮುಕ್ತನಾಗಬೇಕು. ನಂತರ ಸಮಾನತೆ, ಸ್ವಾತಂತ್ರ್ಯ, ಭ್ರಾತೃತ್ವ ಮತ್ತು ವಿಶ್ವಪ್ರೇಮದ ವಾತಾವರಣದಲ್ಲಿ ತನ್ನ ಉದ್ಧಾರವನ್ನು ಕಂಡುಕೊಳ್ಳಬೇಕೆಂದರು.

"ನನ್ನ ಚೇತನ ಜಾತಿಗೀತಿಗಳನ್ನೆಲ್ಲ ಮೀರಿ ನಿಂತಿತ್ತು, ಸ್ವಾಮಿ ವಿವೇಕಾನಂದರ ಕೃಪೆಯಿಂದ ನನ್ನ ಆಪ್ತ ಸ್ನೇಹಿತರಲ್ಲಿ ಬ್ರಾಹ್ಮಣರಿದ್ದರು, ವೈಶ್ಯರಿದ್ದರು, ಮುಸಲ್ಮಾನರಿದ್ದರು, ಕ್ರೈಸ್ತರಿದ್ದರು, ಶೂದ್ರರ ಬೇರೆಬೇರೆ ಪಂಗಡಗಳವರೂ ಇದ್ದರು. ನನಗೆ ಜಾತೀಯತಾ ದೃಷ್ಟಿಯಿಂದ ನೋಡುವ ಮನೋಧರ್ಮವೆ ಲುಪ್ತವಾಗಿತ್ತು. ಭಾವನೆಯಲ್ಲಿ ಮಾತ್ರವಲ್ಲ, ನಿಜವರ್ತನೆಯಲ್ಲಿಯೂ. ಆ ಮತದವರು ಈ ಮತದವರು ಎಂಬ ಭೇದವಿಲ್ಲದೆ ಎಲ್ಲರೊಡನೆಯೂ ಕುಳಿತು ಊಟ ತಿಂಡಿ ಮಾಡುತ್ತಿದ್ದೆ". (ನೆ.ದೋ.ಪು.೧೯೪) ಕುವೆಂಪು ಚೇತನ ಜಾತಿಗೀತಿಯನ್ನು ಮೀರಿ ಅನಿಕೇತನ ಸ್ಥಿತಿಯನ್ನು ಮುಟ್ಟಲು ಸ್ವಾಮಿ ವಿವೇಕಾನಂದರ ಆಧ್ಯಾತ್ಮಿಕ ಶಕ್ತಿ ಕಾರಣವಾಯಿತು. "ಬೆಸ್ತರಿಗೆ ವೇದಾಂತ ಬೋಧಿಸಿದರೆ, ಅವನು ನಿನ್ನಂತೆಯೇ ನಾನು. ನಾನು ಬೆಸ್ತ, ನೀನು ತತ್ತ್ವಜ್ಞಾನಿ. ಆದರೆ ನಿನ್ನಲ್ಲಿರುವಂತೆಯೇ, ನನ್ನಲ್ಲಿಯೂ ದೇವರು ಇರುವನು" (ಸ್ವಾವಿ. ಕೃತಿ ಶ್ರೇಣಿ, ಸಂಪುಟ-೫, ಪುಟ-೧೩೭) ಇದು ವಿವೇಕಾನಂದರ ಆಧ್ಯಾತ್ಮಿಕ ಚಿಂತನೆ.

ಜಾತಿ ನಾಶವಾಗಬೇಕಾದರೆ ಚಂಡಾಲನನ್ನು ಬ್ರಾಹ್ಮಣ ಎತ್ತರಕ್ಕೇರಿಸಬೇಕೆನ್ನುವರು. ಹಿಂದೆ ಕೆಲವು ಶಾಸ್ತ್ರಗಳು "ಶೂದ್ರ ವೇದವನ್ನು ಕೇಳಿದರೆ ಅವನ ಕಿವಿಗೆ ಕಾದ ಸೀಸವನ್ನು ಹಾಕಿರಿ. ಅವನು ಒಂದು ಶ್ಲೋಕವನ್ನು ಉಚ್ಚರಿಸಿದರೆ ನಾಲಗೆಯನ್ನು ಕತ್ತರಿಸಿ, ಬ್ರಾಹ್ಮಣನನ್ನು "ಎಲೈ ಬ್ರಾಹ್ಮಣನೇ" ಎಂದರೆ ಅವನ ನಾಲಗೆಯನ್ನು ಕತ್ತರಿಸಿ" ಎನ್ನುತ್ತಿದ್ದವು (ಸ್ವಾ. ವಿ. ಕೃತಿಶ್ರೇಣಿ, ಸಂಪುಟ–೫, ಪುಟ–೧೯೩) ಇದೊಂದು ನಿಸ್ಸಂದೇಹವಾಗಿ ಅನಾಗರಿಕ ರಾಕ್ಷಸೀ ಕೃತವೆನ್ನುವರು ವಿವೇಕಾನಂದರು. ಒಮ್ಮತವೇ ಸಮಾಜದ ಶಕ್ತಿ ರಹಸ್ಯ ಅದಕ್ಕಾಗಿ ಈ ರೀತಿಯ ಪಕ್ಷಬೇಧವನ್ನು ಜಾತಿಬೇಧವನ್ನು ಮರೆತು ಏಕಚಿತ್ತದಿಂದ ಎಲ್ಲರೊಳಗಿರುವ ಪರಮಾತ್ಮನನ್ನು ಗೌರವಿಸುವುದು ಒಳಿತು.

ವಿವೇಕಾನಂದರಿಗೆ ಆರ್ಷ ಕಾಲದ ಬ್ರಾಹ್ಮಣ್ಯದ ಬಗ್ಗೆ ಅಪಾರವಾದ ಗೌರವವಿದೆ. ಅದನ್ನವರು ಶ್ರೀರಾಮಕೃಷ್ಣ ಪರಮಹಂಸರಲ್ಲಿ ಕಂಡರು. ಲೌಕಿಕಾಸಕ್ತಿಗಳಿಗೆ, ದುರಾಚಾರಗಳಿಗೆ ದಾಸರಾಗಿರುವ, ಆಧ್ಯಾತ್ಮ ಸಾಧನೆಯನ್ನು ಸಂಪೂರ್ಣವಾಗಿ ತೊರೆದಿರುವ ಜನರಲ್ಲಿ ಪವಿತ್ರ ಬ್ರಾಹ್ಮಣ್ಯವುಳಿದಿದೆಯೇ ಎಂದು ಪ್ರಶ್ನಿಸುವರು. ವಿವೇಕಾನಂದರ ಪ್ರಕಾರ ಯಾರು ಧನಲಾಭವನ್ನು ನಿರೀಕ್ಷಿಸದೆ ಆಧ್ಯಾತ್ಮವನ್ನು ಪ್ರಚಾರ ಮಾಡುವನೋ ಅವನೇ ಬ್ರಾಹ್ಮಣವೆನ್ನುವರು. ಬಿದ್ದವರನ್ನು ಮೇಲೆತ್ತಿ ಸಮಾನತಾ ಭಾವನೆಯಿಂದ ಸರ್ವರನ್ನು ಕಂಡುಕೊಳ್ಳುವುದರಿಂದ ಬ್ರಾಹ್ಮಣ್ಯ ಉಳಿದೆನ್ನುವರು. ದೇಶವು ಆಗ ವಿದೇಶಿಯರ ಪಾಲಾಗುತ್ತಿರಲಿಲ್ಲವೆಂಬ ಕಟುಸತ್ಯವನ್ನು ಹೇಳುವರು. ಅನಿಷ್ಟದ 'ಬ್ರಾಹ್ಮಣಿಕೆ'ಯೇ ನಾಡಿನ ಸರ್ವರೋಗಗಳಿಗೆ ಮೂಲವೆನ್ನುವರು. ಒಂದು ಕಾಲಕ್ಕೆ ಬ್ರಾಹ್ಮಣವೆಂದರೆ ಮೌಲ್ಯಾಧಾರಿತ ಪವಿತ್ರ ಸಂಪ್ರದಾಯವಾಗಿತ್ತು. ಇವತ್ತು ಜಾತಿಯ ಹೆಸರಾಗಿ ಉಳಿದಿದೆ.

ಹುಟ್ಟುವಾಗ ಪ್ರತಿಯೊಂದು ಮಗುವು ವಿಶ್ವಮಾನವನಾಗಿರುವುದು. ಹುಟ್ಟಿದ ಮಗುವನ್ನು ನಾವು ದೇಶ, ಭಾಷೆ, ಮತ, ಜಾತಿ, ಜನಾಂಗ, ವರ್ಣವೆಂಬ ಉಪಾಧಿಗಳಿಂದ ಬಂಧಿಸುವೆವು. ಅವೆಲ್ಲವುಗಳಿಂದ ಪಾರು ಮಾಡಿ ಮಗುವನ್ನು ಬುದ್ಧನನ್ನಾಗಿ ಅಂದರೆ 'ವಿಶ್ವಮಾನವ'ನನ್ನಾಗಿ ಪರಿವರ್ತಿಸುವುದೇ ನಮ್ಮ ವಿದ್ಯೆಯ, ನಾಗರಿಕತೆಯ, ಸಂಸ್ಕೃತಿಗಳ ಆದ್ಯ ಕರ್ತವ್ಯವಾಗಬೇಕು.

ಕುವೆಂಪು ಅವರ ಸಪ್ತಸೂತ್ರಗಳು ಮತದ ಬಿಡುಗಡೆಗೆ ಹಿಡಿದ ಕನ್ನಡಿ:

೧) 'ಮನುಷ್ಯ ಜಾತಿ ತಾನೊಂದೆ ವಲಂ' ಎಂಬುದನ್ನು ನಿರುಪಾಧಿಕವಾಗಿ ಸ್ವೀಕರಿಸಬೇಕು.

೨) ವರ್ಣಾಶ್ರಮವನ್ನು ತಿದ್ದುವುದಲ್ಲ, ಅದನ್ನು ಸಂಪೂರ್ಣವಾಗಿ ತೊಲಗಿಸಬೇಕು.

೩) ಎಲ್ಲ ದೇಶಗಳಲ್ಲಿ ಮತ್ತು ಎಲ್ಲ ಮತಗಳಲ್ಲಿರುವ ಜಾತಿ ಪದ್ಧತಿಯನ್ನು ಸಂಪೂರ್ಣವಾಗಿ ನಿರಾಕರಿಸಿ ವಿನಾಶಗೊಳಿಸಬೇಕು.

೪) 'ಮತ' ತೊಲಗಿ 'ಆಧ್ಯಾತ್ಮ' ಮಾತ್ರ ವೈಜ್ಞಾನಿಕ ತತ್ವವಾಗಿ ಮಾನ್ಯತೆ ಪಡೆಯಬೇಕು.

೫) ಮತ 'ಮನುಜಮತ'ವಾಗಬೇಕು, ಪಥ 'ವಿಶ್ವಪಥ'ವಾಗಬೇಕು. ಮನುಷ್ಯ 'ವಿಶ್ವಮಾನವ'ನಾಗಬೇಕು.

೬) ಮತ ಗುಂಪುಕಟ್ಟುವ ವಿಷಯವಾಗಬಾರದು. ಯಾರೂ ಯಾವ ಒಂದು ಮತಕ್ಕೂ ಸೇರದೆ, ಪ್ರತಿಯೊಬ್ಬನೂ ತಾನು ಕಂಡುಕೊಳ್ಳುವ 'ತನ್ನ' ಮತಕ್ಕೆ ಮಾತ್ರ ಸೇರಬೇಕು. ಅಂದರೆ ಜಗತ್ತಿನಲ್ಲಿ ಎಷ್ಟು ವ್ಯಕ್ತಿಗಳಿದ್ದಾರೋ ಅಷ್ಟೇ ಸಂಖ್ಯೆಯ ಮತಗಳಿರುವಂತಾಗುತ್ತದೆ. ಯಾರೊಬ್ಬರೂ ಇನ್ನೊಬ್ಬರ ಮತಕ್ಕೆ ಸೇರಿ ಗುಂಪು ಕಟ್ಟಿ ಕಚ್ಚಾಡುವಂತಾಗಬಾರದು.

೭) ಯಾವ ಒಂದು ಗ್ರಂಥವೂ 'ಏಕೈಕ ಪರಮಪೂಜ್ಯ' ಧರ್ಮಗ್ರಂಥವಾಗಬಾರದು. ಪ್ರತಿಯೊಬ್ಬ ವ್ಯಕ್ತಿಯೂ ತನಗೆ ಸಾಧ್ಯವಾದವುಗಳನ್ನೆಲ್ಲ ಓದಿ ತಿಳಿದು ತನ್ನ ದರ್ಶನವನ್ನು ತಾನೇ ನಿರ್ಣಯಿಸಿ ಕಟ್ಟಿಕೊಳ್ಳಬೇಕು (ಸ.ಗ.ಸಂ.೨ ಪು.೮೯೧–೮೯೩).

ಈ ಸಂದೇಶವು ವರ್ತಮಾನದ ಹಾಗೂ ನಾಳಿನ ಜಗತ್ತಿಗೆ ಮಾರ್ಗದರ್ಶಕ ಸೂತ್ರವಾಗಿದೆ.

ಕುವೆಂಪು ಅವರ ಈ ವಿಶ್ವಮಾನವ ಸಂದೇಶ, ಅವರ ವೈಚಾರಿಕತೆಯ ಪರಿಣತಿಯನ್ನು ಬಿಂಬಿಸುತ್ತದೆ. ಅಲ್ಲದೆ ಅವರ ಸಾಹಿತ್ಯ ನಿರ್ಮಿತಿಯ ಹಿಂದಿರುವ ಪೂರ್ಣದೃಷ್ಟಿಯನ್ನು ಪ್ರತಿನಿಧಿಸುತ್ತದೆ. ಹಾಗೂ ಈ ಸಂದೇಶವು ವರ್ತಮಾನದ ಹಾಗೂ ನಾಳಿನ ಜಗತ್ತಿಗೆ ಮಾರ್ಗದರ್ಶಕ ಮಹಾಸೂತ್ರಗಳಾಗಿವೆ.

೩.೨.೨. ಪ್ರಜ್ಞೆಯ ಅಂಧತ್ವದ ಬಗ್ಗೆ ತಿರಸ್ಕಾರ

ಸ್ವತಂತ್ರ ದೇಶದ ಶ್ರೀಸಾಮಾನ್ಯನು ಮತಾಚಾರಗಳಿಂದ ಮುಕ್ತನಾದರೆ ಸಾಲದು. ಆತ ತನ್ನಲ್ಲಿ ಮನೆಮಾಡಿರುವ ಮೌಢ್ಯದಿಂದಲೂ ಮುಕ್ತನಾಗಬೇಕು. ವೈಜ್ಞಾನಿಕ ದೃಷ್ಟಿಯನನು ಬೆಳೆಸಿಕೊಳ್ಳಬೇಕು. ಇಂತಹ ಬುದ್ಧಿವಂತ ಶ್ರಮಜೀವಿ ಪ್ರಜೆ ತಾನು ಉದ್ಧಾರವಾಗಿ ದೇಶವನ್ನು ಬೆಳೆಸಲು ಸಾಧ್ಯವೆನ್ನುತ್ತಾರೆ ಕುವೆಂಪು. "ಭಟ್ಟರಿಂದ ಬೂದಿ ತರಿಸುವುದು, ಮಠಗಳಿಂದ ಮಂತ್ರದ ತಾಯಿತ ತರಿಸಿ ಕಟ್ಟುವುದು, ಕೋಳಿ ಸುಳಿದು ಬಿಡುವುದು, ಆ ದೇವರಿಗೆ ಈ ದೇವರಿಗೆ ಹೇಳಿಕೊಂಡು ಬೆಳ್ಳಿನಾಣ್ಯ ಕಟ್ಟುವುದು" (ನೆ.ದೋ.೧೦೫) ಇಂತಹ ಉಪಯೋಗ ರಹಿತವಾದ ಆಚರಣೆಗಳನ್ನು ವಿರೋಧಿಸುತ್ತಿದ್ದರು.

ಕುವೆಂಪು ಅವರ ತಾಯಿ ನಿಧನರಾದ ಸಂದರ್ಭ, ಆಗ ಕುವೆಂಪು ಅವರ ಚೇತನ ತಾತ್ತ್ವಿಕ ಚಿಂತನೆಯಿಂದ ಅತೀತವಾಗಲು ಪ್ರಯತ್ನಿಸುತ್ತಿತ್ತು. ಅವರಿಗೆ ಸತ್ತ ನಂತರ ನಡೆಯುವ ತಿಥಿಗಿತಿಗಳ ಬಗ್ಗೆ ನಂಬಿಕೆ ಇರಲಿಲ್ಲ. ನಾವು ಮಾಡುವ ಯಾವ ಕ್ರಿಯೆಗಳು ಸತ್ತ ಜೀವಕ್ಕೆ ಸಲ್ಲುವುದಿಲ್ಲ. ಅದರ ಬದಲು ಆ ಜೀವಾತ್ಮದ ಸದ್ಗತಿಗಾಗಿ ಭಗವಂತನನ್ನು ಭಕ್ತಿ ಶ್ರದ್ಧೆಗಳಿಂದ ಪ್ರಾರ್ಥಿಸುವುದು ಬುದ್ಧಿಸಮ್ಮತವಾದ ಮಾರ್ಗವೆನ್ನುತ್ತಾರೆ. ತಿಥಿಯ ವಿಧಿ ವಿಧಾನಗಳ ಬಗ್ಗೆ ಕುವೆಂಪು ಅವರಿಗೆ ಅಸಮಾಧಾನವಿತ್ತು. "ತಾಯಿ ಪ್ರೇತವಾಗಿ ಇತರ ಪ್ರೇತಗಳೊಡನೆ ಅಲ್ಲಿಗೆ ಬರುತ್ತಾರೆ". (ನೆ.ದೋ.೪೧೩) ಎಂಬ ನಂಬಿಕೆಯ ಬಗ್ಗೆ ಅಸಹ್ಯವಿತ್ತು. ಪರಮಾತ್ಮನೆಡೆಗೆ ಹೋಗಿರುವ ಅವರ ಚೇತನವನ್ನು ಭೂತ ಪ್ರೇತಗಳ ಜೊತೆ ಸೇರಿಸುವುದು ಅವರ ಪ್ರಕಾರ ಅವಮಾನಕರ, ಅಪಚಾರವೆನ್ನುವರು. ಮಿತ್ರರ ಒತ್ತಾಯದ ಮೇರೆಗೆ ಆತ್ಮಸಾಕ್ಷಿಗೆ ವಿರೋಧವಾಗಿ ತಿಥಿಯ ಪೂಜೆಗೆ ಸಿದ್ಧರಾಗುವರು. ಆದರೆ ಶಾಸ್ತ್ರದ ಹಿನ್ನೆಲೆಯಲ್ಲಿ ತಿಥಿಯ ಅಂಗವಾಗಿ ಬಡಿಸಲಾಗಿರುವ ಹೆಂಡ ಮಾಂಸಗಳನ್ನೆಲ್ಲ ತೆಗೆದು ಬಿಡುವಂತೆ ಒತ್ತಾಯಿಸುವರು. ಅದರ ಬದಲಿಗೆ ಒಂದು ಭಗವದ್ಗೀತೆಯ ಪ್ರತಿಯನ್ನೂ, ಸ್ವಾಮಿ ವಿವೇಕಾನಂದ ಮತ್ತು ಶ್ರೀರಾಮಕೃಷ್ಣಪರಮಹಂಸರ ಚಿತ್ರಪಟವನ್ನು ಆ ಮಣೆಯ ಮೇಲೆ ಇಟ್ಟರು. ನಂತರ ಹೂವು ಮುಡಿಸಿ, ಮಂತ್ರಗಳನ್ನು, ಶ್ಲೋಕಗಳನ್ನು ಮನದಲ್ಲಿಯೇ ಹೇಳಿಕೊಳ್ಳುತ್ತಾ ಮಾತೆಗೆ ಶಾಂತಿ ಕೋರಿ ಧೂಪ ಹಾಕುವರು. ಅರ್ಥವಿಲ್ಲದ ಆಚರಣೆಗಳ ಬಗ್ಗೆ ಕುವೆಂಪು ಅವರಲ್ಲಿ ತಿರಸ್ಕಾರವಿತ್ತು. ಅಲ್ಲದೆ ಅದನ್ನು ಮೆಟ್ಟಿ ನಿಲ್ಲುವ ಛಲವಿತ್ತು.

ಪ್ರಕೃತಿಯಲ್ಲಿ ಆಗುವ ವಿಕೋಪಗಳಿಗೆ ಪೂಜೆ ಮಾಡುವುದರ ಮೂಲಕ ಪರಿಹಾರ ಕಂಡುಕೊಳ್ಳಲು ಸಾಧ್ಯವೇ ಎಂದು ಪ್ರಶ್ನಿಸುತ್ತಾರೆ ಕುವೆಂಪು. ಸಿಡಿಲು ಬಡಿದಾಗ ಪುರೋಹಿತರು ಪರಿಹಾರ ಶಾಂತಿ ಮಾಡಲು ಹೇಳಿದ ಪ್ರಸಂಗವನ್ನು ನೆನಪಿಸುವರು. ಅದಕ್ಕಾಗಿ ಬ್ರಾಹ್ಮಣರ ಕೈಯಲ್ಲಿ ಪೂಜೆ ಮಾಡಿಸಿ, ದಾನದಕ್ಷಿಣೆ ಮಾಡಬೇಕೆನ್ನುತ್ತಾರೆ. ಸಿಡಿಲಿನಂತಹ ಪ್ರಕೃತಿ ಸಹಜವಾದ ವರ್ತನೆಗಳಿಗೆ ಇದು ಪರಿಹಾರವೇ ಎಂದು ಕುವೆಂಪು ಪ್ರಶ್ನಿಸುವರು. ಸಿಡಿಲಿನಿಂದ ಹಾನಿಯಾದ ಮರಗಳಿಗೆ ಬದಲಾಗಿ ತೋಟದಲ್ಲಿ ಬೇರೆ ಸಸಿಗಳನ್ನು ನೆಟ್ಟು ತೋಟ ಬೆಳೆಸುವುದರಿಂದ ಆದ ನಷ್ಟವನ್ನು ಭರಿಸಲು ಸಾಧ್ಯ. ಅದು ಬಿಟ್ಟು ಮೌಢ್ಯತೆಯ ಹಿಂದೆ ಬೀಳುವುದು ಎಷ್ಟರ ಮಟ್ಟಿಗೆ ಸರಿ. "ಈ ಪುರೋಹಿತ ವರ್ಗ ಎಲ್ಲ ದೇಶಗಳಲ್ಲಿಯೂ, ಎಲ್ಲ ಮತಗಳಲ್ಲಿಯೂ ಇದೇ ಕೆಲಸ ಮಾಡುತ್ತಾ ಬಂದಿದೆ. (ನೆ.ದೋ.೭೬) ತಮ್ಮ ಹೊಟ್ಟೆ ಪಾಡಿಗಾಗಿ ಇಂತಹ ಮೂಢನಂಬಿಕೆಗಳನ್ನು ಸೃಷ್ಟಿಸಿದರು. ಅಲ್ಲದೆ ಅದಕ್ಕೆ ಭಾವಮಯವಾದ ಪೌರಾಣಿಕ ಕಥಾಧಾರಗಳನ್ನು ಕಲ್ಪಿಸಿಕೊಂಡರು. ಹೀಗೆ ಶೂದ್ರಾದಿಗಳ ಅಜ್ಞಾನವನ್ನೇ ತಮ್ಮ ಆದಾಯದ ಬಂಡವಾಳವನ್ನಾಗಿ ಮಾಡಿಕೊಂಡರು. "ಮಠ, ಗುರು, ಪೂಜೆ, ಹೋಮ, ಯಜ್ಞ, ಸತ್ಯನಾರಾಯಣ ವ್ರತ ಇತ್ಯಾದಿ ಭದ್ರಕೋಟೆಗಳಲ್ಲಿ ತಮ್ಮ ರಕ್ಷಾಸ್ಥಾನಗಳನ್ನು ರಚಿಸಿಕೊಂಡು ಮಂಕು ಕುರಿಗಳು–ಶೂದ್ರರು–ಆ ಕಟುಕರ ಕೈಯ ಹುಸಿ ಹಸುರಿಗೆ ಬ್ಯಾಗುಡುತ್ತಾ ನುಗ್ಗುತ್ತಿವೆ" (ಪು. ೭೬) ಮುಗ್ಧ ಜನರು ಇವತ್ತಿಗೂ ಈ ರೀತಿಯ ಅಂಧತ್ವಕ್ಕೆ ಬಲಿಯಾಗುತ್ತಿರುವರು.

ಒಮ್ಮೆ ಚಾಮುಂಡಿ ಬೆಟ್ಟಕ್ಕೆ ಹೋದಾಗ ಕುವೆಂಪು ಪೂಜೆಗೆ ನಿಲ್ಲದೆ ಹೊರಗಡೆ ಕಡಲೆಪುರಿ ತಿಂದುಕೊಂಡಿದ್ದರು. ಕಡಲೆ ಜೊತೆ ಕಲ್ಲು ಸಿಕ್ಕಿಕೊಂಡು ಹಲ್ಲುನೋವು ಕಾಣಿಸಿಕೊಂಡಿತು. ಮಿತ್ರರು ಚಾಮುಂಡಿ ದರ್ಶನಕ್ಕೆ ಬಾರದಿರುವುದಕ್ಕೆ ತಕ್ಕ ಶಿಕ್ಷೆಯಾಯಿತ್ತೆಂದರು. ವಿಚಾರಮತಿ ಇಲ್ಲದವನು ಇದನ್ನು ನಂಬುತ್ತಿದ್ದ. ಚಾಮುಂಡೇಶ್ವರಿಗೆ ಸಿಟ್ಟು ಬಂದು ಈ ರೀತಿಯಾಯಿತ್ತೆನ್ನುತ್ತಿದ್ದರು. "ಹೀಗೆ ಭಕ್ತಿ ಪ್ರಚೋದನೆಗೆ ಶಿಕ್ಷೆಯ ರೂಪದ ಪ್ರತೀಕಾರವನ್ನು ದೇವರಿಗೆ ಆರೋಪಿಸುವುದು ಸಾಮಾನ್ಯ ರೂಢಿಯ ಮತಾಚಾರದ ವಿಧಾನ" (ನೆ.ದೋ.೭೭೨) ಈ ವಿಧವಾದ ಅವಿಚಾರದ ಭಯವನ್ನೆ ಆಸ್ತಿಕತೆಯೆಂದೂ ಭಕ್ತಿಯೆಂದೂ ಕರೆಯುವುದು ಮತಮೂಢ ಪುರೋಹಿತ ವರ್ಗದವರ ದಂಡೋಪಾಯ. ಹೀಗೆ ಅಜ್ಞಾನಿಗಳ ಹೆದರಿಕೆಯೇ ಅವರಿಗೆ ತಮ್ಮ ಹೊಟ್ಟೆ ಹೊರೆದುಕೊಳ್ಳುವ ಬಂಡವಾಳ (ನೆ.ದೋ. ಪುಟ–೭೭೨). ಈಗಲೂ ಜನ ಈ ರೀತಿಯ ಅಂಧತ್ವದ ಹಿಂದೆ ಬಲಿ

ಬಿದ್ದು ಅಜ್ಞಾನಿಗಳಂತೆ ವರ್ತಿಸುವರು. ಜನ ಈ ತರದ ನಂಬಿಕೆಗಳನ್ನು ಭಕ್ತಿಯಿಂದ ಆಚರಿಸದೆ ಭಯದಿಂದ ಆತಂಕದಿಂದ ನಂಬುವರು.

ಕುವೆಂಪು ಅವರ ಅವ್ವನ ಚಿನ್ನ ಬೆಳ್ಳಿಯ ಆಭರಣಗಳು ತಂಗಿಯರಿಬ್ಬರ ನಂತರ ಅನ್ಯರ ಪಾಲಾಯಿತು. ಆದರೆ ಜನರ ಮೌಢ್ಯ, ಅವುಗಳ ಹಿಂದೆ ಈ ರೀತಿ ಕೆಲಸ ಮಾಡಿತ್ತು. ಮೌಢ್ಯದ ಮೂಲಕ ನ್ಯಾಯ ಪಡೆಯುವ ಮತ್ತು ಶಿಕ್ಷೆ ವಿಧಿಸುವ ಕಾರ್ಯ ನಡೆಯುತ್ತಿತ್ತು. ಆಭರಣವನ್ನು ಉಪಯೋಗಿಸುವವರಿಗೆ ಕೇಡಾಗುವುದೆಂಬ ಭಯವನ್ನು ಹುಟ್ಟುಹಾಕಿದರು. ತಾಯಿ ತಂಗಿಯರ ಆಭರಣ ತೊಟ್ಟುಕೊಂಡವರಿಗೆ ಮೈಯಲ್ಲಿ 'ದೆಯ್ಯ' ಮೆಟ್ಟಿಕೊಳ್ಳುತ್ತದೆಂಬ ನಂಬಿಕೆ ಬಲವಾಯಿತು. ಆದುದರಿಂದ ಮನೆಯವರಲ್ಲದವರು ಸತ್ತವರ ಆಭರಣವನ್ನು ತೊಟ್ಟುಕೊಳ್ಳುತ್ತಿರಲಿಲ್ಲ. ಒಂದು ವೇಳೆ ತೊಟ್ಟುಕೊಂಡರೆ ಏನಾದರೂ ರೋಗರುಜಿನವೋ ಮೈಮೇಲೆ ಬರುವುದಂತೆ. ನಿತ್ಯ ಬರುವ ರೋಗವಾದರೂ ಬಂದ ರೋಗವನ್ನು ಆ ಒಡವೆ ತೊಟ್ಟು ಬಂತೆಂದು ಅದರ ಮೇಲೆ ಗೂಬೆ ಕೂರಿಸುವ ಕೆಲಸ ಮಾಡುವರು (ನೆ.ದೋ. ಪುಟ–೮೩೧). ಜನರಲ್ಲಿ ಚಿಂತನೆಯ ದೌರ್ಬಲ್ಯ ಕಾಣಿಸಿಕೊಂಡಾಗ ಈ ರೀತಿಯ ದುರಂತವನ್ನು ಕಾಣುವೆವು. ಮನೋಬಲ ಬೆಳೆಯಬೇಕು ಆಗ ಮಾತ್ರ ಈ ರೀತಿಯ ಮೌಢ್ಯಗಳಿಂದ ಹೊರಬರಲು ಸಾಧ್ಯ.

ಶ್ರೀರಾಮಕೃಷ್ಣ ಸಂಘದ ಸಾಧುಗಳಲ್ಲಿಯೂ ಅಂತರ್ವಲಯದ ಭಕ್ತರಲ್ಲಿಯೂ ಒಂದು ಮೌಢ್ಯ ಸದೃಶವಾದ ನಂಬಿಕೆ ಆಚರಣೆಯಲ್ಲಿತ್ತು. ರಾಮಕೃಷ್ಣರು ಗುರುವಾರದ ಅಪರಾಹ್ನದ ಒಂದು ಅವಧಿಯನ್ನು ಕೆಟ್ಟಗಳಿಗೆ ಎಂದು ನಂಬಿದರಂತೆ. ಅವರು ಆ ಹೊತ್ತು ಯಾವ ಕೆಲಸವನ್ನು ಕೈಗೊಳ್ಳುತ್ತಿರಲಿಲ್ಲ, ಎಲ್ಲೂ ಹೋಗುತ್ತಿರಲಿಲ್ಲ. ಗುರುಗಳ ಈ ನಂಬಿಕೆಯನ್ನು ಆಶ್ರಮದವರೆಲ್ಲ ತಪ್ಪದೆ ಅನುಸರಿಸುತ್ತಿದ್ದರು. ಆದರೆ ಕುವೆಂಪು ಇದನ್ನು ನಂಬಲಿಲ್ಲ. ರಾಮಕೃಷ್ಣರು ಈ ನಂಬಿಕೆ ಇಟ್ಟುಕೊಂಡಿದ್ದರು ಎನ್ನುವುದಕ್ಕೆ ಯಾವುದೇ ರೀತಿಯ ದಾಖಲಾತಿಗಳಿರಲಿಲ್ಲ. ಒಂದು ವೇಳೆ ಅವರು ನಂಬಿಕೆಯನ್ನು ಇಟ್ಟುಕೊಂಡಿದ್ದರೂ ಕುವೆಂಪು ಈ ರೀತಿಯ ಮೌಢ್ಯವನ್ನು ನಂಬುತ್ತಿರಲಿಲ್ಲ (ನೆ.ದೋ. ಪುಟ–೮೫೬). ಪ್ರಕೃತಿಯನ್ನು, ಪ್ರಾಣಿಪಕ್ಷಿಗಳನ್ನು, ಸಮಯವನ್ನು ನಮ್ಮ ಆಟದ ದಳವಾಗಿ ಬಳಸಿ ಅವುಗಳಲ್ಲಿ ಶುದ್ಧ–ಅಶುದ್ಧ, ಮೇಲು–ಕೀಳು, ಲಾಭ–ನಷ್ಟವೆಂದು ಹಣೆಪಟ್ಟಿ ಹಚ್ಚುವುದು ಸರಿಯಲ್ಲ.

ಕಲ್ಕತ್ತೆಯಲ್ಲಿ ಜನ ಭಕ್ತಿಯಿಂದ ಆ ಗಂಗಾ ಸ್ನಾನ ಮಾಡಿದರೆ ತಮ್ಮ ಪಾಪಗಳು ಪರಿಹಾರವಾಗುವುದನ್ನು ನಂಬುವರು. ಒಮ್ಮೆ ಕುವೆಂಪು ಇದೇ ಗಂಗೆಯಲ್ಲಿ ದೋಣಿವಿಹಾರ ಮಾಡುತ್ತಿರುವಾಗ ದನದ ಹೆಣ ತೇಲುತ್ತಿರುವುದನ್ನು ಕಂಡರು. ಆ ಹೆಣವನ್ನು ಕಾಗೆ, ಹದ್ದುಗಳು ಕಿತ್ತು ತಿನ್ನುತ್ತಿದ್ದವು. ಇಂತಹ ಕಲುಷಿತವಾದ ಗಂಗೆಯಲ್ಲಿ ಸ್ನಾನ ಮಾಡುವುದು, ನೀರನ್ನು ತಲೆಯ ಮೇಲೆ ಚಿಮುಕಿಸಿಕೊಳ್ಳುವುದು ಭಕ್ತಿಯ ಮೂಲಕ ಹುಟ್ಟಿಕೊಂಡ ಮೌಢ್ಯವೆನ್ನಬಹುದು. ಆದರೆ ಮೂಡ ನಂಬಿಕೆಗೆ ಬಲಿಯಾದ ಜನ ಇದಾವುದನ್ನು ಲೆಕ್ಕಿಸದೆ ತುಂಬ ಶ್ರದ್ಧೆಯಿಂದ ಸ್ನಾನ ಮಾಡುವರು. ಜನರ ಅಂಧತ್ವಕ್ಕೆ ನೈರ್ಮಲ್ಯ ಭಾವನೆಯೇ ಸತ್ತು ಹೋಗುವುದು ದುರಂತ. ವಿವೇಕಾನಂದರು ಕುವೆಂಪುವಿನಂತೆ "ಮೌಢ್ಯವು ಮಾನವನ ಮಹಾಶತ್ರು"ವೆಂದಿದ್ದಾರೆ. ವಿವೇಕಾನಂದರು ಅಜ್ಞಾನವಿರುವ ಕಡೆ ಮನುಷ್ಯ ಅಂಧಾನುಕರಣೆ ಮಾಡುವನು. ಅವನಲ್ಲಿ ವಿದ್ಯೆಯ ಮೂಲಕ ತಿಳುವಳಿಕೆ ಹುಟ್ಟಬೇಕು. "ಯಾವ ಮಿದುಳು ಉದಾತ್ತ ಉಚ್ಚ ಭಾವನೆಯನ್ನೇ ಅಲೋಚಿಸಲಾರದೋ, ತನ್ನ ಸ್ವಾತಂತ್ರ್ಯವನ್ನೆಲ್ಲ ಕಳೆದುಕೊಂಡಿದೆಯೋ, ಶಕ್ತಿಯನ್ನೆಲ್ಲ ಕಳೆದುಕೊಂಡಿದೆಯೋ, ಧರ್ಮದ ಹೆಸರಿನಲ್ಲಿರುವ ಕೆಲಸಕ್ಕೆ ಬಾರದ ಮೂಢನಂಬಿಕೆಗಳನ್ನೆಲ್ಲಾ ಸ್ವೀಕರಿಸಿ ವಿಷರೂಪಕ್ಕೆ ಬರುತ್ತಿದೆಯೋ, ಅಂತಹ ಮಿದುಳು ಉಳ್ಳವರ ಹತ್ತಿರ ಬಹಳ ಜಾಗರೂಕರಾಗಿರಬೇಕು" (ಸ್ವಾ. ವಿ. ಕೃತಿಶ್ರೇಣಿ, ಸಂಪುಟ–೫, ಪುಟ–೧೭೪) ಎಂದೆನ್ನುವರು. ಮೌಢ್ಯವಿದ್ದ ಕಡೆ ಅಜ್ಞಾನವಿರುವುದು. ತಿಳುವಳಿಕೆಯಿಂದ, ಯೋಚನೆಯಿಂದ ಪ್ರಜ್ಞೆಯಲ್ಲಿರುವ ಅಂಧತ್ವವು ದೂರವಾಗುವುದು. ಇಲ್ಲವಾದರೆ ಇದರಿಂದ ಅಪಾಯಗಳು ಹೆಚ್ಚು. ಮೂಢತೆಯು ನಮ್ಮನ್ನು ಭಯದ ವಾತಾವರಣದಲ್ಲಿ ಕಟ್ಟಿಹಾಕುವುದು. ಇದು ನಮ್ಮ ದುರ್ಬಲತೆಯ ಸಂಕೇತವೆನ್ನುವರು. ವಿವೇಕಾನಂದರು ಮೌಢ್ಯತೆಯ ನಿವಾರಣೆಯ ಮೂಲಕ ಆಧ್ಯಾತ್ಮಿಕ ನಿಯಮಗಳು ಪ್ರಕಾಶಿಸಲು ಸಾಧ್ಯವೆನ್ನುವರು.

೩.೨.೩. ಪುರೋಹಿತ ಶಾಹಿ ವರ್ಗದ ಕುರಿತು ತಿರಸ್ಕಾರ

ಕುವೆಂಪು ರಾಜಶಹಿ ಹಾಗೂ ಪುರೋಹಿತ ಶಾಹಿಗಳೆರಡನ್ನು ಏಕಪ್ರಕಾರವಾಗಿ ವಿರೋಧಿಸುತ್ತಿದ್ದರು. ದೊರೆ ಮತ್ತು ಪುರೋಹಿತನ ಮೂಲಕ ಮತ ಹುಟ್ಟಿತ್ತೆನ್ನುವರು. "ಅವರೀರ್ವರು ಅವಳಿ ಮೊಲೆಯೂಡಿ ಸಲಹಿದರದಂ" (ತತ್ತ್ವಜ್ಞಾನಿ ಕುವೆಂಪು ಮತ್ತು ಇತರ ಪ್ರಬಂಧಗಳು–ದೇಜಗೌ–ಪುಟ–೧೧) ಎಂದು ಘೋಷಿಸುವರು. ಅವೆರಡು ವಿನಾಶವಾಗುವ ತನಕ ಜಗತ್ತಿಗೆ ಶಾಂತಿ

ಇಲ್ಲವೆನ್ನುವರು. "ಕವಿಗರಸುಗಿರಸುಗಳ ಋಣವಿಲ್ಲ"ವೆಂದು ರಾಜಪ್ರಭುತ್ವವಿದ್ದಾಗಲೇ ತಿರಸ್ಕರಿಸಿದರು.

ಶೃಂಗೇರಿಗೆ ಹೋದ ಸಂದರ್ಭದಲ್ಲಿ ಎಲ್ಲರು ಭಟ್ಟರ ಕೈಯಲ್ಲಿ ಪೂಜೆ ಮಾಡಿಸುತ್ತಿದ್ದರು. ಕುವೆಂಪು ಆ ಗೋಜಿಗೆ ಹೋಗದೆ, ಅಲ್ಲಿನ ಪ್ರಾಚೀನ ಪ್ರಶಾಂತತೆಯಲ್ಲಿ ಚಿಂತನಾ ಮಗ್ನರಾದರು. ಈ ದೇವಾಲಯಗಳ ಸ್ವರೂಪ ಬದಲಾಗಬೇಕು. ಉಪನಿಷತ್ತು ಹಾಗೂ ವೇದಾಂತ ದರ್ಶನವನ್ನು ಆಶ್ರಯಿಸಬೇಕು, ಧರ್ಮಶಾಸ್ತ್ರ ಪುರಾಣಾದಿಗಳ ಒಳಗಿರುವ ಅನಿತ್ಯಾಂಶಗಳನ್ನು ತ್ಯಜಿಸಬೇಕು, ಇಲ್ಲವೆಂದಾದರೆ, ಹಿಂದೂ ಧರ್ಮವು ಇಂದಲ್ಲ ನಾಳೆ ವಿನಾಶವಾಗುವುದೆಂದರು. ನಮ್ಮ ಸಮಾಜವು ವರ್ಣಾಶ್ರಮ, ಜಾತಿಪದ್ಧತಿ, ಚಾತುರ್ವರ್ಣ್ಯ ಮೊದಲಾದ ಶಿಸ್ತಿನಿಂದ ಸಂಪೂರ್ಣವಾಗಿ ಪಾರಾಗಬೇಕು. ಆಗ ಮಾತ್ರ ವೇದಾಂತ ದರ್ಶನವಾಗಿ, ವಿಶ್ವಧರ್ಮವಾಗಿ ಹಿಂದೂ ಧರ್ಮವು ವಿಶ್ವಧರ್ಮವಾಗಲು ಸಾಧ್ಯ.

ಕುವೆಂಪು ತಮ್ಮ ಬರವಣಿಗೆಯ ಮೂಲಕ ಶೂದ್ರ ಸಮಾಜದ ಅನುಭವಗಳನ್ನು ಮುನ್ನೆಲೆಗೆ ತಂದರು. ವ್ಯವಸ್ಥೆಯ ಒಳಗೆ ತಾನು ಕಂಡುಂಡ ಪುರೋಹಿತ ಶಾಹಿ ಸಮಾಜದ ಸಮಸ್ಯೆಗಳನ್ನು ದಿಟ್ಟತನದಿಂದ ಅವುಗಳ ವಿರುದ್ಧ ಪ್ರತಿಭಟನೆಯನ್ನು ಬರವಣಿಗೆಯ ಮೂಲಕ ತೋರಿಸಿದರು. ಹಾಗೂ ಅದನ್ನೆಲ್ಲ ಮೆಟ್ಟಿನಿಂತರು. ಕುವೆಂಪು ತನ್ನ ವೈಚಾರಿಕತೆಯ ಮೂಲಕ ಪುರಾಣ ಮತ್ತು ಪರಂಪರೆಗೆ ಮರು ವ್ಯಾಖ್ಯಾನ ನೀಡಿದರು. ಭೇದಭಾವಗಳನ್ನು ಸೃಷ್ಟಿಸಿ ಶೋಷಣೆಯನ್ನು ಹೆಚ್ಚಿಸುವ ಜನರಲ್ಲಿ ಅಜ್ಞಾನವನ್ನು ಹುಟ್ಟುಹಾಕುವ ವರ್ಗವನ್ನು ಕಂಡರೆ ಉರಿದು ಬೀಳುವರು. ಇದು ರಾಷ್ಟ್ರದ ಏಕತೆಗೆ ಅಡ್ಡಿಯುಂಟು ಮಾಡುವುದು. ಇಂತಹ ಅಧಿಕಾರ ಶಾಹಿ ಪುರೋಹಿತ ವರ್ಗದ ಬಗ್ಗೆ ಸಿಟ್ಟಿತ್ತೇ ಹೊರತು ಪ್ರಾಚೀನ ಕಾಲದ ಬ್ರಾಹ್ಮಣ್ಯಕ್ಕೆ ಅಥವಾ ಸಾತ್ವಿಕ ಶಕ್ತಿಯ ಬಗೆಯಲ್ಲ ಎಂದೆನ್ನುವರು. ಸಮಾಜದ ಪುರೋಗಾಮಿಗಳಾಗಿರುವ ಬ್ರಾಹ್ಮಣರು ಜಾತಿ ವಿನಾಶಕ್ಕೆ ಮುಂದಾಗಬೇಕೆನ್ನುವರು. "ಜಾತೀಯತೆಯಳಿದರೆ ದೇಶಕ್ಕೆ ಒಳ–ಹೊರ ಶತ್ರುಗಳ ಕಾಟ ಕಡಿಮೆಯಾಗುವುದು. ಭದ್ರತೆ ಮತ್ತು ಏಕತೆಗಳು ಸಾಧ್ಯವಾಗುವುದು. ನಿರ್ಜಾತೀಯತೆಯಿಂದ ದೇಶಕ್ಕೆ ಕ್ಷೇಮ, ನಿರ್ಮತೀಯತೆಯಿಂದ ಲೋಕಕ್ಕೆ ಶಾಂತಿ" ಎಂದು ದೇಜಗಾ ಅಭಿಪ್ರಾಯ ಪಡುವರು. ಇದು ಎಲ್ಲಾ ಕಾಲಕ್ಕೂ ಒಪ್ಪಿತವಾದ ಮಾತು. ನವೋದಯ ಕಾಲಘಟ್ಟದಲ್ಲಿ ಪುರೋಹಿತಶಾಹಿಯ ವಿರುದ್ಧ ದನಿ ಎತ್ತಿರುವ ಕೆಲವೇ ಲೇಖಕರಲ್ಲಿ ಕುವೆಂಪು ಒಬ್ಬರು.

ವಿವೇಕಾನಂದರು ಭರತಖಂಡದ ಅಸಹಾಯಕ ಸ್ಥಿತಿಯನ್ನು ಕಂಡು ಎಲೇ ಭಾರತಾಂಬೆಯೇ "ಪುರೋಹಿತರ ದೌರಾತ್ಮ್ಯದಿಂದ, ಜಾತಿಭೇದಗಳ ಕ್ರೌರ್ಯದಿಂದ, ಮೇಲೆದ್ದವರ ಅಹಂಕಾರದಿಂದ, ಕೆಳಗೆ ಬಿದ್ದವರ ಹೇಡಿತನದಿಂದ, ಪಂಡಿತರ ಸ್ವಾರ್ಥಬುದ್ಧಿಯಿಂದ, ಪಾಮರರ ಮೂರ್ಖತನದಿಂದ, ನಿನ್ನ ಸುಂದರ ಸುರಮಂದಿರವು ರುದ್ರಶ್ಮಸಾನವಾಯಿತೇ?" (ಸ್ವಾ ವಿ. ಪುಟ–೬) ಎಂದು ವಿವೇಕಾನಂದರ ವಿಚಾರಗಳನ್ನು ಕುವೆಂಪು ಉದ್ಘೋಷಿಸುವರು. ಕುವೆಂಪು ಅವರ ಇಡೀ ವ್ಯಕ್ತಿತ್ವದಲ್ಲಿ ವಿವೇಕಾನಂದರ ಎದೆಗಾರಿಕೆಯ ಕೆಚ್ಚು ಕಾಣಿಸುವುದು. ಪುರೋಹಿತ ವರ್ಗ ದೇವರು ಧರ್ಮದ ಹೆಸರಿನಲ್ಲಿ ಅಸಹಾಯಕರನ್ನು ಶೋಷಿಸುವುದನ್ನು ಖಂಡಿಸುವರು. ಯಾರು ಧರ್ಮದ ಹೆಸರಿನಲ್ಲಿ ಹಣ ಮಾಡುವರೋ ಅವರು ಬ್ರಾಹ್ಮಣರಲ್ಲವೆಂದರು. ನಿಸ್ವಾರ್ಥ ಸೇವೆಯ ಮೂಲಕ ಧರ್ಮ ಪ್ರಚಾರವನ್ನು ಯಾರು ಕೈಗೊಳ್ಳುವರೋ ಅವನೇ ನಿಜವಾದ ಬ್ರಾಹ್ಮಣನೆನ್ನುವರು.

ದೇವರು ಧರ್ಮದ ಹೆಸರಿನಲ್ಲಿ ಸಾಮಾನ್ಯ ಜನರ ನಂಬಿಕೆ ಮತ್ತು ಮೌಢ್ಯಗಳನ್ನು ಬಂಡವಾಳವನ್ನಾಗಿ ಮಾಡಿಕೊಂಡು ಅವರನ್ನು ಸುಲಿಗೆ ಮಾಡುವ ಪುರೋಹಿತಶಾಹೀ ಕುತಂತ್ರದ ಬಗ್ಗೆ ತೀವ್ರವಾದ ಸಿಟ್ಟಿರುವುದನ್ನು ಕಾಣುತ್ತೇವೆ. ಇಲ್ಲಿ ಪುರೋಹಿತಶಾಹಿ ಎನ್ನುವುದು ಯಾವುದೋ ಒಂದು ನಿರ್ದಿಷ್ಟ ಮತಧರ್ಮ ಅಥವಾ ವರ್ಗಕ್ಕೆ ಸಂಬಂಧಪಟ್ಟದ್ದಲ್ಲ, ಅದು ಎಲ್ಲ ದೇಶಗಳಲ್ಲಿಯೂ, ಎಲ್ಲ ಕಾಲಗಳಲ್ಲಿಯೂ, ಎಲ್ಲ ಮತಗಳಲ್ಲಿಯೂ ಇರುವ ಒಂದು ಶೋಷಕ ವರ್ಗವಾಗಿದೆ. ಕುವೆಂಪು ಅವರ ವೈಚಾರಿಕತೆಯಲ್ಲಿ ಈ ಪುರೋಹಿತ ಶಾಹಿಯ ಕೇಂದ್ರಗಳಾದ ಗುಡಿ–ಚರ್ಚು–ಮಸೀದಿಗಳನ್ನು ನಿರಾಕರಿಸುವ ಧ್ವನಿಯೊಂದು ಮುಖ್ಯವಾಗಿ ಕೇಳಿ ಬರುವುದು. ಸರ್ವೋದಯ ವಿರೋಧಿಯಾದ ಜಾತಿ–ಮತಗಳನ್ನೂ, ಚಾತುರ್ವರ್ಣ ವ್ಯವಸ್ಥೆಯನ್ನೂ ಇವುಗಳನ್ನು ಬೆಂಬಲಿಸುವ ಶಾಸ್ತ್ರ ಗುರುಮಠ ಪುರೋಹಿತ ಶಾಹಿಯನ್ನು ವಿಮರ್ಶಿಸುವ ಮತ್ತು ಧಿಕ್ಕರಿಸುವ ಜನತಾ ಪ್ರಜ್ಞೆಯೊಂದು ಜಾಗ್ರತಗೊಳ್ಳಬೇಕೆನ್ನುವರು. "ಯಾವ ಕಾಲದ ಶಾಸ್ತ್ರವೇನ ಹೇಳಿದರೇನು, ಎದೆಯದನಿಗೂ ಮಿಗಿಲು ಶಾಸ್ತ್ರವಿಹುದೇನು? ಎಂದು ಕುವೆಂಪು ಪ್ರಶ್ನಿಸುತ್ತಾರೆ. ಈ ಶಾಸ್ತ್ರಗಳೆಲ್ಲ ಹಿಂದೆ ಆಯಾಕಾಲದ ಧರ್ಮದ ಕಲ್ಪನೆಗೆ ಅನುಸಾರವಾಗಿ ರಚಿತವಾಗಿರಬಹುದು. ಆದರೆ ಕಾಲಕ್ಕೆ ತಕ್ಕಂತೆ ದೇಶಕ್ಕೆ ತಕ್ಕಂತೆ ನಮ್ಮ ಹೃದಯವೆ ನಮಗೆ ಶ್ರೀಧರ್ಮಸೂತ್ರವಾಗಬೇಕು ಎನ್ನುವುದು ಕುವೆಂಪು ಅವರ ನಿಲುವು.

೩.೨.೪. ಪ್ರಕೃತಿ ಹಾಗೂ ಆತ್ಮ ಶ್ರದ್ಧೆಯ ಭಕ್ತಿ

ಕುವೆಂಪು ಅವರ ಜೀವನದ ಆಸಕ್ತಿ, ಜೀವನೋದ್ದೇಶವೇ ಅಧ್ಯಾತ್ಮ. ಕಾವ್ಯ ರಚನೆ ಆಸಕ್ತಿಯ ಪರಮಗುರಿಗೆ ಸಾಧನ. ಅವರ ಆಧ್ಯಾತ್ಮಿಕತೆ ಯಾವ ಮಟ್ಟಕ್ಕೆ ಮುಟ್ಟಿತ್ತೆಂದರೆ ಹೊಸ ಕಾರು ಕೊಂಡು ತಂದರೆ ಅದನ್ನು ರಥಚಕ್ರ, ಶಕ್ತಿದೇವತೆ ಎಂದು ಆರಾಧಿಸುವರು. ತಂತಿ ಕಂಬಿಗಳನ್ನು ಕಿವಿಗೊಟ್ಟು ಕೇಳಿ ಅದರಲ್ಲಿ ಓಂಕಾರ ನಾದ ಹೊಮ್ಮುವುದೆಂದು "ಕೇಳಿ ಕೈಮುಗಿ ಆತಂತಿಯ ಕಂಬಕ್ಕೆ" ಎಂದು ಕವಿತೆ ರಚಿಸಿದರು. ಮನೆಯಂಗಳದಲ್ಲಿ ಬೆಳೆದ ಹೂವಿನಲ್ಲಿ ಚಿತ್‌ಶಕ್ತಿಯ ಆನಂದವನ್ನು ಕಾಣುವರು. ಹೀಗೆ ಸಕಲ ಸೃಷ್ಟಿಯಲ್ಲಿ 'ಪ್ರಕೃತಿ'ಯೆ ಮೈ ತಾಳಿದುದನ್ನು ಅನುಭವಿಸುವರು. ಇಂತಹ ಆಧ್ಯಾತ್ಮವೇ ಅವರ ಉಸಿರು.

ಶ್ರೀರಾಮಕೃಷ್ಣ ಮಹಾಸಂಘವನ್ನುಳಿದು ಬೇರೆ ಯಾವುದೇ ಮಠ, ದೇವಸ್ಥಾನಗಳಿಗೆ ಯಾವತ್ತು ಹೋದವರಲ್ಲ. ಇದಕ್ಕೆ ಕಾರಣ ಇಪ್ಪತ್ತೊಂದರ ಹರೆಯದಲ್ಲಿದ್ದಾಗ ಒಮ್ಮೆ ಕುವೆಂಪು ಸ್ನೇಹಿತರೊಡನೆ ಚಾಮುಂಡಿ ಬೆಟ್ಟಕ್ಕೆ ಹೋಗಿದ್ದರು. ದೇವರಿಗೆ ಪೂಜೆ ಮಾಡಿಸಿ, ಆರತಿಯ ನಂತರ ಪೂಜಾರಿ ತಟ್ಟೆಗೆ ಹಾಕಲು ಕುವೆಂಪು ಬಳಿ ಹಣವಿರಲಿಲ್ಲ. ಆಗ ಪೂಜಾರಿ ತೀರ್ಥವನ್ನು ನೀಡದೆ ಮುಂದೆ ಹೋದ. ಕುವೆಂಪು ಹೇಳುವಂತೆ "ನನಗೆ ಅದರಿಂದ ಯಾವ ಭಾವವೂ ಉಂಟಾಗಲಿಲ್ಲ ...... ಪರವಾಗಿ ಆಗಲಿ, ವಿರುದ್ಧವಾಗಿ ಆಗಲಿ, ಭಕ್ತಿಗಾಗಲಿ, ಭಗವತ್ ಕೃಪೆಗಾಗಲಿ ಧಕ್ಕೆಯಾಗುತ್ತದೆ ಎಂಬ ಭಾವನೆಗಳಿಂದ ನನ್ನ ಚೇತನ ಎಂದೋ ಮುಕ್ತವಾಗಿತ್ತು". (ನೆನಪಿನ ದೋಣಿಯಲ್ಲಿ ಪುಟ ೫೦೦-೫೦೧) ಆದರೂ ಗೆಳೆಯರ ಒತ್ತಾಯಕ್ಕೆ ಮಣಿದು ಹಣ ಹಾಕುವರು. ದಕ್ಷಿಣೆ ಬಿದ್ದೊಡನೆ ಪೂಜಾರಿ ಮುಂದೆ ಬಂದು ತೀರ್ಥ ಕೊಡಲು ಮುಂದಾಗುವರು. ಆಗ ಕುವೆಂಪು ತೀರ್ಥ ಸ್ವೀಕರಿಸಲು ಕೈಯೆತ್ತದೆ "ಅಲ್ಲಿ ಕೆಳಗೆ ಕೆರೆಯಲ್ಲಿ ನೀರಿದೆ. ಅವಶ್ಯ ಬಿದ್ದರೆ ಅದನ್ನೆ ತೆಗೆದುಕೊಳ್ಳುತ್ತೇನೆ" (ನೆನಪಿನ ದೋಣಿಯಲ್ಲಿ ಪುಟ ೫೦೧) ಆವೊತ್ತಿನಿಂದ ಯಾವ ದೇವಸ್ಥಾನಕ್ಕೂ ಪೂಜೆಗಾಗಿ ಹೋಗಿಲ್ಲ. ದೇವಾಲಯಗಳಿಗೆ ಹೋಗುವುದು ನಿರರ್ಥಕ, ದೇಗುಲದಲ್ಲಿ ದೇವರಿಲ್ಲ ಎಂಬುದನ್ನು ಜಲಗಾರ ನಾಟಕದಲ್ಲಿ ಪ್ರತಿಬಿಂಬಿಸಿದ್ದಾರೆ. ಅವರ ಪ್ರಕಾರ ಪ್ರಕೃತಿಯಲ್ಲಿರುವ ನಿಗೂಢ ಶಕ್ತಿಯೇ ಪರಮಾತ್ಮ. ಅವರ ಪ್ರಕಾರ ಅದೇ ಚಿತ್‌ಶಕ್ತಿಯಾಗಿರುವುದು. ಕುವೆಂಪು ಮಗನಾದ ಪೂರ್ಣಚಂದ್ರ ತೇಜಸ್ವಿಯವರು ತಂದೆಯವರ ಭಕ್ತಿಯ ವಿಚಾರವಾಗಿ

ಹೀಗೆನ್ನುವರು. "ಅಣ್ಣ ದೇವಸ್ಥಾನಗಳಿಗೆ ಹೋಗುವುದು, ಪೂಜೆ ಮಾಡಿಸುವುದು ಅಥವಾ ಮನೆಗೇ ಅರ್ಚಕರನ್ನು ಕರೆಸಿ ಪೂಜೆ ಮಾಡಿಸುವುದು ಇದಕ್ಕೆಲ್ಲ ಸಂಪೂರ್ಣ ವಿದಾಯ ಹೇಳಿದ್ದರು" ಮನೆಯಲ್ಲಿ ತನ್ನ ಕಲ್ಪನೆಯ ದೇವರ ಪೂಜೆಯನ್ನು ಕುವೆಂಪು ಮಾಡುತ್ತಿದ್ದರು. ಕುವೆಂಪು ಅವರ ಹೆಂಡತಿ ಕೊನೆಯುಸಿರು ಎಳೆಯುತ್ತಿರುವಾಗ ಅಣ್ಣ ಅಮ್ಮನ ಕಿವಿಯಲ್ಲಿ 'ಯಾ ದೇವಿ ಸರ್ವಭೂತೇಷು ಶಾಂತಿ ರೂಪೇಣ ಸಂಸ್ಥಿತಾ' ಎಂದು ಹೇಳಿ ತಲೆಯನ್ನೊಮ್ಮೆ ನೇವರಿಸಿದ್ದರು. ಕುವೆಂಪು ಅವರ ಈ ಎಲ್ಲ ನಿಲುವುಗಳನ್ನು ಕಂಡಾಗ ಅವರ ಅಧ್ಯಾತ್ಮ ಚಿಂತನೆ ಹೊಸ ಮುಖಗಳ ಅರಿವಾಗುವುವು.

'ಸರ್ವಂ ಖಲ್ವಿದಂ ಬ್ರಹ್ಮ' ಎಂಬುದು ಉಪನಿಷತ್ ಧರ್ಮದ ಸಾರಸರ್ವಸ್ವ. ಆ ಸರ್ವಾಂತರ್ಯಾಮಿಯಾದ ಬ್ರಹ್ಮನ ಉಪಾಸಕರಾಗಿದ್ದರು ಕುವೆಂಪು. ಆದ್ದರಿಂದಲೆ ಕುವೆಂಪು ಹೇಳುವಂತೆ "ಸೂರ್ಯ ಚಂದ್ರರ ಉದಯಾಸ್ತಮಾನಗಳನ್ನು ಹೂ ಬಳ್ಳಿ ಹಸುರುಗಳಿಡಿದ ಕಾನನ ಶ್ರೀಯನ್ನು ಜೋಗದ ಜಲಪಾತವನ್ನು ನೋಡುವುದೆ ಪೂಜೆ ಹಕ್ಕಿಗಳ ಇಂಚರವನ್ನು ಕೇಳುವುದೂ ಪೂಜೆಯೆ. ಮಹತ್ತಾದುದನ್ನು ಕುರಿತು ಆಲೋಚಿಸುವುದೂ ಅನುಭವಿಸುವುದೂ ಪೂಜೆಯೆ" (ಸಮಗ್ರ ಗದ್ಯ ಸಂಪುಟ – ೨ ಪುಟ ೮೫೦) ಮನೆಯಂಗಳದಲ್ಲಿ ಬೆಳೆದ ಗುಲಾಬಿ, ಡೇಲಿಯಾ, ಸಂಪಿಗೆ ಹೂವಿನಲ್ಲಿ ಬ್ರಹ್ಮಶಕ್ತಿಯನ್ನೆ ಕಾಣುವ; ಆ ಹೂವುಗಳ ಸೌಂದರ್ಯದಲ್ಲಿ ಪ್ರತ್ಯಕ್ಷ, ಸಾಕ್ಷಾತ್ ಕಣ್ಣಿಗೆ ಕಾಣುವ, ಕೈಯಿಂದ ಮುಟ್ಟುವ, ಮೂಗಿನಿಂದ ಸುವಾಸನೆಯನ್ನು ಸವಿಯುವ ಆ ಬ್ರಹ್ಮಶಕ್ತಿಯನ್ನು ಅನುಭವಿಸುವ ಜೀವಕ್ಕೆ ಕಲ್ಲು ಮಣ್ಣು ಮರದಲ್ಲಿ ನಿರ್ಮಿಸುವ ಮೂರ್ತಿಯ ಹಂಗೇನು?. ಗುಡಿಯಲ್ಲಿರುವ ವಿಗ್ರಹದ ಅಗತ್ಯವಿಲ್ಲ. ಸೃಷ್ಟಿ ಸೌಂದರ್ಯಾರಾಧನೆಯ ಮೂಲಕ ಆ ಯಾವುದೊ ಒಂದು ಚಿತ್‌ಶಕ್ತಿಯೊಡನೆ ಅನುಸಂಧಾನ ಮಾಡುವ ಸಹಜಯೋಗ ಸಾಧಕರು. ಇವರಿಗೆ ಅರ್ಚಕರ ತೀರ್ಥಪ್ರಸಾದದ ಅವಶ್ಯಕತೆಯಿಲ್ಲ. ಪೂಜಾರಿ, ಪುರೋಹಿತರ ಹಂಗು ಇಲ್ಲದ ಬ್ರಹ್ಮೋಪಾಸಕರು ಕುವೆಂಪು. ಎಲ್ಲೆಲ್ಲಿಯೂ, ಎಲ್ಲದರಲ್ಲೂ ಈ ಚಿತ್ ಶಕ್ತಿಯನ್ನೆ ಬುದ್ಧಿಯಿಂದ ಗ್ರಹಿಸುವುದೇ ಮಾತ್ರವಲ್ಲದೆ, ಹೃದಯದಿಂದ ಅನುಭವಿಸಿದ ಅನುಭಾವಿ 'ಸಿಂಹಾಸನೇಶ್ವರಿಯೂ ಚಿದಗ್ನಿ ಕುಂಡ ಸಂಭೂತಿಯೂ' ಆದ ದೇವಿ ತಮ್ಮ ಮಡದಿಯಲ್ಲಿ ಇದ್ದದ್ದನ್ನು ಅವರು ಕಂಡಿದ್ದರಿಂದಲೆ, ಮಡದಿ ಕೊನೆಯುಸಿರೆಳೆಯುವಾಗ 'ಯಾ ದೇವಿ ಸರ್ವಭೂತೇಷು ಶಾಂತಿ ರೂಪೇಣ ಸಂಸ್ಥಿತಾ' (ಯಾವ ದೇವಿ ಸರ್ವಭೂತಗಳಲ್ಲೂ ಶಾಂತಿ ರೂಪದಿಂದ

ಸಂಸ್ಥಾಪನೆಯಾಗಿದ್ದಾಳೊ) ಆ ದೇವಿಗೆ ನಮೋ ನಮಃ। ಎಂದು ಮಂತ್ರೋಚ್ಚಾರಣೆ ಮಾಡಿದ್ದು ಕೊನೆಗೆ ಕಳೇಬರದ ಕಾಲು ಮುಟ್ಟಿ ನಮಸ್ಕರಿಸಿದ್ದು. ಈ ಎಲ್ಲ ನಡತೆಗಳು ಲೌಕಿಕ ನಡಾವಳಿಗಿಂತ ಭಿನ್ನ. ಕುವೆಂಪು ಹೆಸರಿಲ್ಲದ, ಹೆಸರಿಸಲಾಗದ ದೈವವನ್ನು ಒಲಿದಿದ್ದರು; ಅವಲಂಬಿಸಿದ್ದರು; ಅನುಯಾಯಿಗಳಾಗಿದ್ದರು. "ಅಧ್ಯಾತ್ಮ ಕಾಲದೇಶಾತೀತವಾದದ್ದು. ಅದು ದೇಶದಿಂದ ದೇಶಕ್ಕೆ, ಜನಾಂಗದಿಂದ ಜನಾಂಗಕ್ಕೆ ವ್ಯತ್ಯಾಸವಾಗಲಾರದು. ರಸಾಯನ ಅಥವಾ ಭೌತಶಾಸ್ತ್ರ ವಿಜ್ಞಾನವಿದ್ದಂತೆ ಆಧ್ಯಾತ್ಮ ಸೂತ್ರಗಳು ವಿಶ್ವಮಾನ್ಯವಾಗಿರಬೇಕು" ಎಂಬುದು ಕುವೆಂಪು ಅವರ ಅಭಿಪ್ರಾಯ.

ಕುವೆಂಪು ಅವರಿಗೆ ಶ್ರೀರಾಮಕೃಷ್ಣ ವಿವೇಕಾನಂದರೆ ಆದ್ಯ ಗುರುವರ್ಯರು. "ಮರದಿಂದ ಹೊಮ್ಮುತ್ತಿದ್ದ ಮರ್ಮರನಾದ ಗಾಳಿಯಲ್ಲಿ ಕುಣಿಕುಣಿದು ಉದುರುತ್ತಿದ್ದ ಹಣ್ಣೆಲೆಯ ಹೊಳಪು ಆ ಎಲೆಗಳು ಬಂದಿಳಿದು ಗಾಳಿಯಲ್ಲಿ ಉರುಳುರುಳಿ ಬೀಳುವ ನೋಟದ ಮತ್ತು ಮೃದು ಸದ್ದಿನ ಸೊಗಸು ಎಲ್ಲಕ್ಕೂ ಮಿಗಿಲಾಗಿ ಇದೆಲ್ಲದರ ಹಿಂದೆ ಅಗೋಚರವಾಗಿದ್ದ ಚಿನ್ಮಯ ಚೇತನದ ದಿವ್ಯಾನಂದದ ಸ್ಫೂರ್ತಿ ನನ್ನನ್ನು ಭಾವೋನ್ಮಾದ ಮೂಕವನ್ನಾಗಿ ಮಾಡುತ್ತಿದ್ದವು". (ನೆನಪಿನ ದೋಣಿಯಲ್ಲಿ ಪುಟ ೨೬೬) ಇಪ್ಪತ್ತು ವರ್ಷದವರಿದ್ದಾಗ ಅವರಿಗಾದ ಈ ಅನುಭವದ ಅರ್ಥವನ್ನು ಗ್ರಹಿಸಿದವರಿಗೆ ಕುವೆಂಪು ಯಾವ ದೈವವನ್ನು ಆರಾಧಿಸಿದರು, ಯಾವ ಧರ್ಮಾವಲಂಬಿಗಳೆಂಬುದು ಮನದಟ್ಟಾಗುವುದು. ದೈವಭಕ್ತರಿಂದ ತುಂಬಿ ತುಳುಕುತ್ತಿರುವ, ವ್ರತ ಹಿಡಿದು ಹರಕೆ ಹೊತ್ತು ಗಂಟು ಮೂಟೆ ಕಟ್ಟಿಕೊಂಡು ದಶದಿಕ್ಕುಗಳಿಗೂ ಯಾತ್ರೆ ಹೋಗಿ, ಕೂದಲು ತೆಗೆಸಿ, ಕಾಣಿಕೆ ಕೊಟ್ಟು ಬರುತ್ತಿರುವ ಸಮಕಾಲೀನ ಸನ್ನಿವೇಶಕ್ಕಿಂತ ಕುವೆಂಪು ಅವರ ಭಕ್ತಿ ಸ್ವರೂಪ ತೀರ ವಿಭಿನ್ನವೆಂಬುದರ ಅರಿವಾಗುವುದು. ಕಲ್ಲು, ಮಣ್ಣು ಮರ ಲೋಹದಲ್ಲಿ ನಿರ್ಮಿಸಿದ ವಿಗ್ರಹಗಳು, ಮೂರ್ತಿಗಳು ದೇವರು ಎಂಬುದಾಗಿ ಭಾವಿಸಿದರೆ ಅವುಗಳಲ್ಲಿ ಕುವೆಂಪು ಅವರಿಗೆ ಕಿಂಚಿತ್ತು ನಂಬುಗೆ ಇರಲಿಲ್ಲ. ಎಲ್ಲ ನಾಶವಾದರೂ ಅವಿನಾಶಿಯಾದದ್ದು ಯಾವುದೊ, ಅದನ್ನು ಕುವೆಂಪು ನಂಬಿದ್ದರು. ಅವರು ನಿಜವಾಗಿಯೂ ವೇದಾಂತಿ ಹಾಗೂ ತತ್ವಜ್ಞಾನಿಯಾಗಿದ್ದರು.

ಮನೆಯಲ್ಲಿ ಶ್ರೀರಾಮಕೃಷ್ಣ, ಶ್ರೀಶಾರದಾದೇವಿ, ಶ್ರೀವಿವೇಕಾನಂದರ ಭಾವಚಿತ್ರಗಳನ್ನು ಇಟ್ಟು ಪೂಜೆ, ಧ್ಯಾನ ಮಾಡುತ್ತಿದ್ದರು. ಯಾಕೆಂದರೆ ಅಧ್ಯಾತ್ಮ ಹೊಸ ಚಿಂತನೆಯನ್ನು ಕುವೆಂಪು ಅವರಲ್ಲಿ ಹುಟ್ಟು ಹಾಕಿದ್ದರು ಇವರುಗಳು. ಶ್ರೀ ಸ್ವಾಮಿ ವಿವೇಕಾನಂದರು ಶುದ್ಧ ಅದ್ವೈತ ಸಂನ್ಯಾಸಿ. ಜೈಪುರ ಸಂಸ್ಥಾನದ

ದಿವಾನರೊಬ್ಬರು, ವಿಗ್ರಹಾರಾಧನೆಯನ್ನು ಕಟುವಾಗಿ ಟೀಕಿಸುತ್ತಾರೆ. ಆಗ ವಿವೇಕಾನಂದರು ಅರಮನೆಯಲ್ಲಿ ತೂಗುಹಾಕಿದ್ದ ತೀರಿದ ಮಹಾರಾಜರ ಭಾವಚಿತ್ರವನ್ನು ಕೈಗೆತ್ತಿಕೊಂಡು 'ಇದರ ಮೇಲೆ ಉಗುಳಿ' ಎಂದು ಆ ದಿವಾನರಿಗೆ ಹೇಳುತ್ತಾರೆ. ಆಗ ದಿವಾನರು 'ಛೇ' ಎಲ್ಲಿಯಾದರೂ ಉಂಟೇ? ಅದು ಮಹಾರಾಜರ ಭಾವಚಿತ್ರ ಎಂದರು. 'ಅದರಲ್ಲಿ ನಿಮ್ಮ ಮಹಾರಾಜರಿದ್ದಾರೆಯೆ?' ಎಂದಾಗ ದಿವಾನರು 'ಮಹಾರಾಜರು ಅದರಲ್ಲಿ ಇಲ್ಲದಿದ್ದರೂ, ಮಹಾರಾಜರ ನೆನಪು ಉಂಟು ಮಾಡುತ್ತದೆ' ಎಂದರಂತೆ. ಅದಕ್ಕೆ ಶ್ರೀವಿವೇಕಾನಂದರು 'ಹಾಗೆಯೆ ಚಿತ್ರಸ್ಥ ದೈವೀ ಪುರುಷರು ಆ ದೇವರನ್ನು ನೆನಪಿಗೆ ತರುತ್ತದೆ' ಎಂದರಂತೆ. ಕುವೆಂಪು ಕೂಡಾ ಶ್ರೀರಾಮಕೃಷ್ಣ ವಿವೇಕಾನಂದರ ಭಾವಚಿತ್ರಗಳನ್ನು ತಮ್ಮ ಮನೆಯ ಪೂಜಾ ಮಂದಿರದಲ್ಲಿಟ್ಟು ಪೂಜೆ ಮಾಡುತ್ತಿದ್ದುದು ಆ ಅವತಾರ ಪುರುಷರ ನೆನಪಿಗಾಗಿ, ಸ್ಮರಣೆಗಾಗಿ, ಧ್ಯಾನಕ್ಕಾಗಿ ಆರಾಧಿಸಿ ಮನೋಬಲವನ್ನು, ಸ್ಥೈರ್ಯವನ್ನು ಪಡೆಯುತ್ತಿದ್ದರು.

ದೈವಾನುಗ್ರಹಕ್ಕೆ, ದೈವಸಾನಿಧ್ಯಕ್ಕೆ, ದೈವ ಸಾಕ್ಷಾತ್ಕಾರಕ್ಕೆ ಯಾವ ಮಧ್ಯಸ್ತಗಾರನ ಅಥವಾ ಪೂಜಾರಿಯ ಅವಶ್ಯಕತೆಯಿಲ್ಲ ಇದು ಉಪನಿಷತ್ ಧರ್ಮ. ಕುವೆಂಪು ಹೇಳುತ್ತಿದ್ದುದು ಆಚರಿಸುತ್ತಿದ್ದುದು ಇದನ್ನೇ. ಕುವೆಂಪು ಅವರು ತಮ್ಮ ಮನೆಯ ಪೂಜಾ ಮಂದಿರದಲ್ಲಿ ಗೀತೆ, ಉಪನಿಷತ್, ಶ್ಲೋಕಗಳನ್ನು ಹೇಳುತ್ತ ದೇವೀಸ್ತುತಿ ಮಾಡುತ್ತ ಪೂಜೆ ಮಾಡುತ್ತಿದ್ದರು. ಅದು ಯಾವುದೊ ಒಂದು ಅವರ್ಣನೀಯ, ಅಗೋಚರ, ಚಿದ್‌ವಸ್ತುವಿನೊಡನೆ ಮಗ್ನರಾಗಿರುತ್ತಿದ್ದರು. ಅವರು ಯಾವತ್ತು ಗುಡಿಗೆ ಹೋಗದ ಸಾಧಕರು. ವಿಗ್ರಹಾರಾಧನೆ ಮಾಡದ ಸದ್ಭಕ್ತರು. ನಿಸರ್ಗವನ್ನು ಪೂಜಿಸಿದ ಅನುಭಾವಿಗಳು.

ಅಧ್ಯಾಯ – ೪ : ಅಧ್ಯಯನದ ಫಲಿತಗಳು

ಕುವೆಂಪು ಮೂಲತಃ ನಿಸರ್ಗದ ಆರಾಧಕರು. ಪ್ರಕೃತಿಯಲ್ಲಿ ಅಧ್ಯಾತ್ಮದ ಬೆಳಕನ್ನು ಕಂಡವರು. "ನನಗೆ ನನ್ನ ಜೀವನದ ದಿಕ್ಕನ್ನೆ ತಿರುಗಿಸಿ, ನನ್ನ ಬದುಕನ್ನೆಲ್ಲ ಮರ್ತ್ಯದಿಂದ ಅಮರ್ತ್ಯಕ್ಕೆತ್ತಿ ಬೀಸಿದ ಭಗತ್ ಕೃಪಾಹಸ್ತರೂಪದ ಶ್ರೀರಾಮಕೃಷ್ಣ ವಿವೇಕಾನಂದರ ವಿಷಯಕವಾದ ಕೃತಿ ಶ್ರೇಣಿಯ ದರ್ಶನವಾದದ್ದು" ಮೈಸೂರಿನ ಸಾರ್ವಜನಿಕ ಗ್ರಂಥಾಲಯದಲ್ಲಿ ಪ್ರೌಢಶಾಲಾ ವಿದ್ಯಾರ್ಥಿಯಾಗಿದ್ದಾಗ. (ನೆನಪಿನ ದೋಣಿಯಲ್ಲಿ ಪುಟ–೧೮೨) ಸ್ವಾಮೀಜಿ ಭಾಷಣಗಳು ಕುವೆಂಪು ಸಾಧನೆಗೆ ಹೊಸ ದಿಕ್ಕನ್ನು, ಬದುಕಿಗೆ ನವ ಚೈತನ್ಯವನ್ನು ಒದಗಿಸಿದವು. "ಉಪನಿಷತ್ತುಗಳು, ಭಗವದ್ಗೀತೆ, ಶ್ರೀರಾಮಕೃಷ್ಣ ಪರಮಹಂಸರು ಮತ್ತು ಶ್ರೀ ಕೃಷ್ಣ ಚೈತನ್ಯ ಮೊದಲಾದ ಆಧ್ಯಾತ್ಮಿಕ ವಿಭೂತಿಗಳ ಜೀವನ ಚರಿತ್ರೆಗಳ ಅಧ್ಯಯನದಿಂದ ನನ್ನಾತ್ಮದಲ್ಲಿ ಒಂದು ಅದ್ವೈತ ಭಾವ ಓಲಾಡುತ್ತಿತ್ತು" (ನೆನಪಿನ ದೋಣಿಯಲ್ಲಿ ಪುಟ ೨೦೦) ಅವರೊಳಗಿನ ಚೇತನಕ್ಕೆ ಸ್ವಾತಂತ್ರ್ಯ ಒದಗಿತು. ಸ್ವಾಮಿ ವಿವೇಕಾನಂದರ ಕೃತಿಗಳ ಅಧ್ಯಯನದಿಂದ ಅವರೊಳಗಿನ ಚೇತನವು ಅದ್ವೈತದ "ಅಭೀ:' ತತ್ತ್ವವನ್ನು ಅನುಸಂಧಾನ ಮಾಡಿ ಅಮೃತತ್ವವನ್ನು ಅನುಭಾವಿಸುತ್ತಿದ್ದವು. ಸ್ಮಶಾನಕ್ಕೆ ಹೋಗಿ ಪದ್ಮಾಸನವಿಕ್ಕಿ ತಾತ್ತ್ವಿಕ ಧ್ಯಾನದಲ್ಲಿ ಮಗ್ನವಾಗುತ್ತಿದ್ದರು. (ನೆನಪಿನ ದೋಣಿಯಲ್ಲಿ ಪುಟ–೨೧೩) ವಿವೇಕಾನಂದರನ್ನು ತಮ್ಮ ಗುರುದೇವ ಎಂದು ಭಾವಿಸುವರು. ನೆನಪಿನ ದೋಣಿಯಲ್ಲಿ ಉದ್ದಕ್ಕೂ ಗುರುದೇವನಾದ ವಿವೇಕಾನಂದರಿಗೆ ಗೌರವ ನಮನ ಸಲ್ಲಿಸುತ್ತಿರುವುದನ್ನು ಕಾಣಬಹುದು. ಒಟ್ಟಿನಲ್ಲಿ ವಿವೇಕಾನಂದರು ಕುವೆಂಪು ಅವರ ಬದುಕನ್ನೆಲ್ಲ ಆವರಿಸಿಕೊಂಡಿದ್ದರು. ತಮ್ಮ ಗುರುಗಳಾದ ಸ್ವಾಮಿ ವಿವೇಕಾನಂದ ಮತ್ತು ರಾಮಕೃಷ್ಣ ಪರಮಹಂಸರ ಮಹೋನ್ನತ ಭಾವನೆಗಳನ್ನು ಪ್ರಸಾರ ಮಾಡುವುದೇ ಜೀವನದ ಗುರಿಯೆಂದು ತೀರ್ಮಾನಿಸುವರು.

ಕುವೆಂಪು ಒಮ್ಮೆ ಅಸೌಖ್ಯಕ್ಕೆ ಒಳಗಾಗುವರು. ಆ ಸಂದರ್ಭದಲ್ಲಿ ಮತಿ ವಿಕಲತೆ ಒಳಗಾದಂತೆ ವರ್ತಿಸುತ್ತಿದ್ದರು. ಅವರಿಗೆ ಗೊತ್ತಿಲ್ಲದೆ 'ಪುಟ್ಟಪ್ಪ ಸತ್ತು ಹೋದ; ನಾನು ವಿವೇಕಾನಂದ' ಎಂದು ಹೇಳುವರು.

"ಪರಬ್ರಹ್ಮ ಎನಗೆ ತಂದೆ,
ಮಹಾಕಾಳಿ ಎನ್ನ ತಾಯಿ;
ರಾಮಕೃಷ್ಣರೆನಗೆ ಗುರುವು,
ಶ್ರೀ ವಿವೇಕಾನಂದರೆನಗೆ ಗುರುಭಾಯಿ" (ನೆ. ದೋ. ಪು.–೮೧೨)

ಹೀಗೆ ವಿವೇಕಾನಂದರನ್ನು ತನ್ನೊಳಗೆ ಆವಾಹನೆ ಗೊಳಿಸಿಕೊಂಡವರು ಕುವೆಂಪು. ಮುಂದೆ ಶ್ರೀರಾಮಕೃಷ್ಣ ಪರಮಹಂಸರ ನೇರ ಶಿಷ್ಯರಾದ ಸ್ವಾಮಿ ಶಿವನಾಂದರ ಮೂಲಕ ಬೇಲೂರು – ದಕ್ಷಿಣೇಶ್ವರದಲ್ಲಿ ದೀಕ್ಷೆ ಕೈಗೊಳ್ಳುವರು.

ಕುವೆಂಪು ಅವರ ಜೀವನ ಮತ್ತು ಸಾಹಿತ್ಯದಲ್ಲಿ ಈ ಇಬ್ಬರು ಮಹಾನ್ ಪುರುಷರ ಪ್ರಭಾವ ಹಾಸುಹೊಕ್ಕಾಗಿರುವುದು. ಕುವೆಂಪು ತನ್ನನ್ನು "ಶ್ರೀರಾಮಕೃಷ್ಣ ಭಗವದ್‌ಗೋತ್ರ ಸಂಜಾತ" ಎಂದಿರುವರು. ಕುವೆಂಪು ಚೇತನ ಮೊದಲು ಸ್ವಾಮಿ ವಿವೇಕಾನಂದರ ಪ್ರಭಾವಕ್ಕೆ ಒಳಗಾಗಿರುವುದು. ಅನಂತರ ಶ್ರೀರಾಮಕೃಷ್ಣರತ್ತ ಅವರ ದೃಷ್ಟಿ ಹರಿಯಿತು. ಒಟ್ಟಿನಲ್ಲಿ ಇಬ್ಬರು ಆಧ್ಯಾತ್ಮಿಕ ಗುರುಗಳ ಶಕ್ತಿಯಿಂದ ಇವರ ಶಕ್ತಿ ವರ್ಧಿಸಿರುವುದು ಸತ್ಯ. ಕುವೆಂಪು ವ್ಯಕ್ತಿತ್ವವು ಮೂಲಭೂತವಾಗಿ ಅಧ್ಯಾತ್ಮ ಪ್ರೇರಿತವಾಗಿರುವುದು ಅವರೇ ಹೇಳುವಂತೆ

"ಜೀವನವನಿತುಂ ಜಪವೆನಗಾಗಿರೆ
ಜಪಮಣಿ ಗಿಪಮಣಿ ಮಾಲೆಯದೇಕೆ?"

ಅವರ ಬದುಕೇ ನಿರಂತರ, ನೀರವ ತಪಸ್ಸಾಗಿರುವುದು. ಕುವೆಂಪು 'ನಿವೃತ್ತಿ ಮುಕ್ತನ ಅಭೀಪ್ಸೆ' ಎಂಬ ಕವನದಲ್ಲಿ "ಸಾಹಿತಿಯ ಉಪಾಧಿ, ಕವಿಯ ಉಪಾಧಿ, ಕಡೆಗೆ ಉಪಾಧಿ"ಯನ್ನು ಭಗವಂತನಡಿಯಲ್ಲಿ ಸಮರ್ಪಿಸುವುದಾಗಿ ಹೇಳುವರು. ಇವೆಲ್ಲ ಅವರ ಅಂತರಂಗದ ಒಲವು ನಿಲುವುಗಳನ್ನು ಅಭಿವ್ಯಕ್ತ ಪಡಿಸುವುದು.

ಕುವೆಂಪು ಅವರ ವೈಚಾರಿಕತೆ ಪ್ರಖರವಾದುದು. ಮಾತ್ರವಲ್ಲ ಪ್ರಸಿದ್ಧವಾದುದಾಗಿದೆ. ಅವರು ತಮ್ಮ ವಿದ್ಯಾರ್ಥಿದೆಸೆಯಲ್ಲಿ "ಜಗತ್ತಿನಲ್ಲಿ ನನ್ನ ಸ್ಥಾನ ದಾರ್ಶನಿಕ ಕವಿಯದು" (ನೆನಪಿನ ದೋಣಿಯಲ್ಲಿ ಪುಟ ೩೪೬) ಎನ್ನುವರು. ಆದುದರಿಂದ ಅವರ ವೈಚಾರಿಕತೆಯು ದಾರ್ಶನಿಕತೆಯಿಂದ ಕೂಡಿರುವುದು. ಕುವೆಂಪು ಯುವಕರನ್ನು 'ನಿರಂಕುಶಮತಿ'ಗೆ ಕರೆ ನೀಡುವರು. ಆದರೆ ಅದು 'ಆತ್ಮಶ್ರೀ'ಗಾಗಿ ಎಂಬುದನ್ನು ಹೇಳಲು ಮರೆಯುವುದಿಲ್ಲ. ಕುವೆಂಪು ಅವರ ಆಧ್ಯಾತ್ಮಿಕತೆಯಲ್ಲಿ ಜೀವನೋತ್ಸಾಹವನ್ನು ಕಾಣಬಹುದು. ಅವರು ಬದುಕನ್ನು ಅನುಭವಿಸಿದ ದಾರ್ಶನಿಕರು. ಅವರೊಬ್ಬ ರಸಋಷಿ. ಅವರನ್ನು ಪ್ರಭಾವಿಸಿದ ಶ್ರೀರಾಮಕೃಷ್ಣ ವಿವೇಕಾನಂದರಾಗಲಿ, ಸ್ವಾಮಿ ಸಿದ್ಧೇಶ್ವರಾನಂದರಾಗಲಿ, ಗೊಡ್ಡು ಸಂನ್ಯಾಸಿಗಳಾಗಿರಲಿಲ್ಲ. ಇವರೆಲ್ಲ ಕಲಾಭಿರುಚಿಯುಳ್ಳ ರಸದೃಷ್ಟಿಯುಳ್ಳವರಾಗಿರುವರು.

ರಾಮಕೃಷ್ಣ ಆಶ್ರಮದ ವಾಸದ ಸಂದರ್ಭದಲ್ಲಿ ಸಿದ್ಧೇಶ್ವರಾನಂದರು ಕುವೆಂಪು ಅವರ ಎಲ್ಲಾ ಸಾಹಿತಿಕ ಬರವಣಿಗೆಗಳನ್ನು ಗಮನಿಸುತ್ತಿದ್ದರು. ಅಲ್ಲದೆ ಪ್ರೋತ್ಸಾಹವನ್ನು ನೀಡುತ್ತಿದ್ದರು. ಇದು ಅವರಲ್ಲಿರುವ ಸಾಹಿತ್ಯಾಭಿರುಚಿಯನ್ನು ಕಾಣಲು ಸಾಧ್ಯ. ಹುಟ್ಟಿನಿಂದ ಬೀಜರೂಪದಲ್ಲಿದ್ದ ಅಧ್ಯಾತ್ಮ ಪ್ರಿಯತೆ ಮಲೆನಾಡಿನ ವಾತಾವರಣದಲ್ಲಿ ಪೋಷಿತವಾಯಿತು. ಸಹ್ಯಾದ್ರಿಯ ಪರ್ವತಶ್ರೇಣಿ ಅವರ ಪಾಲಿಗೆ 'ದೇವತಾಸತ್ವ'ವಾಗಿ ಪರಿಣಮಿಸಿತು. ತಾಯಿಯಿಂದ ಬಂದ ಸಂಸ್ಕಾರ ಹಾಗೂ ಮನೆಯಲ್ಲಿದ್ದ ಧಾರ್ಮಿಕ ವಾತಾವರಣ ಅವರ ಆಧ್ಯಾತ್ಮಿಕತೆಯನ್ನು ಬೆಳೆಸಲು ಸಹಕಾರಿಯಾಯಿತು. ಅತೀಂದ್ರಿಯದಲ್ಲಿ ಅವರಿಗೆ ಮೊದಲಿನಿಂದಲೂ ಶ್ರದ್ಧಾಸಕ್ತಿಗಳಿದ್ದವು. ಈ ಆಧ್ಯಾತ್ಮಿಕ ಆಸಕ್ತಿಗೆ, ಅಭೀಪ್ಸೆಗಳಿಗೆ ಶ್ರೀರಾಮಕೃಷ್ಣ, ಸ್ವಾಮಿ ವಿವೇಕಾನಂದರ ಪ್ರಭಾವ ಒತ್ತಾಸೆಯಾಯಿತು. ಆಧ್ಯಾತ್ಮಿಕ ವಿಕಸನಕ್ಕೆ ಇವರ ಬದುಕು ಪ್ರೇರಣೆಯಾಯಿತು.

ಕುವೆಂಪು ಅವರಲ್ಲಿ ವಿವೇಕಾನಂದರ ಬಗ್ಗೆ ಭಕ್ತಿಗೌರವಗಳು ದಿನೇ ದಿನ ಹೆಚ್ಚಾಗತೊಡಗಿದವು. ಇದು ಕುವೆಂಪು ಸಾಹಿತ್ಯದಲ್ಲಿ ಜಾಗ್ರತವಾದವು. ಸ್ವಾಮಿ ವಿವೇಕಾನಂದರ 'ಅಭೀ;' ಎಂಬ ಸಂದೇಶದಿಂದ ಹುಟ್ಟಿಕೊಂಡ ಕವನ.

"ಭಯ ಪಡಬೇಡ – ಇಲ್ಲ ಅಪಾಯ
ಜಯಿಸಲು ನಿನಗೆ – ಇಹುದು ಉಪಾಯ
ತ್ಯಾಗದಿ ಭೋಗ – ಭೋಗದಿ ತ್ಯಾಗ
ಇದನರಿವುದೆ ತಾ – ನೆಂಬುದು ಯೋಗ"

ಇಂತಹ ಕವನಗಳು ಹುಟ್ಟಿಕೊಂಡವು. ಅಂತೆಯೇ 'ಎದ್ದೇಳು' ಎಂಬ ಮತ್ತೊಂದು ಕವನ.

"ಎದ್ದೇಳು ಎದ್ದೇಳು
ಬಿದ್ದಿರುವೆ ಏಕೆ?
ನಿದ್ದೆಯಿಂದೆದ್ದೇಳು
ಮೊದ್ದುತನವೇಕೆ?"(ನೆನಪಿನ ದೋಣಿಯಲ್ಲಿ ಪುಟ ೬೯೧)

ಕುವೆಂಪು ಅವರ ಆ ಕಾಲದ ಚೇತನವನ್ನೆಲ್ಲ ವಿವೇಕಾನಂದರ ತೇಜಸ್ಸೇ ತುಂಬಿಕೊಂಡಿದವು ಎಂಬುದಕ್ಕೆ ಇವುಗಳೆಲ್ಲ ನಿದರ್ಶನವೆನ್ನಬಹುದು. ಕುವೆಂಪು ತಮ್ಮ ನೆನಪಿನ ದೋಣಿಯಲ್ಲಿ ದಿನಚರಿಯ ಕೊನೆಗೆ ಪ್ರತಿದಿನ "ಜಯ್ ಸ್ವಾಮಿ

ವಿವೇಕಾನಂದ! ಜಯ್ ಶ್ರೀಕೃಷ್ಣ!" ಎಂದು ಕೊನೆಗೊಳ್ಳುವುದು. ಮುಂದೆ ಈ ಹೆಸರುಗಳ ಜೊತೆ ಪರಮಹಂಸರ ಹೆಸರು ಸೇರುವುದು. ವಿದ್ಯಾರ್ಥಿಯಾಗಿದ್ದಾಗ ಕುವೆಂಪು ಇಂಗ್ಲೀಷ್, ಕನ್ನಡ ಎರಡರಲ್ಲೂ ಕವನ ರಚನೆ ಮಾಡುತ್ತಿದ್ದರು. ಇಂಗ್ಲೀಷ್ ಕವನದ ವಸ್ತು ಲೋಕ ಪ್ರಧಾನವಾಗಿರುವುದು. ಕನ್ನಡ ಕವನಗಳಲ್ಲಿ ವಿಶೇಷವಾಗಿ ಭಕ್ತಿಯ, ಆಧ್ಯಾತ್ಮಿಕವಾದ ಮತ್ತು ಭಗವತ್ ಪರವಾದ ಭಾವನೆಗಳಿರುವುದನ್ನು ಕಾಣಬಹುದು.

ಸ್ವಾಮಿ ಸಿದ್ದೇಶ್ವರಾನಂದರ ಮೂಲಕ ಕುವೆಂಪು ಅವರಿಗೆ ಶ್ರೀ ರಾಮಕೃಷ್ಣಾಶ್ರಮದ ಸಂಪರ್ಕ ದೊರೆಯುವುದು. ಅನಾರೋಗ್ಯ ನಿಮಿತ್ತ ಆಶ್ರಮ ವಾಸ ಪ್ರಾರಂಭವಾಗುವುದು. ತಮ್ಮ ಬದುಕಿನಲ್ಲಿ 'ಅದೊಂದು ಮಹತ್ತರ ಕ್ರಾಂತಿಕಾರಕ ಪರಿವರ್ತನೆ ವರ್ಷ'ವೆನ್ನುವರು. ಆಶ್ರಮವಾಸಿದ ಮೇಲೆ ಅಧ್ಯಾತ್ಮ ಜೀವನಕ್ಕೆ ಆಳ ಅಗಲ ಸಮರ್ಪಿತವಾಯಿತು. "ಶ್ರೀರಾಮಕೃಷ್ಣಾಶ್ರಮ ನಿವಾಸಿಯಾದ ಮೇಲೆ ಆ ಅಂತರ್ ವೈಶಾಲ್ಯಕ್ಕೆ ಬಾಹ್ಯ ವಿಸ್ತೀರ್ಣದ ವೈವಿಧ್ಯವೂ ಲಭಿಸಿ, ಯಾವುದು ಸ್ವಾಪ್ನಿಕ ಮಾತ್ರವಾಗಿರುತ್ತಿತ್ತೋ ಅದಕ್ಕೆ ಜಾಗ್ರತ್ ಸತ್ತೆಯ ವಾಸ್ತವ ಘನತ್ವವೂ ದೊರಕೊಂಡಂತಾಯ್ತು. ದಿಕ್ಕುಗೆಟ್ಟಂತಾಗಿ ಅಲೆಯುತ್ತಿದ್ದ ಸಾಗರ ಪ್ರವಾಸಿಗೆ ಉತ್ತರ ಮುಖಿಯೂ ಲಭಿಸಿ, ಧ್ರುವತಾರೆಯೂ ಗೋಚರಿಸಿದಂತಾಯ್ತು" (ನೆನಪಿನ ದೋಣಿಯಲ್ಲಿ ಪುಟ ೮೧೨) ಕುವೆಂಪು ಅವರಿಗೆ ಆಶ್ರಮವಾಸವು ಅವರ ಒಳ ಬಾಳಿನ ಕೇಂದ್ರವಾಯಿತು. ಮೈಲಿಗೆಯಾಗಿ ಮತ್ತೊಮ್ಮೆ ಅನಾರೋಗ್ಯಕ್ಕೆ ಒಳಗಾಗುತ್ತಾರೆ ಕುವೆಂಪು. ಆಗ ಮೈಲಿಗೆಯಾದವರನ್ನು ಪ್ರತ್ಯೇಕವಾಗಿ ಗುಡಿಸಲಿನಲ್ಲಿ ಇರಿಸುತ್ತಿದ್ದರು. ಆಗ ಅವರ ಬಳಿ ಸ್ವಾಮಿಜಿ, ಗುರು ಮಹಾರಾಜ್ – ಮಹಾಮಾತೆಯರ ಚಿಕ್ಕ ಪಟಗಳಿದ್ದ ಚಿತ್ರಮಾಲಿಕೆ ಸುಮಾರು ಮೂವತ್ತು ದಿನಗಳವರೆಗೆ ಅವರ ಕಂಕುಳಲ್ಲಿ ಇತ್ತು. ಮನಸ್ಸಾದಾಗ ಅದನ್ನು ತೆಗೆದು ದೃಷ್ಟಿ ಪೂಜೆ ಸಲ್ಲಿಸುತ್ತಿದ್ದರಂತೆ. ಅಂತೂ ಆಶ್ರಮ ಪ್ರವೇಶದಿಂದ ಕುವೆಂಪು ಬದುಕುನಲ್ಲಿ ಒಂದು ದಿವ್ಯ ಅಧ್ಯಾಯವೇ ಪ್ರಾರಂಭವಾಯಿತು.

'ವಿಶ್ವವಿದ್ಯಾನಿಲಯೆ ಭಗವತಿ ಶ್ರೀ ಸರಸ್ವತಿಗೆ' ಎಂಬ ಕುವೆಂಪು ಕವನವೊಂದರ ಈ ಸಾಲುಗಳು. ಈ ಸಂಬಂಧದಲ್ಲಿ ಸ್ಮರಣಯೋಗ್ಯ;

"ಚಿದ್ರೂಪಿಣಿ ಭವತಾರಿಣಿ ಉತ್ತರೋತ್ತರೆ
ಕವಿಯನೆತ್ತಿ ರಕ್ಷಿಸಲೈ

ಬಂದವಳಿತ್ತ ದಕ್ಷಿಣಕ್ಕೆ
ಶ್ರೀವಿವೇಕ ಪರಮಹಂಸ ದಕ್ಷಿಣೇಶ್ವರೆ
ಕಣ್ದೆರೆಯಿತು ಬೋಧನಾ
ಗರಿಗೆದರಿತು ಸಾಧನಾ
ಅಲೋಕಲೋಕ ಯಾತ್ರಿಯಾಯ್ತು ದಿವ್ಯದರ್ಶನ"

ಕುವೆಂಪು ಅವರಿಗೆ "ಸ್ವಾಮಿ ವಿವೇಕಾನಂದರು 'ಉತ್ಸವ ವಿಗ್ರಹ'ವಾದರೆ ಶ್ರೀರಾಮಕೃಷ್ಣರು 'ಮೂಲಮೂರ್ತಿ'ಯಾಗಿದ್ದರು. (ಕುವೆಂಪು ಸಾಹಿತ್ಯಾಲೋಕ, ಪು.೩೪೪) ಇವರಿಬ್ಬರು ಜನಸಾಮಾನ್ಯರ ಲೌಕಿಕ ಕ್ಷೇಮ, ಅಭ್ಯುದಯಗಳನ್ನು ಯಾವತ್ತೂ ತಿರಸ್ಕರಿಸಿದವರಲ್ಲ. ವಿವೇಕಾನಂದರಲ್ಲಿ ಸಾಮಾಜಿಕ ಪ್ರಜ್ಞೆ ದಟ್ಟವಾಗಿತ್ತು. ಸಮಾಜವನ್ನು ಚಿಕಿತ್ಸಿಕ ದೃಷ್ಟಿಯಿಂದ ನೋಡುವ, ಯುವಕರಿಗೆ ಎಚ್ಚರಿಕೆಯನ್ನು ನೀಡುವ ಸಾಮಾಜಿಕ ಕಾಳಜಿಯನ್ನು ವಿವೇಕಾನಂದರಲ್ಲಿ ಧಾರಾಳವಾಗಿ ಕಾಣಬಹುದು. "ಹಿಂದೂ ಸಮಾಜವು ತನ್ನ ತಪೋನಿದ್ರೆಯಿಂದ ಏಳಬೇಕು. ಕಣ್ದೆರೆದು ಸುತ್ತಮುತ್ತಲಿನ ಪ್ರಪಂಚವನ್ನು ನೋಡಬೇಕು. ಕೈಕಾಲುಗಳನ್ನು ಕೊಡಹಿ ಓಡಾಡಬೇಕು, ಜಡತೆಯೇ ಶಾಂತಿಯೆಂಬುದನ್ನು, ಜೀರ್ಣತೆಯೇ ಪೂಜ್ಯತೆಯೆಂಬುದನ್ನೂ ಬಿಡಬೇಕು. ಕೊಳಕು ಹುಣ್ಣುಗಳನ್ನು ತೊಳೆಯಬೇಕು. ಮಣಕು ಬೊಂತೆಗಳನ್ನು ಬಿಸಾಡಬೇಕು, ಕಿಟಕಿ ಬಾಗಿಲುಗಳನ್ನು ತೆರೆದು ಹೊರಗಿನ ಹೊಸ ಗಾಳಿ ಬೆಳಕುಗಳನ್ನು ತನ್ನ ಮನೆಯೊಳಕ್ಕೆ ಬರಮಾಡಿಕೊಳ್ಳಬೇಕು. ಇದು ಸಾರ್ಥಕವಾಗುವ ಬದುಕಿಗೆ ದಾರಿ" (ಸ್ವಾಮಿ ವಿವೇಕಾನಂದ, ಕುವೆಂಪು, ಪು–೪) ಹೀಗೆ ಸಮಾಜ ಸುಧಾರಣೆಗಳ ಅವಶ್ಯಕತೆಯನ್ನು ತೋರಿಸಿಕೊಟ್ಟರು. ಸ್ವಧರ್ಮದ ಶ್ರೇಷ್ಠತೆಯನ್ನು ಪ್ರಕಾಶಪಡಿಸಲು ಉತ್ಸಾಹಿಗಳಾಗಬೇಕೆಂದರು. ಅಲ್ಲದೆ ಸ್ವಸಮಾಜದ ದೋಷ ದೌರ್ಬಲ್ಯಗಳನ್ನು ತೋರಿಸಿಕೊಟ್ಟು ಪರಿಹಾರ ಕಾರ್ಯಕ್ಕೆ ಅಣಿಯಾಗಬೇಕೆಂದರು. ವಿವೇಕಾನಂದರ ಈ ಎಲ್ಲಾ ಯೋಚನಾ ಧಾರೆಯಿಂದ ಪೂರ್ತಿಯಾಗಿ ಸ್ಫೂರ್ತಿಗೊಳಗಾದರು ಕುವೆಂಪು.

ಸಮನ್ವಯ ದೃಷ್ಟಿ, ಸರ್ವೋದಯ ಚಿಂತನೆ, ಪೂರ್ಣದೃಷ್ಟಿ ಇವುಗಳು ಕುವೆಂಪು ಸಾಹಿತ್ಯದ ಮೂರು ಕಣ್ಣುಗಳಾಗಿದ್ದವು. ಸಮನ್ವಯ ತತ್ವವನ್ನು ಕುವೆಂಪು 'ಸರ್ವಧರ್ಮಸಮನ್ವಯಾಚಾರ್ಯ'ರಾದ ಪರಮಹಂಸರಿಂದ ರೂಢಿಸಿಕೊಂಡರು. 'ಸ್ವಾಮಿ ವಿವೇಕಾನಂದ' ಜೀವನ ಚರಿತ್ರೆಯಲ್ಲಿ 'ಕರೆಯುತಿದೆ ಯುಗವಾಣಿ' ಎಂಬ ಅಂತಿಮ ಅಧ್ಯಾಯದಲ್ಲಿ ಕುವೆಂಪು ವಿವೇಕಾನಂದರ ಬಗ್ಗೆ ಈ ರೀತಿ ಹೇಳುತ್ತಾರೆ.

ವಿವೇಕಾನಂದರಲ್ಲಿ "ಪ್ರಾಚ್ಯ, ಪಾಶ್ಚಾತ್ಯ, ಹಿಂದೂ ಕ್ರೈಸ್ತ, ಇಸ್ಲಾಂ, ಬೌದ್ಧ, ಮತ ತತ್ತ್ವ, ವಿಜ್ಞಾನ, ಕಲಾ, ಇಹ, ಪರ, ದೇಹ, ಆತ್ಮ, ನೂತನ, ಪುರಾತನ – ಎಲ್ಲವೂ ಸಮನ್ವಯಗೊಂಡಿವೆ". ಈ ಸಮನ್ವಯ ದೃಷ್ಟಿ ಕುವೆಂಪು ಅವರನ್ನು ನಿಸ್ಸಂದೇಹವಾಗಿ ಪ್ರಭಾವಿಸಿದೆ.

ಸರ್ವೋದಯ ಚಿಂತನೆ. ಇದು ಇಂದಿನ ಯುಗ ಧರ್ಮವಾಗಿದೆ. ಈ ಚಿಂತನೆ ಕುವೆಂಪು ಅವರ ಸಾಹಿತ್ಯ ಲೋಕದಲ್ಲಿ ಅಲ್ಲಲ್ಲಿ ಕಾಣಸಿಗುವ ಪ್ರಮುಖ ತತ್ತ್ವವಾಗಿದೆ. ಅವರ 'ಶ್ರೀರಾಮಾಯಣದರ್ಶನಂ' ಮಹಾಕಾವ್ಯದಲ್ಲಿ ಸರ್ವೋದಯ ಸಂದೇಶವು ಕೇಳಿಸುತ್ತಿರುವುದು. "ಪಾಪಿಗುದ್ಧಾರವಿಹುದೌ ಸೃಷ್ಟಿಯ ಮಹದ್‌ವ್ಯೂಹ ರಚನೆಯೊಳ್" ಈ ಸೂಕ್ತಿ ಸ್ವಾಮಿ ವಿವೇಕಾನಂದರ "ಪಾಪಿದೇವೋ ಭವ" (ಪಾಪಿಗಳು ನಿಮ್ಮ ದೇವರಾಗಲಿ) ಎಂಬ ಕರೆಯ ಮಾರ್ದನಿಯಾಗಿರುವುದು. ಅಲ್ಲದೆ 'ಶ್ರೀರಾಮಾಯಣದರ್ಶನಂ' ಎಂಬ ಮಹಾಕಾವ್ಯಕ್ಕೆ ಪ್ರೇರಕ ಸೂತ್ರವಾಗಿದೆ. ಕುವೆಂಪು ಸಾಹಿತ್ಯದಲ್ಲಿ ಪಾಪಿಗಳಿಗಷ್ಟೇ ಅಲ್ಲ, ದೀನದಲಿತರಿಗೂ ಉದ್ಧಾರವಿದೆ. ಈ ರೀತಿ ಸರ್ವೋದಯ ತತ್ತ್ವ ವ್ಯಾಪಕವಾದದ್ದು.

ತಮ್ಮ 'ಶ್ರೀ ಸಾಮಾನ್ಯರ ದೀಕ್ಷಾ ಗೀತೆ'ಯಲ್ಲಿ ಕುವೆಂಪು

"ಸರ್ವೋದಯ, ಸರ್ವೋದಯ
ಸರ್ವೋದಯ ಯುಗಮಂತವು
ಇನ್ನಾಯಿತು ಓರೋರ್ವರ ಗರ್ವದ ಕಾಲ,
ಇದು ಸರ್ವರ ಕಾಲ"

ಸ್ವಾತಂತ್ರ್ಯ, ಸಮಾನತೆಗಳ ಮೇಲೆ, ಸಾಮಾನ್ಯರ ಉದ್ಧಾರದ ಮೇಲೆ ಹೀಗೆನ್ನುವರು–

"ಸರ್ವರಿಗೆ ಸಮಬಾಳು ಸರ್ವರಿಗೆ ಸಮಪಾಲು
ಎಂಬ ನವಯುಗವಾಣಿ ಘೋಷಿಸಿದೆ ಕೇಳಿ"

ವಸ್ತುತಃ ಸರ್ವೋದಯ ಮಂತ್ರದ ಉಚ್ಚಾರಣೆ, ಸರ್ವೋದಯ ತತ್ವದ ಪ್ರತಿಪಾದನೆ ನಡೆದದ್ದು ಶ್ರೀರಾಮಕೃಷ್ಣ – ವಿವೇಕಾನಂದರಿಂದ. ಸರ್ವೋದಯವೆಂದರೆ, "ಸರ್ವರಿಂ ಸರ್ವರಾ ಉದ್ಧಾರ" ಎನ್ನುತ್ತಾರೆ ಕುವೆಂಪು.

ಕುವೆಂಪು ಅಸಹಾಯಕರನ್ನು, ದುರ್ಬಲರನ್ನು, 'ಶ್ರೀಸಾಮಾನ್ಯ'ನೆಂದು ಕರೆದರು. "ಶ್ರೀ ಸಾಮಾನ್ಯನೆ ಭಗವದ್ಧನ್ಯ" ಎಂದರು. ಅಸಹಾಯಕ, ನಿರ್ಗತಿಕ, ದುರ್ಬಲ ಮನುಷ್ಯನ ಪ್ರಾಥಮಿಕ ಬೇಡಿಕೆಗಳಾದ ಅನ್ನ, ಬಟ್ಟೆಗಳ ಪೂರೈಕೆಗೆ ಆದ್ಯತೆ ನೀಡಬೇಕೆಂದರು. ಅವರೊಂದು ಕಡೆ "ಮೊದಲನೆ ದೇವರು ಈ ಹಣ್ಣುಮುದುಕಿ ನೀಡಜ್ಜಿಗೆ ಭಿಕ್ಷೆ" ಎಂದರು. ದುರ್ಬಲವಾಗಿರುವ ಮುದುಕಿಯಲ್ಲಿ ಪರಮಾತ್ಮನನ್ನು ಕಂಡರು. ಇನ್ನೊಂದು ಕಡೆ "ಇಂದು ನೆತ್ತರು ಚೆಲ್ಲಿ ಮುಂದೆ ಬಡ ಮಕ್ಕಳಿಗೆ ಹೊಟ್ಟೆಗನ್ನ, ಮೈಗೆ ಬಟ್ಟೆಯನು ನೀಡಿ" ಎಂದು ಕರೆಕೊಟ್ಟರು. ತಮ್ಮತನಕ್ಕೆ ಹೋರಾಟ ಮಾಡಿ ಮುಂದೆ ಬರುವ ಅಸಹಾಯಕ ಮಕ್ಕಳನ್ನು ರಕ್ಷಿಸಬೇಕೆಂದರು.

ಸ್ವಾಮಿ ವಿವೇಕಾನಂದರು 'ದರಿದ್ರ ನಾರಾಯಣ' ಎಂಬ ಹೊಸ ದೇವರನ್ನೇ ಹುಟ್ಟು ಹಾಕಿದರು. "ದರಿದ್ರ ದೇವೋ ಭವ"ವೆಂದರೆ ಬಡವರು ನಿಮ್ಮ ದೇವರಾಗಲಿ ಎಂಬ ಮಂತ್ರವನ್ನು ಪಠಿಸಿದರು. ಧರ್ಮವು ಭರತಖಂಡದ ಉಸಿರು, ಆದರೆ ಮೊದಲು ಅನ್ನ ಆಮೇಲೆ ಅಧ್ಯಾತ್ಮ ಎಂದು ಹೇಳಲು ಮರೆಯಲಿಲ್ಲ. ಹಸಿದ ಹೊಟ್ಟೆಗೆ ವೇದಾಂತವನ್ನು ಬೋಧಿಸುವುದು ಮಹಾಪಾಪವೆಂದರು. ಹಸಿವಿನ ತೀವ್ರತೆ ಮುಂದೆ ವೇದಾಂತ ರುಚಿಸುವುದಿಲ್ಲ. ಆದುದರಿಂದ ಬಡವರ ಉದ್ಧಾರವೇ ಧರ್ಮದ ಉದ್ಧಾರವೆಂದರು. ಸಮಾಜವಾದಿ ಅನಿಸಿಕೊಂಡ ವಿವೇಕಾನಂದರು "ಜನಸಾಮಾನ್ಯರು ಮತ್ತು ಬಡವರು ಮೇಲೇಳಬೇಕು ಎಂಬ ಸಂಕಲ್ಪವನ್ನು ವ್ಯಕ್ತಪಡಿಸಿದರು. ಹೀಗೆ ಜನಸೇವೆಯೇ ನಿಜವಾದ ಪೂಜೆಯೆಂದು ತೀರ್ಮಾನಿಸಿದರು. ಮೂಲತಃ ಶ್ರೀರಾಮಕೃಷ್ಣ ಚಿಂತನೆ ಧಾಟಿಯಲ್ಲಿ ಇದು ಒಂದು ಅಂಶ. ದೇವರನ್ನು ಅರಸುವುದಾದರೆ, ಮೊದಲು ಮನುಷ್ಯನಲ್ಲಿ ಅರಸು" ದೀನದಲಿತರೆಂದರೆ, ಪರಮಹಂಸರಿಗೆ ಮಮತೆ, ಮರುಕ, ಕರುಣೆ. ಅವರೊಮ್ಮೆ ಚಂಡಾಲನೊಬ್ಬನ ಶೌಚಾ ಗೃಹವನ್ನು ತಮ್ಮ ತಲೆಗೂದಲಿನಿಂದ ಸ್ವಚ್ಛಗೊಳಿಸಿದರು. ಹೀಗೆ ಸೇವಾತತ್ತ್ವಕ್ಕೆ ಜೀವಂತ ಮತ್ತು ಜ್ವಲಂತ ನಿದರ್ಶನರಾದರು ಪರಮಹಂಸರು.

ಮೌಢ್ಯ ವಿರೋಧಿ ಕುವೆಂಪು "ಮೌಢ್ಯತೆಯ ಮಾರಿಯನು ಹೊರದೂಡಲೈತನ್ನಿ" ಎಂದು ಕರೆ ನೀಡುವರು. ಮೌಢ್ಯವು ಅಜ್ಞಾನವಾಗಿರುವುದು. ಜನರಲ್ಲಿ ಜ್ಞಾನವನ್ನು ಹುಟ್ಟುಹಾಕುವುದರಿಂದ ಮೌಢ್ಯ ತೊಲಗುವುದು. ಮೌಢ್ಯವು ಮಾನವನ ಮಹಾಶತ್ರುವೆಂದು ವಿವೇಕಾನಂದರು ಘೋಷಿಸುವರು. ಮೌಢ್ಯವು ನಮ್ಮ ಚಿಂತನಾ ಲಹರಿಯನ್ನು ಕುಬ್ಜಗೊಳಿಸುವುದು. ಮೌಢ್ಯತೆಯಿಂದ ವ್ಯಕ್ತಿಯ ಮಾನಸಿಕ ಬೆಳವಣಿಗೆ ನಿಲ್ಲುವುದು. ಅದಕ್ಕಾಗಿ ಬಡತನ, ಅಜ್ಞಾನಗಳ ನಿವಾರಣೆಗೆ ಯುವಕರು

ಪಣತೊಟ್ಟು ಹೋರಾಡಬೇಕೆಂದರು. ಕುವೆಂಪು ಅವರ ಚಿಂತನೆಯ ಮೇಲೆ ಸ್ವಾಮಿ ವಿವೇಕಾನಂದರ ಪ್ರಭಾವ ಕೆಲವೊಂದು ಕಡೆ ಅತ್ಯಂತ ತೀವ್ರವಾಗಿರುವುದು. ಎಷ್ಟೋ ಕಡೆ ವಿವೇಕಾನಂದರನ್ನು ಕುವೆಂಪು ಅನುಕರಣೆ ಮಾಡುತ್ತಿದ್ದಾರೆ ಎಂದೆನಿಸುತ್ತದೆ.

ನಿದರ್ಶನವಾಗಿ ಕುವೆಂಪು

"ನೂರು ದೇವರನ್ನೆಲ್ಲ ನೂಕಾಚೆ ದೂರ;
ಭಾರತಾಂಬೆಯ ದೇವಿ ನಮಗಿಂದು ಪೂಜಿಸುವ ಬಾರ"

ಎನ್ನುವಲ್ಲಿ ಮೂವತ್ತಮೂರು ಕೋಟಿ ದೇವರುಗಳಿಗಿಂತ ರಾಷ್ಟ್ರ ರಕ್ಷಣೆಯ ಪೂಜೆಗೆ ಕರೆ ನೀಡುತ್ತಾರೆ. ವಿವೇಕಾನಂದರ ಈ ಹೇಳಿಕೆಯನ್ನು ಇಲ್ಲಿ ಗಮನಿಸಬಹುದು. "ಇನ್ನೊಂದು ನೂರು ವರ್ಷಗಳವರೆಗೆ ನಿಮ್ಮ ದೇವ ದೇವತೆಗಳನ್ನೆಲ್ಲ ಮನಸ್ಸಿನಿಂದ ತಳ್ಳಿ ಬಿಡಿ. ನಮ್ಮ ಭಾರತಾಂಬೆಯೇ ನಮ್ಮ ದೇವರಾಗಲಿ ಎನ್ನುವಲ್ಲಿ ಸಾಮ್ಯವನ್ನು ಕಾಣಬಹುದು.

"ಕ್ಲೈಬ್ಯವನು ಸಂಹರಿಸೊ ದೌರ್ಬಲ್ಯವನು ದಹಿಸೊ
ಹೃದಯಕ್ಕೆ ಪೌರುಷವ ದಯಪಾಲಿಸೊ"

ಎಂಬ ಕುವೆಂಪು ಕವನದಲ್ಲಿ ವಿವೇಕಾನಂದರು ಯುವಕರಿಗೆ ಕರೆ ನೀಡಿದ ಕೆಚ್ಚನ್ನು ಕಾಣಬಹುದು. "ಏಳಿ ಜಾಗೃತರಾಗಿ, ದುರ್ಬಲತೆಯ ಪರವಶತೆಯಿರದ. ಯಾರು ದುರ್ಬಲರಲ್ಲ". "ಏಳಿ, ಜಾಗೃತರಾಗಿ ಗುರಿ ಸೇರುವವರೆಗೂ ನಿಲ್ಲಬೇಡಿ". ವಿವೇಕಾನಂದರ ಉಪಾನ್ಯಾಸದಲ್ಲಿ ಇಂತಹ ಕೆಚ್ಚೆದೆಯ ಎಚ್ಚರಿಕೆಗಳನ್ನು ಧಾರಾಳವಾಗಿ ಗಮನಿಸಬಹುದು.

ಸ್ವಾಮಿ ವಿವೇಕಾನಂದರಿಗೆ ಧರ್ಮವು ಉಸಿರಾಗಿತ್ತು. ಧರ್ಮದ ಮೂಲಕ ರಾಷ್ಟ್ರ ಜೀವನವನ್ನು ಕಂಡರು. ಹಿಂದೂ ಧರ್ಮದ ಸುಧಾರಣೆಯನ್ನು ವೈಚಾರಿಕ ನೆಲೆಯಲ್ಲಿ ಮಂಡಿಸುತ್ತ ರಾಷ್ಟ್ರದ ಆತ್ಮಶಕ್ತಿಯನ್ನು ಜಾಗೃತಗೊಳಿಸಿದರು. ಕುವೆಂಪು ಅವರು ರಾಷ್ಟ್ರೀಯತೆಯ ಸಂದರ್ಭದಲ್ಲಿ ವಿವೇಕಾನಂದರಂತೆ ಗಾಂಧಿ, ಠಾಕೂರ್‌ರ ವಿಚಾರಧಾರೆಯಿಂದ ಪ್ರೇರಿತರಾಗಿರುವರು. ಆ ಮೂಲಕ 'ರಾಷ್ಟೀಯ' ಹಾಗೂ 'ವಿಶ್ವಾತ್ಮಕ' ಪರಿಕಲ್ಪನೆಯನ್ನು ಕಂಡುಕೊಂಡರು ಕುವೆಂಪು. ಗಾಂಧೀಜಿ

ಪ್ರತಿಪಾದಿಸಿದ ರಾಷ್ಟ್ರೀಯವಾದ ವಿಶಾಲವೂ ಮಾನವೀಯವೂ ಸಮಾಜಮುಖಿಯಾಗಿದ್ದುವು. ಹೀಗೆ ಹೆಚ್ಚು ವ್ಯಾಪಕವಾದುದಾಗಿತ್ತು. ಹೀಗೆಯೇ ಠಾಕೂರರ ನಿಲುವು ಕೂಡ. ಕುವೆಂಪು ಅವರದ್ದು ಕನ್ನಡ, ಭಾರತ ಹಾಗೂ ಇಡೀ ವಿಶ್ವವನ್ನೊಳಗೊಂಡ ಉದಾತ್ತ ಭವ್ಯ ಪರಿಕಲ್ಪನೆ. ಇಲ್ಲಿ ನಾಡು ನುಡಿ ಜನತೆಯ ಏಳಿಗೆಗಾಗಿ ಹೋರಾಡುವ ಕೆಚ್ಚಿರುವುದು. ಲೌಕಿಕ ಮತ್ತು ಅಲೌಕಿಕಗಳನ್ನು ಬೆಸೆಯುವ ವಿರಾಟ್ ಕಲ್ಪನೆ ಇರುವುದು. ಅವರು ತಮ್ಮ ಭಾಷಣದಲ್ಲಿ ದೇಶ ದೇವಿಯ ಪೂಜೆಗೆ ಬನ್ನಿ ಎಂದು ಕರೆ ನೀಡುತ್ತಾರೆ. "ಭರತಖಂಡ"ವು ಒಂದು ಜನಾಂಗವೂ ಅಲ್ಲ, ಅದು ಅನೇಕ ಜನಾಂಗಗಳ ಜನಾಂಗ...... ಸಮಾಜವೆಂದರೇನು ಅಂತಹ ಅಸಂಖ್ಯ ಸಂಸಾರಗಳ ಕೂಟವಲ್ಲವೆ? ಎಲ್ಲ ಸಂಸಾರಗಳ ಸುಖವೆ ತಾನೆ ಒಟ್ಟು ಸಮಾಜದ ಸುಖ (ಸಾಹಿತ್ಯ ಪ್ರಚಾರ; ಕುವೆಂಪು, ಪು.–೭೦–೭೧) ವಿವೇಕಾನಂದರು ಜನಾಂಗಗಳ ಆಧ್ಯಾತ್ಮಿಕ ಶಕ್ತಿಯೇ ರಾಷ್ಟ್ರೀಯ ಶಕ್ತಿಯೆಂದು ಪರಿಗಣಿಸಿದರು. ತಮ್ಮ ನೆನಪಿನ ದೋಣಿಯಲ್ಲಿ ಹೇಳುವ ಪರಿಕಲ್ಪನೆಯನ್ನು ಇಲ್ಲಿ ಗಮನಿಸಬಹುದು. ಮೇಲಿನ ಎಲ್ಲಾ ರಾಷ್ಟ್ರಚಿಂತನೆಗಳು 'ಭಾವಾಂಶ – ಕಲ್ಪನಾಂಶಗಳೊಡನೆ ಚಿಂತನಾಂಶವಾಗಿ ಸೇರಿ ರೂಪಾಂಶವನ್ನು ಹೊಂದಿ' ಅವರ ಕೃತಿಗಳಲ್ಲಿ ಮೂಡಿ ಬಂದಿದೆ. (ನೆನಪಿನ ದೋಣಿಯಲ್ಲಿ ಪು.–೨೮೧).

ಕುವೆಂಪು ಅವರ ಪ್ರಸಿದ್ಧವಾದ ವಿಶ್ವಮಾನವ ಸಂದೇಶದ ಮೂಲ ಪ್ರೇರಣೆ ಶಕ್ತಿಯು ವಿವೇಕಾನಂದರಲ್ಲಿ ಅಡಗಿರುವುದು. ಪರಮಹಂಸರು ಸರ್ವಧರ್ಮಗಳ ಏಕತೆಯನ್ನು ಒತ್ತಿ ಹೇಳಿದರು. ಬೇರೆ ಬೇರೆ ಧರ್ಮಗಳ ಗುರಿ ಒಂದೇ. ಅದುವೇ ವಿಶ್ವದ ಅಖಂಡತ್ವ, ಇದರ ಅಂಗವಾಗಿ ವಿಶ್ವ ಸಂಸ್ಥೆ, ವಿಶ್ವ ಯೋಜನೆ, ವಿಶ್ವ ಕಾನೂನುಗಳು ಅವಶ್ಯಕವೆಂದರು. ಎಲ್ಲರೊಳಗಿರುವ ಆತ್ಮ ಅನಂತವಾದದು, ವಿಶ್ವವ್ಯಾಪ್ತಿಯಾಗಿರುವುದು ಎಂಬ ತತ್ತ್ವದ ಮೂಲಕ ವಿಶ್ವದ ಅಖಂಡತ್ವವನ್ನು ಸಾರಿದರು. ಭಾರತೀಯ ಪ್ರಜೆಗೆ ಮತಾನುಸರಣೆಗೆ ಸ್ವಾತಂತ್ರ್ಯವಿದೆ. ಆದರೆ ಯಾವುದೋ ಒಂದು ಮತಕ್ಕೆ ಅಂಟಿಕೊಂಡು ಆತ ಕುಬ್ಜನಾಗಬಾರದು. ವಿಶ್ವ ವಿಶಾಲ ಹೃದಯವಿರಬೇಕು. ಬರಿ ಭಾರತೀಯರನ್ನಷ್ಟೇ ಪ್ರೀತಿಸಿದರೆ ಸಾಲದು ವಿಶ್ವ ಮಾನವನನ್ನು ಪ್ರೀತಿಸಬೇಕು. ಅಂದರೆ ವಿಶ್ವಮಾನವನಾಗಬೇಕು. ಇದು ಸರ್ವರ ಉದ್ಧಾರಕ್ಕೆ ಸೇತು. ಈ ತತ್ತ್ವವನ್ನೇ ಕುವೆಂಪು ವಿಶ್ವಕ್ಕೆ ಕೊಡುಗೆಯಾಗಿ ನೀಡಿದ್ದಾರೆ ಇದನ್ನೇ ಪೂರ್ಣದೃಷ್ಟಿಯೆಂದು ಕರೆದರು.

"ಗುಡಿ ಚರ್ಚು ಮಸೀದಿಗಳ ಬಿಟ್ಟು ಹೊರಬನ್ನಿ
ಸಿಲುಕದಿರಿ ಮತವೆಂಬ ಮೋಹದ ಜ್ಞಾನಕ್ಕೆ
ಮತಿಯಿಂದ ದುಡಿಯಲೈ ಲೋಕ ಹಿತಕ್ಕೆ,
ಆ ಮತದ ಈ ಮತದ ಹಳೆ ಮತದ ಸಹವಾಸ
ಸಾಕಿನ್ನು ಸೇರಿರೈ ಮನುಜ ಮತಕೆ
ಓ ಬನ್ನಿ ಸೋದರರೆ, ವಿಶ್ವ ಪಥಕ್ಕೆ"

ಎಂದು ಓ ಬನ್ನಿ ಸೋದರರೆ, ಬೇಗ ಬನ್ನಿ" ಎಂಬ ಕವನದಲ್ಲಿ ಕರೆ ನೀಡಿದ್ದಾರೆ. ಭಾರತೀಯರಲ್ಲಿ ಅನಿಕೇತನವಾದ ಚೇತನ ಅದು ಜಗತ್ ಕಲ್ಯಾಣವನ್ನು ಹಾರೈಸಬೇಕು ಇದು ವಿವೇಕಾನಂದರ ಧ್ವನಿಯು ಹೌದು.

ಒಟ್ಟಿನಲ್ಲಿ ಕುವೆಂಪು ಕಲ್ಪಿಸಿದ್ದು, ಮೇಲುಕೀಳಿಲ್ಲದ ಶೋಷಣೆ ರಹಿತ ಸಮಾಜ, ಮೌಢ್ಯರಹಿತ ವೈಜ್ಞಾನಿಕ ದೃಷ್ಟಿ, ಸಮನ್ವಯ ರಾಷ್ಟ್ರದ ಚಿಂತನೆ, ಪೂರ್ಣದೃಷ್ಟಿಯ ಶ್ರಮಜೀವಿ ಪ್ರಜ್ಞೆಯುಳ್ಳ ಸ್ವತಂತ್ರ ರಾಷ್ಟ್ರ. ಈ ಎಲ್ಲಾ ರೀತಿಯ ಚಿಂತನೆಗಳು ಪರಮಹಂಸ, ವಿವೇಕಾನಂದರಿಂದ ಪ್ರೇರಿತವಾದ ಕಲ್ಪನೆಗಳು. ಅದು ಅಲ್ಲದೆ ಕುವೆಂಪು ಅವರಿಗೆ ಗುರುದೇವ ಪರಮಹಂಸರ ಸಮನ್ವಯ ದೃಷ್ಟಿ ಹೃದಯಕ್ಕೆ ತೃಪ್ತಿಯನ್ನು ನೀಡಿ, ಅವರ ಬದುಕನ್ನು ತುಂಬಿಕೊಂಡಿತು. ಆದರೆ ಅರವಿಂದರ "ದಿವ್ಯ ಜೀವನ" (The Life Divine) ವನ್ನು ಓದಿದ ನಂತರ ಪರಮಹಂಸರ ಸಮನ್ವಯ ದೃಷ್ಟಿಗೆ ತಾರ್ಕಿಕ ತೃಪ್ತಿಯೊದಗಿತ್ತೆನ್ನುವರು. ಆ ಮೂಲಕ ಕುವೆಂಪು ತನ್ನಲ್ಲಿರುವ ಸಮನ್ವಯ ದೃಷ್ಟಿಯು ಪೂರ್ಣತೆಯನ್ನು ಪಡೆಯಲು ಸಾಧ್ಯವಾಯಿತೆನ್ನುತ್ತಾರೆ.

ವಿವೇಕಾನಂದರ ಮೂಲಕ ಬೌದ್ಧ ಧರ್ಮದ ವ್ಯಾಖ್ಯಾನಗಳನ್ನು ಕುವೆಂಪು ಕಂಡುಕೊಂಡರು. ಹೀಗೆ ಬುದ್ಧನ ತತ್ತ್ವಗಳ ಕಡೆಗೆ ಕುವೆಂಪು ಅವರ ದೃಷ್ಟಿ ಹರಿಯಿತು. ವಿವೇಕಾನಂದರು ನರನಲ್ಲಿ ನಾರಾಯಣನನ್ನು ಕಂಡರು. ಬುದ್ಧ ಎಲ್ಲೂ ತಾನು ದೇವರೆಂದು, ದೇವರನ್ನು ಕಂಡುದಾಗಿ ಪ್ರಸ್ತಾಪಿಸಲಿಲ್ಲ. ಪ್ರತಿಯೊಬ್ಬನ ಸ್ವತಂತ್ರ ನಿರ್ಧಾರವನ್ನು ಗೌರವಿಸುತ್ತಿದ್ದರು. ಯಜ್ಞ ಯಾಗಾದಿಗಳನ್ನು ಖಂಡಿಸಿ, ಅಹಿಂಸೆಯನ್ನು ಬೋಧಿಸಿದರು. ಜಾತೀಯತೆಯನ್ನು ತಿರಸ್ಕರಿಸಿದರು, ಮೌಢ್ಯವನ್ನು ಸಂಹರಿಸಿದರು. ತ್ಯಾಗ, ಸರ್ವಸಮಾನತೆ ಇದು ಬೌದ್ಧ ಮತದ ತತ್ತ್ವಗಳು ಇದು

ಕುವೆಂಪು ಅವರಿಗೂ ಮೆಚ್ಚುಗೆಯಾಯಿತು. ಹೀಗೆ ಬುದ್ಧನಿಂದಲೂ ಕುವೆಂಪು ಚಿಂತನೆಗೆ ಸತ್ವ ದೊರೆಯಿತೆನ್ನಬಹುದು.

ಗಾಂಧೀಜಿಯವರ ಚಿಂತನೆಗಳು ಕೂಡಾ ಕುವೆಂಪು ಅವರ ಬದುಕನ್ನು ರೂಪಿಸಲು ಸಹಾಯಕವಾಗಿವೆ. ಗಾಂಧೀಜಿಯ ವ್ಯಕ್ತಿತ್ವ ಭಾರತೀಯ ಅಧ್ಯಾತ್ಮಿಕ ಶಕ್ತಿಯ ಸಾರಭೂತ ಪ್ರತಿರೂಪವೆನ್ನುವರು ಕುವೆಂಪು. ಅವರ ದೇಶಭಕ್ತಿ, ಸಮಾಜಸೇವೆ, ಸ್ವಾತಂತ್ರ್ಯ ಸಂಪಾದನೆ, ಹರಿಜನೋದ್ಧಾರ, ಸ್ವದೇಶಿ ಚಿಂತನೆ ಖಾದಿ ಇತ್ಯಾದಿ ರಾಜಕೀಯ ಸಾಮಾಜಿಕ ಆರ್ಥಿಕ ಸಂದರ್ಭದಲ್ಲಿ ಅಗತ್ಯವಾದ ಶಾಶ್ವತ ತತ್ತ್ವಗಳನ್ನು ಪ್ರತಿಪಾದಿಸಿದರು. ಆ ತತ್ತ್ವವೇ ಮನಷ್ಯನ ಸಂಪೂರ್ಣ ವಿಕಾಸಕ್ಕೆ ಕಾರಣವೆನ್ನುತ್ತಾರೆ ಕುವೆಂಪು.

ಹೀಗೆ ಕುವೆಂಪು ಅನೇಕ ವಿಭೂತಿ ಪುರುಷರಿಂದ ಪ್ರಭಾವಿತರಾಗಿರುವುದನ್ನು ಕಾಣಬಹುದು. ಆದರೂ ಎಲ್ಲರಿಗಿಂತ ಮೊದಲು ಹಾಗೂ ಅತ್ಯಂತ ಪ್ರಭಾವಿಯಾಗಿ ಕುವೆಂಪು ಬದುಕಿನಲ್ಲಿ ಪ್ರವೇಶಿಸಿದವರು ವಿವೇಕಾನಂದರು. ಕುವೆಂಪು ಹೇಳುವಂತೆ "ಸಹ್ಯಾದ್ರಿಯ ಪರ್ವತ ಶ್ರೇಣಿಯಲ್ಲಿ ಕಿರುತೊರೆಯಾಗಿ ಹುಟ್ಟಿ, ಗಿರಿವನ ಕಂದರಗಳಲ್ಲಿ ಹರಿದುಬಂದು, ನನ್ನ ಜೀವನ ತರಂಗಿಣಿ ಶ್ರೀ ಗುರು ಕೃಪೆಯ ಮಹಾನವಮಿ ಗಂಗಾ ಪ್ರವಾಹಕ್ಕೆ ಸಂಗಮಿಸಿತು. ಅಂತರ್ ವೈಶಾಲ್ಯದಲ್ಲಿ ಅಲ್ಲದಿದ್ದರೂ ಬಾಹ್ಯ ವಿಸ್ತೀರ್ಣದ ದೃಷ್ಟಿಯಿಂದ ಅದುವರೆಗೆ ಕೂಪ ವಾಸಿಯಂತಿದ್ದ ಮಂಡೂಕವು ಮಹಾನದಿ ಸಂಗಮದಿಂದ ಸಮುದ್ರ ಪ್ರವಾಸಿಯಾಯಿತು" ಎನ್ನುವರು. ಬದುಕಿನಲ್ಲಿ ಆಧ್ಯಾತ್ಮಿಕತೆಯ ಆಳ, ಆ ಮೂಲಕ ಚಿಂತನೆಯ ತೀವ್ರತೆ ಬೆಳೆಯಲು, ವಿಶ್ವಮಾನವ ಸ್ವರೂಪ ಹುಟ್ಟಿಕೊಳ್ಳಲು ರಾಷ್ಟ್ರಕವಿಯಾದ ಕುವೆಂಪುವಿಗೆ ಸ್ವಾಮಿ ವಿವೇಕಾನಂದರಿಂದ ಸಾಧ್ಯವಾಯಿತ್ತೆನ್ನಬಹುದು.

ಗ್ರಂಥಸೂಚಿ

೧. ಆಹಿತಾನಲ – (ಸಂ) ಕುವೆಂಪು – ಸಾಹಿತ್ಯ ಸಮೀಕ್ಷೆ;
ವಸಂತ ಪ್ರಕಾಶನ, ಬೆಂಗಳೂರು – ೨೦೦೮

೨. ಕುವೆಂಪು – ಸ್ವಾಮಿ ವಿವೇಕಾನಂದ;
ಶ್ರೀರಾಮಕೃಷ್ಣ ಆಶ್ರಮ; ಮೈಸೂರು – ೨೦೦೫

೩. ಕುವೆಂಪು – ನೆನಪಿನ ದೋಣಿಯಲ್ಲಿ;
ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರು – ೧೯೮೦

೪. ಕುವೆಂಪು – ವಿಭೂತಿ ಪೂಜೆ;
ವೆಸ್ಲಿ ಮತ್ತು ಪಬ್ಲಿಷಿಂಗ್ ಹೌಸ್, ಮೈಸೂರು – ೧೯೫೩

೫. ಕೃಷ್ಣಕುಮಾರ್ ಸಿ.ಪಿ. (ಡಾ|); ಕುವೆಂಪು ಸಾಹಿತ್ಯಾಲೋಕ;
ಚೇತನ ಬುಕ್‌ಹೌಸ್, ಮೈಸೂರು – ೨೦೦೪

೬. ಜವರೇಗೌಡ – ತತ್ತ್ವಜ್ಞಾನಿ ಕುವೆಂಪು ಮತ್ತು ಇತರ ಪ್ರಬಂಧಗಳು;
ಬೆಳಕೆರೆ ಪ್ರಕಾಶನ; ಮೈಸೂರು – ೨೦೦೬

೭. ಜವರೇಗೌಡ – ಕುವೆಂಪು ಮತ್ತು ವಿಭೂತಿ ಪುರುಷರು;
ತುಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು – ೨೦೦೪

೮. ನಾಗಭೂಷಣ ಡಿ.ಎಸ್. – ಕುವೆಂಪು – ಒಂದು ಪುನರನ್ವೇಷಣೆ;
ಲೋಹಿಯಾ ಪ್ರಕಾಶನ, ಬಳ್ಳಾರಿ – ೨೦೦೫

೯. ನಾಯಕ್ ಜಿ.ಎಚ್. (ಸಂ) – ಶತಮಾನದ ಕನ್ನಡ ಸಾಹಿತ್ಯ;
ಶ್ರೀರಾಘವೇಂದ್ರ ಪ್ರಕಾಶನ, ಅಂಕೋಲಾ – ೨೦೦೦

೧೦. ನಿತ್ಯಾನಂದ ಬಿ. ಶೆಟ್ಟಿ (ಸಂ) – ರಾಷ್ಟ್ರ ನಿರ್ವಚನ : ಕುವೆಂಪು ವಾಙ್ಮಯ;
ಆಳ್ವಾಸ್ ಪ್ರಕಾಶನ, ಮೂಡುಬಿದಿರೆ – ೨೦೦೪

೧೧. ಪ್ರಭುಶಂಕರ (ಡಾ) – ಸ್ವಾಮಿ ವಿವೇಕಾನಂದ;
ಚೇತನ ಬುಕ್‌ಹೌಸ್, ಮೈಸೂರು – ೧೯೯೬

೧೨. ಶಿವರುದ್ರಪ್ಪ ಜಿ.ಎಸ್. – ಕುವೆಂಪು ಪುನರಾವಲೋಕನ;
ಅಂಕಿತ ಪುಸ್ತಕ, ಬೆಂಗಳೂರು – ೨೦೦೫

೧೩. ಶಿವರುದ್ರಪ್ಪ ಜಿ.ಎಸ್. (ಸಂ) – ಶ್ರೀ ಕುವೆಂಪು;
ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ – ೨೦೦೩

೧೪. ಶಿವಾ ರೆಡ್ಡಿ ಕೆ.ಸಿ. (ಸಂ) – ಕುವೆಂಪು ಸಮಗ್ರ ಗದ್ಯ;
ಸಂಪುಟ–೨, ಕನ್ನಡ ವಿಶ್ವವಿದ್ಯಾಲಯ, ಹಂಪಿ – ೨೦೦೪

೧೫. ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ;
ಸಂಪುಟ ೧ – ೯, ಶ್ರೀರಾಮಕೃಷ್ಣ ಆಶ್ರಮ, ಮೈಸೂರು – ೧೯೮೮

೧೬. ಸುಂದರಂ ಆರ್.ವಿ.ಎಸ್. (ಸಂ) – ಕುವೆಂಪು ಕರ್ನಾಟಕ;
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು – ೨೦೦೭

೧೭. ಸೋಮನಾಥಾನಂದ – ಸ್ವಾಮಿ ವಿವೇಕಾನಂದರ ಜೀವನ ಚರಿತ್ರೆ;
ಶ್ರೀರಾಮಕೃಷ್ಣ ಆಶ್ರಮ – ಮೈಸೂರು – ೧೯೬೪